ಜನಶಕ್ತಿ



ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 39
ಸೆಪ್ಟೆಂಬರ್ 23, 2012

ಪುಟ 16 ರೂ. 5/-


Blog :ja[illegible]press.com e-mail: js_weekly@yahoo.com




ಯುವ ಭಾರತದ ಭವಿಷ್ಯ ಯುವಜನರೇ ನಿರ್ಧರಿಸಬೇಕು



ವಿವೇಕಾನಂದರಿಗೆ ನಮಿಸುವ ಮೋದಿ ಒಂದು ದೈತ್ಯ ವಂಚನೆ



ಸಾರಿಗೆ ನೌಕರರ ಮುಷ್ಕರ



ಜೆಹಾದಿಗಳ ಬಲವರ್ಧನೆಗೆ ಕಾರಣವಾಗುತ್ತಿರುವ ಅಮೆರಿಕ

ಕರಾವಳಿಯ 'ನೈತಿಕ' ಪೊಲೀಸರು

ರಾಜ್ಯದಲ್ಲಿ ಬರ ಸರ್ಕಾರಕ್ಕೆ ಹಿಡಿದಿದೆ ಗರ

ವಿಶ್ವ ಶಾಂತಿ ಸಮ್ಮೇಳನ: ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣಕ್ಕೆ ಕರೆ

ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣದ ಆಶಯದೊಂದಿಗೆ 1955 ರಿಂದ ಪ್ರತಿ ವರ್ಷ ಜಪಾನಿನ ಹಿರೋಷಿಮಾ-ನಾಗಸಾಕಿ ನಗರಗಳಲ್ಲಿ ಸಂಘಟಿಸಲಾಗುತ್ತಿರುವ 'ವಿಶ್ವ ಶಾಂತಿ ಸಮ್ಮೇಳನ'ಕ್ಕೆ ಭಾರತದಿಂದ ಸಿಐಟಿಯುವನ್ನು ಪ್ರತಿನಿಧಿಸಿದ್ದ ಕರ್ನಾಟಕ ರಾಜ್ಯ ಸಿಐಟಿಯು ಕಾರ್ಯದರ್ಶಿಗಳಾದ ಕಾಂ.ಸೈಯದ್ ಮುಜೀಬ್ ಅವರ ಬರಹದ ಮುಂದುವರಿದ ಭಾಗ.

ಮೂರನೇ ಗೋಷ್ಠಿಯಲ್ಲಿ ನಿಶಸ್ತ್ರೀಕರಣಕ್ಕೆ ಸಹಮತ. ಯುದ್ಧಕ್ಕೆ ವಿರೋಧ, ಶಾಂತಿ ಸೌಹಾರ್ದ ಸಮೃದ್ಧ ಬದುಕಿಗೆ ಸರ್ಕಾರಗಳು ಗಮನ ಹರಿಸಲು ಹಾಗೂ ಸೇನಾ ವೆಚ್ಚಗಳನ್ನು ಕಡಿತಗೊಳಿಸುವುದು ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ಉತ್ತೇಜಿಸಲು ಒತ್ತಾಯಿಸುವ ಅಭಿಪ್ರಾಯ ಮೂಡಿ ಬಂತು.

ಅಮೆರಿಕಾ ಜಗತ್ತಿನ ವಿವಿಧೆಡೆಯಲ್ಲಿ ಅಣ್ವಸ್ತ್ರಗಳ ಪರೀಕ್ಷೆಯಿಂದಾಗಿ ಉಂಟಾಗಿರುವ ನಿರಾಶ್ರಿತರ ಕಲ್ಯಾಣ, ಜೀವಹಾನಿಗೊಳಗಾದವರ ಕುಟುಂಬಗಳ ಅವಲಂಬಿತರಿಗೆ ತಕ್ಕ ಪರಿಹಾರ ನೀಡಬೇಕೆಂಬ ಹಕ್ಕೊತ್ತಾಯವು ಮೂಡಿ ಬಂತು. ಯುಎಸ್ಎ ಸೇನಾ ನೆಲೆಗಳಲ್ಲಿ ಮಾನವಹಕ್ಕುಗಳ ಉಲ್ಲಂಘನೆ ನಿರಂತರವಾಗಿ ಸಾಗಿದೆ. ಜಗತ್ತಿನ ವಿವಿಧೆಡೆ ಹರಡಿಕೊಂಡಿರುವ ಈ ಸೇನಾ ನೆಲೆಗಳು ಆದಿವಾಸಿಗಳು ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತಿವೆ. ಕೃಷಿ, ಮೀನುಗಾರಿಕೆ ಅವಲಂಬಿಸಿದ್ದ ಲಕ್ಷಾಂತರ ಕುಟುಂಬಗಳು ನಿರಾಶ್ರಿತಗೊಳ್ಳುತ್ತಿವೆ. ಸಮುದ್ರದ ವಿಪರೀತ ಮಲಿನತೆಯಿಂದ ಪರಿಸರ ಅಸಮತೋಲನ ಹೆಚ್ಚುತ್ತಿದೆ ಎಂದು ವಿವಿಧ ದೇಶಗಳಿಂದ ಹಾಗೂ ದ್ವೀಪಗಳಿಂದ ಸಮ್ಮೇಳನಕ್ಕೆ ಅಗಮಿಸಿದ್ದ ಪ್ರತಿನಿಧಿಗಳು(ಕೆಲವು ನಿರಾಶ್ರಿತರು ಒಳಗೊಂಡು) ತಮ್ಮ ಅನುಭವಗಳನ್ನು ಹಂಚಿಕೊಂಡರು.

ಆಗಸ್ಟ್ 3ರಂಧು ನಡೆದ ಅಣು ಬಾಂಬಿನ ಪರಿಣಾಮಗಳು, ಹಿಭಾಕುಶರೊಂದಿಗೆ ಸೌಹಾರ್ದತೆ ಹಾಗೂ ವಿಕರಣತೆಯಿಂದ ಉಂಟಾದ ನಷ್ಟವನ್ನು ಸರಿಪಡಿಸುವ ಬಗ್ಗೆ ಗೋಷ್ಠಿ ನಡೆಯಿತು. ವಿವಿಧ ದೇಶಗಳಿಂದ ಆಗಮಿಸಿದ್ದ ಪ್ರತಿನಿಧಿಗಳು ತಮ್ಮ ದೇಶದ ಸಾಮಾಜಿಕ ಹಾಗೂ ರಾಜಕೀಯ ವಿಶ್ಲೇಷಣೆಯೊಂದಿಗೆ ಅಮೆರಿಕಾದೊಂದಿಗೆ ನಡೆಯುತ್ತಿರುವ ಅಣು ಒಪ್ಪಂದಗಳ ಬಗ್ಗೆಯೂ ಹಾಗೂ ಜನತೆಯ ಪ್ರತಿರೋಧಗಳ ಬಗ್ಗೆ ವರದಿ ಮಾಡಿದರು.

ಹತ್ತಾರು ದಿನಗಳ ಕಾಲ ದೂರದ ಊರುಗಳಿಂದ ಕಾಲ್ನಡಿಗೆಯಲ್ಲಿ ಶಾಂತಿ ಸಂದೇಶ ಸಾರುತ್ತ ಸಹಿ ಸಂಗ್ರಹ ಚಳವಳಿಯಲ್ಲಿ ತೊಡಗಿಕೊಂಡಿದ್ದ ತಂಡಗಳು ವೇದಿಕೆಯ ಮೇಲೆ ಬಂದು ತಮ್ಮ ತಮ್ಮ ಬ್ಯಾನರ್, ಪೋಸ್ಟರ್ ಹಿಡಿದು ನಿಂತರೆ ತಂಡದ ನಾಯಕರು ಪಾದಯಾತ್ರೆಯ ಅನುಭವಗಳನ್ನು ವಿವರಿಸುತ್ತಿದ್ದರು. 70 ವರ್ಷದ ಹಿರಿಯರಿಂದ ಹಿಡಿದು 18 ವರ್ಷದ ಯುವಜನರ ಸಮ್ಮಿಲನವು ಇಲ್ಲಿ ಕಾಣಬಹುದಿತ್ತು. ತಂಡವು ವೇದಿಕೆಗೆ ಬಂದಾಗ ಬೆಂಬಲಿಗರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.


2015ರ ಎನ್‌ಪಿಟಿ ಸಂದರ್ಭಕ್ಕೆ ಸಂಪೂರ್ಣ ನಿಶಸ್ತ್ರೀಕರಣಕ್ಕೆ ಒತ್ತಡ ಹೇರುವ ಜನಾಭಿಪ್ರಾಯ ಮೂಡಿಸಲು ಸಹಿ ಸಂಗ್ರಹ ಚಳವಳಿಯನ್ನು ವ್ಯಾಪಕಗೊಳಿಸಬೇಕೆಂಬ ಆಶಯಕ್ಕೆ ಸಹಮತ ವ್ಯಕ್ತವಾಯಿತು. ಈ ಗೋಷ್ಠಿಯ 2ನೇ ಭಾಗವಾಗಿ ವಿವಿಧ ದೇಶಗಳ ಪ್ರತಿನಿಧಿಗಳು ತಮ್ಮ ದೇಶದಲ್ಲಿ ನಡೆದಿರುವ ಶಾಂತಿ ಚಟುವಟಿಕೆಯ ಅನುಭವಗಳನ್ನು ವಿವರಿಸಿದರು. ಯುಕೆ (ಸಿಎನ್‌ಡಿ)ನಿಶಸ್ತ್ರೀಕರಣ ಪರ ಚಳವಳಿಯ ಬಗ್ಗೆ ಮಾತನಾಡಿದ ಬೇನ್ ಪೂಲ್ಲೆ ಅವರು " ಶಿತಲ ಸಮರ 20 ವರ್ಷಗಳ ನಂತರದ ಪರಿಸ್ಥಿತಿ ನಮ್ಮ ಪರವಾಗಿದೆ. ಕಳೆದ ದಶಕಗಳಲ್ಲಿ ಅಫಘಾನಿಸ್ಥಾನ, ಇರಾಕ್, ಲಿಬಿಯಾ ದೇಶಗಳಲ್ಲಿ ಯುದ್ದ-ಸೇನಾ ವೆಚ್ಚಗಳು ಕಂಡಿದ್ದರೆ, ಬ್ರಿಟನ್ ಸರ್ಕಾರದ ಅಣ್ವಸ್ತ್ರಗಳ ಹಾಗು ಯುಎಸ್ ನ್ಯಾಟೋ ವ್ಯೂಹಾತ್ಮಕ ಸಂಬಂಧದ ಬಗ್ಗೆ ಹಿಂದೆಂದಿಗಿಂತಲೂ ಹೆಚ್ಚು ಜನತೆಯ ಪ್ರತಿರೋಧವನ್ನು ಕಾಣಬಹುದಾಗಿದೆ. ಸರ್ಕಾರ ಎಲ್ಲ ಸಾರ್ವಜನಿಕ ವೆಚ್ಚಗಳ ಕಡಿತಕ್ಕೆ ಮುಂದಾಗಿದೆ. ಶೈಕ್ಷಣಿಕ ವೆಚ್ಚ, ವಸತಿ ಸಹಾಯ ಕಡಿತಗೊಳಿಸಲು ಮುಂದಾಗುತ್ತಿದೆ. ಶಾಂತಿ ಬಯಸುವ ಈ ಯೋಜನೆ ವಿರುದ್ದ ವ್ಯಾಪಕ ಜನ ಚಳವಳಿಗಳಿಗೆ ಸಿದ್ಧವಾಗುತ್ತಿವೆ ಎಂದರು."

ಅಂತರರಾಷ್ಟ್ರೀಯ ಅಣುಅಸ್ತ್ರ ವಿರೋಧಿ ವಕೀಲ ಸಂಘ ಜರ್ಮನಿಯ ರಿಯಿನರ್ ಬ್ರೂನ್ ಅವರು ಮಾತನಾಡಿ ರಿಯೋ-20 ರಲ್ಲಿ ನಾವು ನಮ್ಮ ರಾಜಕೀಯ, ನಾಯಕರ ಬೇಜವಾಬ್ದಾರಿತನ ಕಂಡಿದ್ದೇವೆ. ನಾವು ಕುಸಿಯುವ ಮೊದಲೇ ಕಾರ್ಯಾಚರಣೆಗೆ ಇಳಿಯಬೇಕಾಗಿದೆ. ಜಗತ್ತಿನ 20000 ಅಣು ಅಸ್ತ್ರಗಳು ಜಗತ್ತಿನ ಸೇನಾ ವೆಚ್ಚ 1.7 ತ್ರಿಲಿಯನ್ ದಾಟುತ್ತಿರುವಾಗ ಪ್ರತಿ ಸೆಕೆಂಡಿಗೆ 20 ಮಕ್ಕಳು ಹಸಿವಿನಿಂದ ಸಾವನ್ನಪ್ಪಿದ್ದಾರೆ. 2 ಬಿಲಿಯನ್ ಜನರಿಗೆ ಶುದ್ಧ ಕುಡಿಯುವ ನೀರಿಲ್ಲ. ಹೀಗಿರುವಾಗ ಯುಎಸ್ಎ 700 ಬಿಲಿಯನ್ ಡಾಲರ್‌ಗಳ ಅಣ್ವಸ್ತ್ರಗಳ ಆಧುನೀಕರಣಕ್ಕೆ ವ್ಯಯಿಸಲು ಹೊರಟಿದೆ.

2013ರಲ್ಲಿ ಜಿನಿವಾ ಸಿದ್ದತಾ ಸಭೆಯು ನಿಶಸ್ತ್ರೀಕರಣಕ್ಕೆ ಸಂಬಂಧಿಸಿದಂತೆ ನಿರ್ಣಯಕ್ಕೆ ಸಿದ್ದತೆ ನಡೆಸಿದೆ. ಇದಲ್ಲದೆ ಅಂತಾರಾಷ್ಟ್ರೀಯ ಶಾಂತಿ ಚಳವಳಿ ಮತ್ತು ನಾಗರಿಕ ಸಮಾಜ 2015ರಲ್ಲಿ ಬಹಿಷ್ಕರಿಸಿ ಪರ್ಯಾಯವಾಗಿ ಇದರ ವಿರುದ್ದ ಚಳವಳಿಗೆ ಮುಂದಾಗ ಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಫ್ರಾನ್ಸ್ ಶಾಂತಿ ಚಳವಳಿಯ ವಾಜೋಪ್ ವನ್ತಾನ್ಸ್, ಕೊರಿಯಾದ ಗಂಗ್ ಜೀಯಾನ, ಮಹಿಳಾ ಸಮಿತಿ, -ಯಾಂಗ್ ಹಿಜಂಗ ಮಾತನಾಡಿದರು.

ಅಧ್ಯಕ್ಷೀಯ ಮಂಡಳಿಯಲ್ಲಿ ಭಾರತ ಸಿಐಟಿಯು ಶಶಿಕುಮಾರ್, ವಲಿಯಾಬೆರಂಬಿಲ್ ಹಾಗೂ ನಾರ್ವೇಯ ಸೈನ್ ರೂಪವೇರ್ ಅವರು ಇದ್ದರು. ಅಂದು ಸಂಜೆ ಶಾಂತಿಗಾಗಿ ಯುವ ಜನತೆ ರಿಂಗ್ ಲಿಂಗ್ ಝಿರಾದಲ್ಲಿ ಯುವ ಜನರ ರ್‍ಯಾಲಿ ನಡೆಯಿತು.



ಆಗಸ್ಟ್ 5ರಂದು 1 ಗಂಟೆಯಿಂದ ಅಣ್ವಸ್ತ್ರ ನಿಶಸ್ತ್ರಿಕರಣ ಸರ್ಕಾರಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಕುರಿತು ಗೋಷ್ಠಿ ನಡೆಯಿತು. ಜಪಾನ್‌ನ ಕಶಿಬಾ ದೇಶದ ರಾಯಭಾರಿ ಜಓಸ್ಟ್ ಅನ್ಸನ್ ಫರ್ನಾಂಡಿಸ್, ಮೆಕ್ಸಿಕೋ ದೇಶದ ರಾಯಭಾರಿ ಕ್ಯೂಡೇ ಹೆಲ್ಲಾರ್, ಜಪಾನ್ ಅಣು ಮತ್ತು ಹೈಡ್ರೋಜನ್ ಬಾಂಬ್ ವಿರೋಧಿ ಕೌನ್ಸಿಲ್‌ನ ಹಿರೋಶಿಮಾ ಕಟ್ಟಿಕ್ನಿ ಅವರು ವಿಷಯ ಮಂಡಿಸಿದರು.

ಅಂದು 14 ವಿಷಯಗಳ ಕುರಿತು ಸಮಾನಾಂತರ ಗೋಷ್ಠಿಗಳು ನಡೆದವು.

ಆಗಸ್ಟ್ 6ರಂದು ಬೆಳಗ್ಗೆ 7 ಗಂಟೆಗೆ ಹಿರೋಶಿಮಾ ನಗರದ ತುಂಬಾ ಸಹಸ್ರಾರು ಜನರು ಹಿರೋಶಿಮಾ ಶಾಂತಿ ಉದ್ಯಾನವನದಲ್ಲಿ ಆಯೋಜಿಸಿದ್ದ ಬಹುತ್ವ ಶಾಂತಿ ಸಭೆ ಜರುಗಿತು. ಸರಿಸುಮಾರು 70ಕ್ಕೂ ಹೆಚ್ಚು ದೇಶಗಳು ಬೆಂಬಲಿಸಿದವು. ಈ ಕಾರ್ಯಕ್ರಮದ ಆರಂಭದಲ್ಲಿ ಶಾಂತಿ ಗೀತೆಗಳನ್ನು ಹಾಡಲಾಯಿತು. 8 ಗಂಟೆಗೆ ಆರಂಭವಾದ ಕಾರ್ಯಕ್ರಮದಲ್ಲಿ 8.15ಕ್ಕೆ ಸರಿಯಾಗಿ ಮೌನಾಚರಣೆ ನಂತರ ಶಾಂತಿ ಗಂಟೆ-ನಾದ ಮೊಳಗಿಸಲಾಯಿತು. ನಂತರ ಜಪಾನ್ ದೇಶದ ಪ್ರಧಾನಿಯೂ ಸೇರಿದಂತೆ, ಹಲವು ಗಣ್ಯರು ಶಾಂತಿಗಾಗಿ ಪುನರುಚ್ಚರಿಸಿದರು.

ಹಿರೋಶಿಮಾ ನಗರದ ಮಹಾ ಪೌರರು ಶಾಂತಿ ಘೋಷಣೆ ವಾಚಿಸಿದರು. 2020 ಸಂಪೂರ್ಣ ನಿಶಸ್ತ್ರೀಕರಣಕ್ಕೆ 5300 ಮುನಿಸಿಪಾಲಿಟಿಗಳು ಬೆಂಬಲಿಸಿವೆ. ಐದು ಶತಕೋಟಿಗೂ ಹೆಚ್ಚಿನ ಜನರು ಶಾಂತಿ ಬಯಸುತ್ತಿದ್ದಾರೆ ಎಂದು ಪ್ರತಿಪಾದಿಸಿದರು.

ಜಪಾನ್ ದೇಶದ ಪ್ರಧಾನಿ ಮಾತನಾಡುತ್ತಾ ಅಮೆರಿಕಾದೊಂದಿಗೆ ವ್ಯೂಹಾತ್ಮಕ ಸಂಬಂಧ ಕೈಬಿಡಿ ಅಣ್ವಸ್ತ್ರ ಮುಕ್ತ ಜಪಾನ್ ನಿರ್ಮಿಸಿ ಎಂಬ ಘೋಷಣೆಗಳೊಂದಿಗೆ ಪ್ರತಿಭಟನಾಕಾರರು ಸದ್ದು ಮಾಡಿದ್ದು, ಎಲ್ಲರ ಗಮನ ಸೆಳೆಯಿತು.

ಯುಎನ್ ಪ್ರಧಾನ ಕಾರ್ಯದರ್ಶಿಗಳ ಶಾಂತಿ ಸಂದೇಶವನ್ನು ವಾಚಿಸಲಾಯಿತು. ನಂತರ ಶಾಂತಿ ಗೀತೆಯೊಂದಿಗೆ ಸುಡು ಬಿಸಿಲಿನಲ್ಲಿ ನಡೆದ ಸಭೆ 8.45ಕ್ಕೆ ಮುಕ್ತಾಯವಾಯಿತು.

ಆಗಸ್ಟ್ 6ರಂದು ಹಿರೋಶಿಮಾ ಶಾಂತಿ ಉದ್ಯಾನವನ ಸುತ್ತಲೂ ವಿಭಿನ್ನ ಕಾರ್ಯಕ್ರಮಗಳು ಶಾಂತಿ ಗೀತೆಗಳು ಬಿತ್ತಿ ಪತ್ರಗಳು, ಪೇಪರ್, ಜನತೆ ಜಗತ್ತಿಗೆ ಶಾಂತಿ ಯನ್ನು ಸಾರಿ ಹೇಳಲು ಬಯಸುತ್ತಿದ್ದರು. ಎಂದಿಗೂ ಮತ್ತೆಂದಿಗೂ ಹೀಗೆ ಆಗದಿರಲಿ ಹಿರೋಶಿಮಾ ಎಂದು ಆಶಿಸಲಾಯಿತು.

ಇದರ ನಂತರ ಸ್ಟೇಡಿಯಂನಲ್ಲಿ ಜರುಗಿದ 'ಮನುಷ್ಯ ಅಣ್ವಸ್ತ್ರಗಳೊಂದಿಗೆ ಬದುಕಲಾರ ಅಣ್ವಸ್ತ್ರಗಳ ನಿಷೇಧಿಸಿ' ಸಂಬಂಧ ಗೋಷ್ಠಿ ನಡೆಯಿತು.

ಹಿಭಾಕುಶರ ಕರುಳು ಹಿಂಡುವ ತಮ್ಮ ಅನುಭವಗಳು, ಕಿಕ್ಕಿರಿದು ತುಂಬಿದ ಸಭಿಕರ ಕಣ್ಣಗಳನ್ನು ತೇವಗೊಳಿಸಿದವು.

ವಿವಿಧಡೆ ಅಮೆರಿಕಾ ಸೇನಾ ನೆಲೆಗಳಿಂದ ಹಾಗು ಅಣ್ವಸ್ತ್ರಗಳ ಪ್ರಯೋಗದಿಂದ ಸೃಷ್ಟಿಯಾದ ಹೊಸ ಹೊಸ ಹಿಬಾಕುಶರ ಅನುಭವಗಳ ಹಂಚಿಕೆಯು ನಡೆಯಿತು.

ಯುವಜನ ವಿದ್ಯಾರ್ಥಿ ಸಮುದಾಯ ಪ್ರತಿನಿಧಿಗಳು ಸಮಾವೇಶದಲ್ಲಿ ಆಡಿದ ಮಾತುಗಳು ಗಾಢ ಕತ್ತಲೆಯಲ್ಲಿ ಮಿಣುಕು ದೀಪಗಳು ಸೂಸುವ ದಾರಿಯಂತೆ ಹೊಸ ಕನಸುಗಳ ಕಟ್ಟಲು ಪೂರಕವಾಗಿದ್ದವು.

ವಿ ವಿಲ್ ಲೀವ್ ಇನ್ ಪೀಸ್. ವಿ ವಿಲ್ ಲೀವ್ ಇನ್ ಪೀಸ್ ಎಂದು ಕೈ ಕೈ ಹಿಡಿದು ಸಭಿಕರೆಲ್ಲ ಹಾಡು ಹಾಡುತ್ತ ಹಿರೋಶಿಮಾ ದಿನಚರಣೆ ಗೋಷ್ಠಿಗೆ ಮಂಗಳ ಹಾಡಲಾಯಿತು.

ರಾತ್ರಿ 7 ಗಂಟೆ ನದಿಯ ಪಕ್ಕದಲ್ಲಿ ಲ್ಯಾಡಿನ್ ದೀಪವನ್ನು ಚೌಕಕಾರದ ಕಾಗದ ಬೋಟ್ ಹಾಕಿ ಶಾಂತಿ ಸಂದೇಶದೊಂದಿಗೆ ತೇಲಿ ಬಿಡುವ ದೃಶ್ಯ ಬೌದ್ಧ ಬಿಕ್ಕುಗಳು ಕಪ್ಪು ಬಟ್ಟೆ ತೊಟ್ಟು ಅಲ್ಲಲ್ಲಿ ಕುಳಿತು ಶಾಂತಿಗಾಗಿ ಪ್ರಾರ್ಥಿಸುತ್ತಿದ್ದರೆ ಹಿರೋಶಿಮಾ ಡೂಮ್‌ನ ಬಳಿ ಚಿಕ್ಕ ಮಕ್ಕಳು ಕ್ಯಾಂಡಲ್ ಹಚ್ಚಿ ಕುಳಿತದ್ದು.. ಎಂತಹ ಕಲ್ಲು ಹೃದಯಕ್ಕೆ ತಟ್ಟಿ ಹೇಳುತ್ತಿತ್ತು ಅಣು ಯುದ್ದ ಬೇಡ ಮಾನವೀಯತೆಯ ನಾಶ ಬೇಡವೆಂದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಮನುಷ್ಯತ್ವ ಇಲ್ಲದ ಸಮಾಜ !

ನಮ್ಮದು ಒಂದು ಮಾನವ ಸಮಾಜ ಹೌದು. ಆದರೆ ಅದೊಂದು ಮಾನವೀಯ ಸಮಾಜ ಅಲ್ಲ. ಇಲ್ಲಿ ಮನುಷ್ಯತ್ವ ಇಲ್ಲ. ಹುಡುಕಿದರೂ ಹಗಲೊತ್ತಿನಲ್ಲಿ ದೀಪ ಹಚ್ಚಿ; ಅದು ಸಿಗದು. ಮನುಷ್ಯರು ಇಲ್ಲಿ ಪಶುಗಳಾಗಿದ್ದಾರೆ ಎಂದು ಹೇಳಿದರೆ, ಅದು ದೊಡ್ಡ ತಪ್ಪು, ಪಶುಲೋಕಕ್ಕೇ ಅವಮಾನ. ಏಕೆಂದರೆ ಮನುಷ್ಯರಲ್ಲಿ ಇಲ್ಲದ ಅನುಕಂಪ ಕೆಲವೊಮ್ಮೆ ಪಶುಗಳಲ್ಲಿ ಕಾಣಸಿಗುತ್ತದೆ. ಹೆಣ್ಣು ಬೆಕ್ಕೊಂದು ಹಸಿದ ನಾಯಿ ಮರಿಗಳಿಗೆ ಹಾಲುಣಿಸುವುದನ್ನು ನೋಡಿರುತ್ತೇವೆ. ಹೆಣ್ಣು ನಾಯಿ ಹಂದಿ ಮರಿಗಳಿಗೆ ಹಾಲುಣಿಸುವುದನ್ನು ನೋಡಿರುತ್ತೇವೆ. ಇತ್ತೀಚೆಗೆ ಕೋತಿಯೊಂದು ಹಸುವಿಗೆ ಹುಲ್ಲು ತಿನ್ನಿಸುವುದನ್ನು ಚಿತ್ರ ಸಹಿತವಾಗಿ ಪ್ರಮುಖ ಪತ್ರಿಕೆಯೊಂದು ಪ್ರಕಟಿಸಿದ್ದನ್ನು ನೋಡಿದ್ದೇವೆ. ಮಾನವರಲ್ಲಿ ಮಾನವೀಯತೆ ಮಾಯವಾಗುತ್ತಿರುವಾಗ ಪ್ರಕೃತಿ ನಮ್ಮನ್ನು ಎಚ್ಚರಿಸುತ್ತಿರುವಂತೆ ಕಾಣುತ್ತದೆ.

ಸಾಲದ ಬಾಧೆ ತಾಳಲಾರದೆ, ತನ್ನಿಬ್ಬರು ಪುಟ್ಟ ಮಕ್ಕಳನ್ನು ಉಸಿರುಗಟ್ಟಿಸಿ ಕೊಂದ ದಂಪತಿ, ನಂತರ ತಾವೂ ನೇಣು ಹಾಕಿಕೊಡು ಆತ್ಮಹತ್ಯೆ ಮಾಡಿಕೊಂಡ ಹೃದಯ ವಿದ್ರಾವಕ ಘಟನೆ ಈ ಸೋಮವಾರ ಬೆಂಗಳೂರು ಸಮೀಪದಲ್ಲಿ ನಡೆದಿದೆ. ವೃತ್ತಿಯಿಂದ ನೇಕಾರನಾದ ಮಂಜುನಾಥ್ ವಿದ್ಯುತ್ ಮಗ್ಗ ಸ್ಥಾಪನೆ ಮಾಡಿಕೊಳ್ಳಲು ಸಾಲ ಮಾಡಿದ್ದ. ಗಂಡನ ಸಾಲ ತೀರಿಸಲು ಗಾರ್ಮೆಂಟ್ ಫ್ಯಾಕ್ಟರಿಯೊಂದರಲ್ಲಿ ಕೆಲಸಮಾಡುತ್ತಿದ್ದ ಸತ್ಯವತಿ ಸ್ತ್ರೀ ಶಕ್ತಿ ಸಂಘದಿಂದ ಸಾಲ ಮಾಡಿಕೊಂಡಿದ್ದು ಅದನ್ನು ತೀರಿಸಲು ಸ್ತ್ರೀ ಶಕ್ತಿ ಸಂಘದಿಂದ ಆಕೆಯ ಮೇಲೆ ಒತ್ತಡ ಹೆಚ್ಚಾಗಿತ್ತು ಎಂದು ವರದಿಯಾಗಿದೆ. ಆಂಗ್ಲ ಪತ್ರಿಕೆಯೊಂದು ಈ ಘಟನೆಯನ್ನು ಮುಖಪುಟದ ಪ್ರಥಮ ಸುದ್ದಿಯಾಗಿ ಪ್ರಕಟಿಸಿದೆ. ಅದು ಪತ್ರಿಕೆಯ ಜನಪರ ಧೋರಣೆಯ ದ್ಯೋತಕವಾಗಿದೆ. ನಮ್ಮ ಅನೇಕ ಕನ್ನಡ ದಿನ ಪತ್ರಿಕೆಗಳಿಗೆ ಅದೊಂದು ಮುಖಪುಟದಲ್ಲಿ ಪ್ರಕಟವಾಗಬೇಕಾದ ಪ್ರಮುಖ ಸುದ್ದಿ ಆಗಿರಲಿಲ್ಲ. ಸಾಲ ಮಾಡಿದ ತಪ್ಪಿಗೆ ಎಂತಹ ಘೋರ ಶಿಕ್ಷೆ ? ಹೆತ್ತ ತಂದೆ–ತಾಯಿಯರ ಕೈಯಲ್ಲೇ ಎರಡು ಎಳೆಯ ಜೀವಗಳ ಬಲಿ. ಆ ಕುಟುಂಬದ ಸುತ್ತ–ಮುತ್ತ ಸ್ವಲ್ಪ ಮಾನವೀಯತೆ ಸುಳಿದಿದ್ದರೆ ಈ ದುರಂತ ತಪ್ಪುತ್ತಿತ್ತು. ಇನ್ನೊಂದು ಆಂಗ್ಲ ಪತ್ರಿಕೆ ವರದಿ ಮಾಡಿರುವ ಪ್ರಕಾರ ಬೆಂಗಳೂರಿನಲ್ಲಿ ಕಳೆದ 2 ವರ್ಷಗಳಲ್ಲಿ ಸಾಲಬಾಧೆ ತಾಳಲಾರದೆ ಒಂದೇ ಕುಟುಂಬದ ಸದಸ್ಯರು ಆತ್ಮಹತ್ಯೆ ಮಾಡಿಕೊಂಡ 40 ಪ್ರಕರಣಗಳು ಸಂಭವಿಸಿವೆ. ಜಾತಿಗೊಂದರಂತೆ ಸ್ಥಾಪನೆಯಾಗುತ್ತಿರುವ ಮಠಗಳಲ್ಲಿ, ರಾಜಕೀಯ ಪಕ್ಷಗಳು ಸಂಘಟಿಸುತ್ತಿರುವ ಜಾತಿವಾರು ಸಮಾವೇಶಗಳಲ್ಲಿ ಈ ದುರಂತ ಘಟನೆಗಳ ಪ್ರಸ್ತಾಪವಾಗುವುದಿಲ್ಲ. ಏಕೆಂದರೆ ಅಲ್ಲಿ ಮನುಷ್ಯನಿಲ್ಲ.

ಮಾರುಕಟ್ಟೆ ಪ್ರಧಾನ ನಮ್ಮ ಈ ಸಮಾಜದಲ್ಲಿ ಮನುಷ್ಯತ್ವಕ್ಕೆ ಎಲ್ಲಿದೆ ಬೇಡಿಕೆ.? ಎಲ್ಲಿದೆ ಬೆಲೆ? ಮನುಷ್ಯತ್ವದ ಆಚರಣೆಯಿಂದ ಲಾಭ ಸಿಗುತ್ತಾ? ಬರದ ಬೇಗೆಯಿಂದ ಜನ–ದನ ತತ್ತರಿಸುತ್ತಿರುವಾಗ ನಮ್ಮ ಮಂತ್ರಿ ಮಹೋದಯರು, ಶಾಸಕ ಶಿರೋಮಣಿಗಳು ವಿದೇಶಕ್ಕೆ ಹಾರುತ್ತಾರೆ ಮತ್ತು ಅಲ್ಲಿ ಮೋಜು ಮಸ್ತಿ ನಡೆಸುತ್ತಾರೆ ಇದೆಯಾ ಈ ಜನಪ್ರತಿನಿಧಿಗಳಿಗೆ ಕಿಂಚಿತ್ತೂ ಮನುಷ್ಯತ್ವ? ಗೋಹತ್ಯೆ ತಡೆಯುವ ಹೆಸರಿನಲ್ಲಿ ಮನುಷ್ಯ ಹತ್ಯೆ ಮಾಡಲು ಹೇಸದ ಜನಗಳಲ್ಲಿ ಇದೆಯಾ ಮನುಷ್ಯತ್ವ? ಭಿನ್ನ ಜಾತಿಯ ಯುವಕ ಯುವತಿಯರು ಪರಸ್ಪರ ಮೆಚ್ಚಿಕೊಂಡು ಮದುವೆಯಾಗಿ ಸಂಸಾರ ಹೂಡಲು ಮುಂದಾದಾಗ ಅವರನ್ನು ಕೊಚ್ಚಿಹಾಕಿ 'ಮರ್ಯಾದೆಗಾಗಿ ಹತ್ಯೆ' ಎನ್ನುವ ಈ ಸಮಾಜದಲ್ಲಿ ಎಲ್ಲಿದೆ ಮನುಷ್ಯತ್ವ? ಎಲ್ಲಿದೆ ಮಾನವೀಯತೆ? ಮೋಸಗಾರ ಜ್ಯೋತಿಷಿಗಳ ಮಾತುಗಳಿಗೆ ಮರುಳಾಗಿ ನಿಧಿಗಾಗಿ, ಐಶ್ವರ್ಯಕ್ಕಾಗಿ ತಮ್ಮ ಮಕ್ಕಳನ್ನು ಅಥವ ನೆರೆಮನೆಯ ಮಕ್ಕಳನ್ನು ಬಲಿಕೊಡಲು ಹಿಂಜರಿಯದ ಮನಸ್ಸುಗಳ ನಡುವೆ ಎಲ್ಲಿದೆ ಮನುಷ್ಯತ್ವ? ಪುರುಷ ಪ್ರಧಾನ ಮೌಲ್ಯಗಳ ವಿಜೃಂಭಿಕೆಯಲ್ಲಿ ತಾಯಿಯ ಹೊಟ್ಟೆಯಲ್ಲಿರುವ, ಏನನ್ನೂ ಅರಿಯದ ಹೆಣ್ಣು ಭ್ರೂಣವನ್ನು ಹತ್ಯೆಮಾಡಲು ಬಯಸುವ ಕಲ್ಲು ಹೃದಯಗಳಲ್ಲಿ ಎಲ್ಲಿದೆ ಮಾನವೀಯತೆಗೆ ಸ್ಥಾನ–ಮಾನ? ಹೆಣ್ಣನ್ನು 'ತಾಯಿ–ದೇವಿ' ಎಂದು ಪಾಠ ಹೇಳುವವರು ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ಅದೇ ಅಮಾಯಕ ಹೆಣ್ಣು ಮಕ್ಕಳ ಬಟ್ಟೆಗಳನ್ನು ಹರಿದು ಹಾಕಿ ಅವರು ಮೇಲೆ ಹಲ್ಲೆ ಮಾಡುವ ಪುಂಡರನ್ನು ಸಮರ್ಥಿಸುವವರ ನಡುವೆ ಮನಷ್ಯತ್ವ ಜೀವಂತವಾಗಿರಬಲ್ಲದೆ? ಅವರು ಅಸ್ಪೃಶ್ಯರು ಕೀಳು ಜಾತಿಯಲ್ಲಿ ಹುಟ್ಟಿದವರು ಎಂದು ನಮ್ಮಂತೇ ಇರುವ ಮನಷ್ಯರನ್ನು ಪಶುಗಳಿಗಿಂತ ಕೀಳಾಗಿ ಕಾಣುವ ನಮ್ಮ ನಡುವೆ ಮನುಷ್ಯತ್ವವನ್ನು, ಮಾನವೀಯತೆಯನ್ನು ಹುಡುಕಿದರೆ ಅದು ಸಿಕ್ಕತೇ?

ಮನುಷ್ಯ ಸಮಾಜದಲ್ಲಿ ಮನುಷ್ಯತ್ವವೇ ಇಲ್ಲವಾಗಿದ್ದರೆ ಅದನ್ನು ಮತ್ತೆಲ್ಲಿ ಹುಡುಕುವುದು? ಉಪ್ಪು ತನ್ನ ಗುಣವನ್ನು ಕಳೆದುಕೊಂಡರೆ ಮತ್ತ್ಯಾವುದರಿಂದ ಅದನ್ನು ಉಪ್ಪಾಗಿಸಲು ಸಾಧ್ಯ? ಕಳೆದುಕೊಂಡಿರುವುದನ್ನು ಕಳೆದುಕೊಂಡಲ್ಲಿಯೇ ಹುಡುಕಬೇಕು. ಎಷ್ಟೇ ಬೆಲೆ ತೆತ್ತಾದರೂ ನಾವು ನಮ್ಮ ನಡುವೆ ಮನುಷ್ಯತ್ವವನ್ನು ಸೃಷ್ಟಿಸಿಕೊಳ್ಳಬೇಕು. ಇನ್ನೊಬ್ಬರ ನೋವನ್ನು ಅರಿಯುವ, ಅವರ ಕಷ್ಟ–ನಷ್ಟಗಳಲ್ಲಿ ಪಾಲ್ಗೊಳ್ಳುವ, ಅವರ ಆತಂಕಗಳಿಗೆ ಮಿಡಿಯುವ ಹೃದಯಗಳು ನಮ್ಮದಾಗಬೇಕು. ನಮ್ಮ ಜಾತಿ, ಧರ್ಮ, ಭಾಷೆ, ಬಣ್ಣಗಳ ಬೇಲಿಗಳನ್ನು ಬುಡಮಟ್ಟದಿಂದ ಕಿತ್ತುಹಾಕುವ ಕಿಚ್ಚನ್ನು ಹೊತ್ತಿಸಿಕೊಂಡ ಕೆಂಡಗಳಾಗಬೇಕು ನಾವು. ಆರ್ಥಿಕ ಬಿಕ್ಕಟ್ಟಿಗೆ ಸಿಕ್ಕಿಹಾಕಿಕೊಂಡವರು, ಪರೀಕ್ಷೆಗಳಲ್ಲಿ ಪಾಸಾಗದ ವಿದ್ಯಾರ್ಥಿಗಳು, ಉದ್ಯೋಗ ಸಿಗದೆ ಕಂಗಾಲಾದ ನಿರುದ್ಯೋಗಿಗಳು, ಭಗ್ನ ಪ್ರೇಮಿಗಳು, ಲಿಂಗ ತಾರತಮ್ಯಕ್ಕೆ, ವರದಕ್ಷಿಣೆ ಪಿಡುಗಿಗೆ ಒಳಗಾಗಿ ನೊಂದ ಅಕ್ಕ–ತಂಗಿಯರು, ಜಾತಿ ದಮನಕ್ಕೆ ಒಳಗಾಗಿ ಅವಮಾನಿತರಾದವರು, ಕೋಮು ದಳ್ಳುರಿಗೆ ಬಲಿಯಾಗಿ ಹತಾಶರಾದವರು– ಹೀಗೆ ಭಿನ್ನ ಭಿನ್ನವಾದ ಪರಿಸ್ಥಿತಿಯಿಂದ ಖಿನ್ನರಾದವರು ಜೀವನದಲ್ಲಿ ಜಿಗುಪ್ಸೆ ಹೊಂದಿ ಆತ್ಮಹತ್ಯೆ ಮಾಡಲು ಮುಂದಾಗುವವರ ಜೀವರಕ್ಷಕರಾಗ ಬೇಕು ನಾವು. ●

ರಾಜ್ಯದಲ್ಲಿ ಬರ : ಸರ್ಕಾರಕ್ಕೆ ಹಿಡಿದಿದೆ ಗರ

ಬರ ನಿರ್ವಹಣೆಗೆ 11,200 ಕೋಟಿ ರೂ ನೆರವು ಕೇಳಿದರೆ, ಕೇಂದ್ರ ಸರ್ಕಾರ ಕೊಟ್ಟಿದ್ದು ಕೇವಲ 280 ಕೋಟಿ ರೂ ಎಂದು ಒಂದನೇ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಕಳವಳ ವ್ಯಕ್ತಪಡಿಸಿದ್ದಾರೆ. ಈಶ್ವರಪ್ಪ ಹೇಳಿಕೆ ಪೂರ್ಣ ಸತ್ಯವಲ್ಲ. ಕೇಂದ್ರ ಸರ್ಕಾರ ಇದುವರೆಗೆ ಎರಡು ಕಂತುಗಳಲ್ಲಿ ಒಟ್ಟು 352 ಕೋಟಿ ರೂ ಹಣ ಬಿಡುಗಡೆ ಮಾಡಿದೆ. ರಾಜ್ಯದ 176 ತಾಲ್ಲೂಕುಗಳ ಪೈಕಿ 17 ತಾಲ್ಲೂಕುಗಳನ್ನು ಹೊರತುಪಡಿಸಿ ಉಳಿದ 157 ರಲ್ಲಿ ಆವರಿಸಿಕೊಂಡಿರುವ ಭೀಕರ ಬರವನ್ನು ನಿರ್ವಹಿಸಲು ಕೇಂದ್ರ ಸರ್ಕಾರ ಇದುವರೆಗೆ ನೀಡಿದ ನೆರವು ಏನೇನು ಸಾಲದು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಬರ ನಿರ್ವಹಣೆಗಾಗಿ ರಾಜ್ಯ ಸರ್ಕಾರ ಇದುವರೆಗೆ ಖರ್ಚು ಮಾಡಿದ್ದು ಎಷ್ಟು ?


ಜಗದೀಶ್ ಶೆಟ್ಟರ್ ಸರ್ಕಾರ ಬಿಡುಗಡೆ ಮಾಡಿರುವ 100 ಕೋಟಿ ರೂ. ಸೇರಿ 30 ಜಿಲ್ಲೆಗಳಿಗೆ ಒಟ್ಟು 452.98 ಕೋಟಿ ರೂ. ಬರ ನಿರ್ವಹಣೆಗಾಗಿ ಒದಗಿಸಲಾಗಿದೆ. ಅದರಲ್ಲಿ ಸೆಪ್ಟೆಂಬರ್ 1 ರ ವರೆಗೆ ಬರ ನಿರ್ವಹಣೆಗಾಗಿ ಖರ್ಚು ಮಾಡಿರುವುದು 250.97 ಕೋಟಿ ರೂ. ಮಾತ್ರ. ಬರ ಪೀಡಿತ ಪ್ರದೇಶಗಳಿಗೆ ಕುಡಿಯುವ ನೀರು, ಜಾನುವಾರುಗಳಿಗೆ ಮೇವು, ಕೂಲಿಕಾರರಿಗೆ ಕೆಲಸ ಒದಗಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ರಾಜ್ಯ ಸರ್ಕಾರ ಬರ ನಿರ್ವಹಣೆಗಾಗಿ ತನ್ನ ಬೊಕ್ಕಸದಿಂದ ಬಿಡುಗಡೆ ಮಾಡಿದ್ದು ಕೇವಲ 100 ಕೋಟಿ ರೂ. ಮಾತ್ರ. ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣದಲ್ಲಿ ವೆಚ್ಚ ಮಾಡಿದ ಹಣದ ಕುರಿತು ಲೆಕ್ಕ ತೋರಿಸಲು ಸಹ ಸರ್ಕಾರ ವಿಫಲವಾಗಿದೆ. ವೆಚ್ಚ ಮಾಡಿದ ಹಣದ ಲೆಕ್ಕ ತೋರಿಸದೆ ಕೇಂದ್ರ ಸರ್ಕಾರ ಹೆಚ್ಚುವರಿ ಹಣ ಬಿಡುಗಡೆ ಮಾಡುವುದಿಲ್ಲ ಎಂಬುದು ಈಶ್ವರಪ್ಪ ಅವರಿಗಾಗಲಿ, ಮುಖ್ಯಮಂತ್ರಿ ಶೆಟ್ಟರ್ ಅವರಿಗಾಗಲಿ ತಿಳಿದಿಲ್ಲವೆ ?.

ಬರ ನಿರ್ವಹಣೆಯ ವಿಷಯದಲ್ಲಿ ಮಾತ್ರವಲ್ಲ ಘೋಷಿತ ಅಭಿವೃದ್ಧಿ ಯೋಜನೆಗಳ ನಿರ್ವಹಣೆಯೂ ಸಹ ಆಮೆವೇಗದಲ್ಲಿಯೂ ನಡೆಯುತ್ತಿಲ್ಲ. ಪ್ರಸಕ್ತ ಹಣಕಾಸು ವರ್ಷದ ಮೊದಲ 3 ತಿಂಗಳ ಅವಧಿಯಲ್ಲಿ ಸರ್ಕಾರ ಯೋಜನಾ ವೆಚ್ಚದ ಭಾಗವಾಗಿ ಕೇವಲ 3,320 ಕೋಟಿ ರೂ. ಗಳನ್ನು ಮಾತ್ರ ಖರ್ಚುಮಾಡಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಇದೇ ಅವಧಿಯಲ್ಲಿ 4,150 ಕೋಟಿ ರೂ. ಗಳನ್ನು ಖರ್ಚು ಮಾಡಲಾಗಿತ್ತು. ಈ ಸಲದ 1,02,742 ಕೋಟಿ ರೂ.ಗಳ ಬಜೆಟ್‌ನಲ್ಲಿ ಘೋಷಿಸಲಾದ ಯೋಜನೆಗಳ ಅನುಷ್ಠಾನಕ್ಕಾಗಿ ಹೆಚ್ಚು ಹಣ ವೆಚ್ಚವಾಗಬೇಕಾಗಿತ್ತು.

ಆದರೆ, ಈ ಅವಧಿಯಲ್ಲಿ, ಯೋಜನೇತರ ವೆಚ್ಚ ಹೆಚ್ಚಾಗಿದೆ. ಹಿಂದಿನ ವರ್ಷ ಇದೇ 3 ತಿಂಗಳ ಅವಧಿಯಲ್ಲಿ 8,937 ಕೋಟಿ ರೂ. ಖರ್ಚಾಗಿದ್ದರೆ ಈ ವರ್ಷ 10,448 ಕೋಟಿ ರೂ. ಖರ್ಚಾಗಿದೆ. ಇದು ಆರೋಗ್ಯಕರ ಬೆಳವಣಿಗೆಯಲ್ಲ. ಆಡಳಿತ ನಿರ್ವಹಣೆಗೆ ಆಗುವ ನಿತ್ಯದ ವೆಚ್ಚವನ್ನು ಆದಷ್ಟು ಕಡಿತ ಮಾಡಿ ಯೋಜನಾ ವೆಚ್ಚಗಳಿಗೆ ಹೆಚ್ಚು ಹಣವನ್ನು ಉಳಿತಾಯ ಮಾಡುವುದು ಆಗಬೇಕಾದದ್ದು. ಆದರೆ ಇಲ್ಲಿ ಆಗಬೇಕಾದದ್ದು ಆಗುವುದಿಲ್ಲ ; ಆಗಬಾರದೆಲ್ಲಾ ಆಗುತ್ತಿದೆ.

ಈ ಹಣಕಾಸು ವರ್ಷದಲ್ಲಿ ಆಡಳಿತಾರೂಢ ಬಿಜೆಪಿ ಪಕ್ಷದೊಳಗಿನ ಬಣ ರಾಜಕೀಯದ ಹಗ್ಗ ಜಗ್ಗಾಟದಿಂದಾಗಿ ಇಡೀ ಆಡಳಿತ ವ್ಯವಸ್ಥೆಗೆ ಗರ ಬಡಿದಂತಾಗಿತ್ತು. ಇದನ್ನು ಹಣಕಾಸು ಇಲಾಖೆಯ, ಹೆಸರು ಹೇಳಬಯಸದ ಹಿರಿಯ ಅಧಿಕಾರಿಗಳೇ ಒಪ್ಪುತ್ತಾರೆ. ಬಿಜೆಪಿ ಒಳಗಿನ ಆಂತರಿಕ ಕಿತ್ತಾಟ ಬೂದಿಮುಚ್ಚಿದ ಕೆಂಡದಂತೆ ಒಳಗೊಳಗೆ ಬುಸುಗುಡುತ್ತಿದೆ. ಅಭಿವೃದ್ಧಿ ಕಾರ್ಯಗಳೆಲ್ಲವು ಸ್ಥಗಿತಗೊಂಡಿವೆ. ಸರ್ಕಾರವನ್ನು ತನ್ನ ಮುಷ್ಠಿಯೊಳಗೆ ಇಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿರುವ ಯಡಿಯೂರಪ್ಪ ಮುಂಬರುವ ಚುನಾವಣೆಯ ಬಗ್ಗೆ ಮುಂದಿನ ಅವಧಿಗೆ ಅಧಿಕಾರವನ್ನು ತನ್ನ ಕೈ ವಶಮಾಡಿಕೊಳ್ಳುವ ಬಗ್ಗೆ ತಂತ್ರಗಾರಿಕೆಯಲ್ಲಿ ಮುಳುಗಿದ್ದಾರೆ. ಆಗಾಗ ಜನರ ಬಗ್ಗೆ ಭಾರೀ ಕಾಳಜಿ ಉಳ್ಳವರಂತೆ ಗುಡುಗುತ್ತಾರೆ. ಬಿಜೆಪಿ ಒಳಗಿನ ಮೂರಕ್ಕೂ ಹೆಚ್ಚು ಬಣಗಳ ಅಧಿಕಾರದಾಹದಿಂದಾಗಿ ರಾಜ್ಯದ ಅಭಿವೃದ್ಧಿ ಪ್ರಶ್ನೆ ಮೂಲೆಗೆ ಸೇರಿಕೊಂಡಿದೆ. ಅಧಿಕಾರಶಾಹಿ ಬಹಿರಂಗ ಲೂಟಿಯಲ್ಲಿ ತಲ್ಲೀನವಾಗಿದೆ. ಉದ್ಯೋಗ ಖಾತ್ರಿ ಯೋಜನೆ ಜಾರಿಗಾಗಿ ರಾಜ್ಯಕ್ಕೆ ಬಿಡುಗಡೆಯಾದ ಅನುದಾನದಲ್ಲಿ 600 ಕೋಟಿ ರೂ. ಕೆಲವು ಅಧಿಕಾರಿಗಳು ಮತ್ತು ರಾಜಕೀಯ ಪುಡಾರಿಗಳು ಸೇರಿಕೊಂಡು ಕಬಳಿಸಿದ್ದಾರೆ ಎಂಬ ಪ್ರಕರಣ ಬಯಲಾಗಿದ್ದು ರಾಜ್ಯದಲ್ಲಿ ಇಂದು 'ಬೇಲಿಯೇ ಎದ್ದು ಹೊಲ ಮೇಯುತ್ತಿದೆ.' ಬಿಜೆಪಿ ಸರ್ಕಾರಕ್ಕೆ ಹತ್ತಿರುವ ಗರ ಬಿಡಿಸಲು ಜನ ಚುನಾವಣೆಯ ದಾರಿ ನೋಡುವಂತಾಗಿದೆ.

ಇಗೋ! ಜನೆರಿಕ್ ಔಷಧಿಗಳ ಉಚಿತ ವಿತರಣೆ ಸಾಧ್ಯ



ಡಾ|| ಪ್ರಕಾಶ್ ಸಿ. ರಾವ್

ರಾಜಸ್ಥಾನದಲ್ಲಿ ಉಚಿತ ಔಷಧಿಗಳು:

ಇತ್ತೀಚೆಗೆ (ನವೆಂಬರ್ 2011)ರ ಉಚಿತ ಔಷಧಿಗಳ ಬಗ್ಗೆ ಚರ್ಚೆ ಪ್ರಾರಂಭವಾದರೂ, ರಾಜಸ್ಥಾನದಲ್ಲಿ ಅಲ್ಲಿಯ ಚಿತ್ತುರ್‌ಘರ್ ಜಿಲ್ಲೆಯಲ್ಲಿ ಉಚಿತ ಔಷಧಿಗಳನ್ನು ನೀಡುವುದರ ಬಗ್ಗೆ ಔಷಧಿ ವಿತರಣಾ ಕೇಂದ್ರಗಳನ್ನು ತೆರೆದು ಪ್ರಯೋಗ ಮಾಡಲಾಗಿತ್ತು. ಈಗಾಗಲೇ ಅಲ್ಲಿ 14,964 ಕೇಂದ್ರಗಳು ಅಸ್ತಿತ್ವದಲ್ಲಿವೆ ಹಾಗೂ ಮುಂದಿನ ದಿನಗಳಲ್ಲಿ ಇವುಗಳ ಸಂಖ್ಯೆ ಹೆಚ್ಚಲಿದೆ. ಈ ಬೆಳವಣಿಗೆಯ ನಂತರ, ಸರ್ಕಾರಿ ಆಸ್ಪತ್ರೆಗಳಿಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಾಗಿದೆ! ಆ ಕೇಂದ್ರಗಳಲ್ಲಿ ಸುಮಾರು 414 ಔಷಧಿಗಳನ್ನು ಶೇಖರಿಸಲಾಗಿದೆ. ಅದರಲ್ಲಿ ಇನ್ಸುಲಿನ್ ಕೂಡ ಒಂದು. ಇಲ್ಲಿಗೆ ಹೋಗುವವರಲ್ಲಿ 62% ಜನರಿಗೆ ಉಚಿತ ಔಷಧಿಗಳು ದೊರಕುತ್ತಿವೆ!

ಗುಣಮಟ್ಟದ ಔಷಧಿಗಳನ್ನು ರಾಜಸ್ಥಾನ ವೈದ್ಯಕೀಯ ಸೇವೆಗಳ ಪಾಲಿಕೆಯಿಂದ ಖರೀದಿಸಲಾಗುತ್ತದೆ.

- ಜನೆರಿಕ್ ಔಷಧಿಗಳ ಬಗ್ಗೆ ಜನಸಾಮಾನ್ಯರಿಗೆ ವೈದ್ಯರಿಗೆ ಮಾಹಿತಿ ನೀಡಬೇಕು. ಇದಲ್ಲದೆ ಇನ್ನೂ ಅನೇಕ ಕ್ರಮಗಳನ್ನು ಸರಕಾರ ಕಡ್ಡಾಯವಾಗಿ ತೆಗೆದುಕೊಳ್ಳಬೇಕು.
- ಮಾರುಕಟ್ಟೆಯಲ್ಲಿ ದೊರಕುವ ಅನಗತ್ಯ ಅಪಾಯಕಾರಿ ನಿಷೇಧಿಸಲು ಯೋಗ್ಯವಾದ ಔಷಧಿಗಳನ್ನು ನಿಷೇಧಿಸಬೇಕು.
- ವೈದ್ಯರಿಗೆ, ಔಷಧಿ ಅಂಗಡಿಯವರಿಗೆ, ಅಗತ್ಯ ಔಷಧಿ ಬಗ್ಗೆ ಮಾಹಿತಿ ನೀಡಬೇಕು.
- ನಿಷೇಧಿತ ಔಷಧಿ ಮಾರುಕಟ್ಟೆಯಲ್ಲಿ ಲಭ್ಯವಿದ್ದರೆ ಆ ಔಷಧಿ ಅಂಗಡಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು.
- ಜನೆರಿಕ್ ಔಷಧಿಗಳು ಎಲ್ಲೆಡೆ ಲಭ್ಯವಿದೆಯೇ ಎಂಬುದನ್ನು ಮೇಲಿಂದ ಮೇಲೆ ಖಚಿತ ಪಡಿಸಿಕೊಳ್ಳಬೇಕು.
- ವೈದ್ಯರ ಮೇಲೆ ಬ್ರಾಂಡ್ ಔಷಧಿ ಬರೆದುಕೊಡಲು ಒತ್ತಡ ಬರಬಹುದು. ಆದ್ದರಿಂದ ಬ್ರಾಂಡ್ ಔಷಧಿಗಳನ್ನು ನಿಷೇಧಿಸಬೇಕು ಹಾಗೂ ಖಾಸಗೀ ವೈದ್ಯರಿಗೂ ಈ ಮಾಹಿತಿ ಕೊಡಬೇಕು.
- ಜನೆರಿಕ್ ಔಷಧಿಗಳ ಗುಣಮಟ್ಟ ಪರೀಕ್ಷೆ ಮಾಡುತ್ತಿರಬೇಕು.
- ಜನೆರಿಕ್ ಔಷಧಿಗಳಿಗೆ ಔಷಧಿ ಅಂಗಡಿಗಳನ್ನು ತೆರೆಯಬೇಕು. ಈ ಔಷಧಿ ಅಂಗಡಿಗಳಲ್ಲಿ ಬ್ರಾಂಡ್ ಔಷಧಿಗಳು ಇರದಂತೆ ನೋಡಿಕೊಳ್ಳಬೇಕು.
- ಅಗತ್ಯ ಔಷಧಿ ಪಟ್ಟಿ ಎಲ್ಲೆಡೆ ಜಾರಿಗೆಬರಬೇಕು.

ಸರ್ಕಾರ ರಾಷ್ಟ್ರೀಯ ಅಗತ್ಯ ಔಷಧಿ ಪಟ್ಟಿಯಲ್ಲಿ (National Essential Drug List) ಸುಮಾರು 348 ಔಷಧಿಗಳನ್ನು ಪಟ್ಟಿಮಾಡಿದೆ. ಇದು ವಿಶ್ವ ಆರೋಗ್ಯ ಸಂಸ್ಥೆಯ ಅಗತ್ಯ ಔಷಧಿ ಪಟ್ಟಿ(Essential Drug List)ಯನ್ನು ಆಧರಿಸಿದೆ. ಈ ಪಟ್ಟಿಯನ್ನು ಪ್ರತಿರಾಜ್ಯಗಳು ತಮ್ಮ ಅಗತ್ಯತೆಗೆ ಅನುಗುಣವಾಗಿ ಪರಿಶೀಲಿಸಿ ತಮ್ಮದೇ ಅಗ್ರ ಔಷಧಿಪಟ್ಟಿಯನ್ನು ತಯಾರಿಸಬೇಕು.

ಕೇಂದ್ರ ಸರ್ಕಾರ ಈ ಅಗತ್ಯ ಔಷಧಿ ಪಟ್ಟಿಯಲ್ಲಿರುವ ಔಷಧಿಗಳನ್ನು ರಾಜ್ಯಗಳಿಗೆ ಕಳುಹಿಸುತ್ತಾರೆ. ಔಷಧಿಗಳನ್ನು ಕೊಂಡುಕೊಳ್ಳಲು ಖರ್ಚಾಗುವ 75% ಹಣವನ್ನು ಕೇಂದ್ರ ಸರ್ಕಾರ ಭರಿಸುತ್ತಿದೆ ಹಾಗೂ 25% ಹಣವನ್ನು ರಾಜ್ಯ ಸರ್ಕಾರ ಭರಿಸಬೇಕು. ಜಿಲ್ಲಾ ಮಟ್ಟದಲ್ಲಿ ಕೆಲವು ಪಟ್ಟಿಯಲ್ಲಿರದ ಔಷಧಿಗಳನ್ನು ಖರೀದಿಸಲು 5% ಹಣವನ್ನು ಮೀಸಲಿಡಲಾಗಿದೆ. ಕೇಂದ್ರ ಸಂಪುಟ ಕೇಂದ್ರೀಯ ಸಂಗ್ರಹಣಾ ಕಾರ್ಯಾಲಯವನ್ನು ಸ್ಥಾಪಿಸಿ, ಔಷಧಿಗಳನ್ನು ಖರೀದಿಸಿ, ರಾಜ್ಯಗಳಿಗೆ ಕಳುಹಿಸುವ ಪ್ರಯತ್ನ ಮಾಡಲಿದೆ.


ವಿಕ್ಟೋರಿಯಾ ಆಸ್ಪತ್ರೆಯ ಜನತಾ ಬಜಾರಿನಲ್ಲಿ ಸಿಗುವ ಜನೆರಿಕ್‌ಗಳು

ಅಲ್‌ಬೆಂಡಝೋಲ್	ಕರುಳು ಹುಳು
400 ಮಿ.ಗ್ರಾಂ	ರೂ. 1.60
ಝೆಂಟೆಲ್	ರೂ. 18.40
ಅಟೆನಲಾಲ್ (14)	ರಕ್ತದ ಏರೊತ್ತಡಕ್ಕೆ
50 ಮಿ.ಗ್ರಾಂ	3.60
ಅಟೆನ್	46.87
ಅಟೋರ್ವಾ ಸ್ಟಾಟಿನ್ (10)	ರಕ್ತದಲ್ಲಿನ ಕೊಬ್ಬು ಕಡಿಮೆ ಮಾಡಲು
72.50	ಅಟೋರ್ವಾ
104.95	
ಅಝಿಥ್ರೋಮೈಸಿನ್ (6)	ಆಂಟಿಬಯಾಟಿಕ್
250 ಮಿ.ಗ್ರಾಂ	26.00
ಅಝಿಥ್ರಾಲ್	92.50
ಸಿಟ್ರಿಝಿನ್ (10)	ಅಲರ್ಜಿ ಔಷಧಿ
	1.20
ಸೆಟ್‌ಝಿನ್	37.50
ಸೈಪ್ರೋಪ್ಲಾಕ್ಸಸಿನ್ (10)	ಆಂಟಿ ಬೆಕ್ಟೀರಿಯಲ್
500 ಮಿ.ಗ್ರಾಂ	12.20
ಸಿಫ್ರಾನ್	99.50
ಮೆಟ್‌ಫಾರ್ಮಿನ್ (20)	ಸಕ್ಕರೆ ಕಾಯಿಲೆ ಔಷಧಿ
500 ಮಿ.ಗ್ರಾಂ.	8.20
ಗ್ಲೈಸಿಫೇಜ್	27.79
ಪೆಂಟಪ್ರಝೋಲ್ (10)	ಹೊಟ್ಟೆ ಅಲ್ಸರ್‌ಗೆ
40 ಮಿ.ಗ್ರಾಂ.	16.60
ಪ್ಯಾಂಟಾಪ್	80.08
ಪೆರಸಿಟಮಾಲ್ (15)	ಜ್ವರ, ನೋವು ಚಿಕಿತ್ಸೆಗೆ
500 ಮಿ.ಗ್ರಾಂ	4.60
ಕಾಲ್‌ಪಾಲ್	18.15

ಇನ್ನು ಮುಂದೆ ಎಲ್ಲ ಸರ್ಕಾರಿ ವೈದ್ಯರು ಜನೆರಿಕ್ ಔಷಧಿಗಳನ್ನು ಬರೆದುಕೊಡಬೇಕಾಗುತ್ತದೆ. ಬ್ರಾಂಡ್ ಔಷಧಿಗಳನ್ನು ಬರೆದುಕೊಟ್ಟ ವೈದ್ಯರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಲಾಗಿದೆ. ಈ ಕ್ರಮ ಬಿಗಿಯಾಗಿ ಜಾರಿಗೆ ಬರುವಂತೆ ಜನರೂ ಒತ್ತಡ ಹೇರಬೇಕು.

ಡೀಸೆಲ್ ಬೆಲೆ ಏರಿಕೆಗೆ ಧಿಕ್ಕಾರ

ಸೆಪ್ಟೆಂಬರ್ 13 ರಿಂದ ಜಾರಿಯಾಗುವಂತೆ ಲೀಟರ್ ಡೀಸೆಲ್‌ಗೆ 5 ರೂ. ಏರಿಸಿರುವ ಯುಪಿಎ ಸರ್ಕಾರದ ನೀತಿ ವಿರೋಧಿಸಿ, ಗ್ಯಾಸ್ ಪೂರೈಕೆ ನಿರ್ಬಂಧ ಖಂಡಿಸಿ ಬೆಂಗಳೂರಿನಲ್ಲಿ ಸೆಪ್ಟೆಂಬರ್ 14 ರಂದು ನಡೆದ ಪ್ರತಿಭಟನೆ







ಸಾರಿಗೆ ನೌಕರರ ಮುಷ್ಕರ

ನಿತ್ಯಾನಂದ ಸ್ವಾಮಿ

ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳ ನೌಕರರು ಆರಂಭಿಸಿದ ಅನಿರ್ದಿಷ್ಟಾವಧಿ ಮುಷ್ಕರ ಮೊದಲ ದಿನ ಬಹುತೇಕ ಯಶಸ್ವಿಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂಬ ವರದಿಗಳು ಇದ್ದರೂ ಮುಷ್ಕರ ಸರ್ಕಾರಕ್ಕೆ ಸಾಕಷ್ಟು ಬಿಸಿ ಮುಟ್ಟಿಸಿದೆ. ಸರ್ಕಾರದ ಕಾರ್ಮಿಕ ವಿರೋಧಿ ದೋರಣೆ ಸಾರ್ವಜನಿಕ ಟೀಕೆಗೆ ಒಳಗಾಗಿದೆ.


ಸರ್ಕಾರ ಬಲಪ್ರಯೋಗದ ಮೂಲಕ ನೌಕರರ ಮುಷ್ಕರವನ್ನು ಮುರಿಯುವ ಪ್ರಯತ್ನವನ್ನು ಕೈಬಿಟ್ಟು, ನೌಕರರ ಎಲ್ಲಾ ಸಂಘಗಳ ಮುಖಂಡರನ್ನು ಮಾತುಕತೆಗೆ ಕರೆದು ನೌಕರರ ಬೇಡಿಕೆಗಳನ್ನು ಬಗೆಹರಿಸಲು ಪ್ರಯತ್ನಿಸಬೇಕು. ನೌಕರರ ಮುಖಂಡರನ್ನು ಬಂಧಿಸುವ, ಸಂಘಟನೆಗಳ ಕ್ರಿಯಾಶೀಲ ಕಾರ್ಯಕರ್ತ ನೌಕರರನ್ನು ಮನಬಂದಂತೆ ವರ್ಗಮಾಡುವ, ತರಭೇತಿ ನಿರತ ನೌಕರರನ್ನು ಸೇವೆಯಿಂದ ವಜಾ ಮಾಡುವ ಬೆದರಿಕೆ ಕ್ರಮಗಳನ್ನು ಸರ್ಕಾರ ಕೈಬಿಡಬೇಕು. ಯಾವುದೇ ಪ್ರತಿಷ್ಠೆಗೆ ಒಳಗಾಗದೆ ಸರ್ಕಾರ ನೌಕರರ ಪ್ರತಿನಿಧಿಗಳೊಂದಿಗೆ ಚರ್ಚೆಗೆ ಮುಂದಾಗಬೇಕು.

ಸರ್ಕಾರ ಈ ಮುಷ್ಕರದಿಂದ ಮಹತ್ವದ ಪಾಠ ಕಲಿಯಬೇಕಾಗಿದೆ. 1996 ರಿಂದ ಸಾರಿಗೆ ನಿಗಮಗಳ ಆಡಳಿತ ವರ್ಗ ನೌಕರರ ಸಂಘಟನೆಗಳೊಂದಿಗೆ ಚರ್ಚೆ ನಡೆಸುವುದನ್ನೇ ಸಂಪೂರ್ಣವಾಗಿ ನಿಲ್ಲಿಸಿದೆ. ನೌಕರರ ಸಂಘಟನೆಗಳಿಗೆ ಕಾನೂನುಬದ್ಧ ಮಾನ್ಯತೆ ನೀಡುವುದನ್ನೇ ನಿರಾಕರಿಸುತ್ತಾ ಬಂದಿರುವ ಸರ್ಕಾರ ನೌಕರರ ಸಾಮೂಹಿಕ ಚೌಕಾಸಿಯ ಹಕ್ಕನ್ನು ದಮನ ಮಾಡುತ್ತಾ ಬಂದಿದೆ.

ಸರ್ಕಾರದ ಈ ಪ್ರಜಾಪ್ರಭುತ್ವ ವಿರೋಧಿ ಧೋರಣೆಯಿಂದಾಗಿ ನೌಕರರ ಸಮಸ್ಯೆಗಳು ಇತ್ಯರ್ಥವಾಗದೆ ನೌಕರರಲ್ಲಿ ತೀವ್ರ ಅಸಮಾಧಾನ ಬೆಳೆಯುತ್ತಾ ಬಂದಿದೆ. ನೌಕರರ ಸಂಘಟನೆಗಳು ನೀಡಿದ ಮುಷ್ಕರದ ಕರೆ ಒಂದು ನೆಪ ಮಾತ್ರ. ನೌಕರರ ಅತೃಪ್ತಿ, ಅಸಹಾಯಕತೆ ಈ ಮುಷ್ಕರದಲ್ಲಿ ಸ್ಫೋಟಗೊಂಡಿದೆ. ಇದು ಸರ್ಕಾರ ಕಲಿಯಬೇಕಾದ ಪಾಠ. ಮುಷ್ಕರದಿಂದ ನಿಗಮಗಳಿಗಾಗಲಿ, ಸಾರ್ವಜನಿಕರಿಗಾಗಲಿ ಆಗಿರುವ ನಷ್ಟ ಹಾಗೂ ತೊಂದರೆಗಳಿಗೆ ಸರ್ಕಾರವೇ ಹೊಣೆಯಾಗಿದೆ.

ಸರ್ಕಾರ ಸಾರಿಗೆ ನೌಕರರ ವೇತನದಲ್ಲಿ 10% ರಷ್ಟು ಹೆಚ್ಚಳ ಮಾಡಿದೆ ಎಂದು ಹೇಳಿಕೊಳ್ಳುತ್ತಿದೆ. ಕಳೆದ ಬಾರಿ 6% ರಷ್ಟು ಹೆಚ್ಚಳ ಮಾಡಿ ಸರ್ಕಾರ ಏಕಪಕ್ಷೀಯವಾಗಿ ಘೋಷಣೆ ಮಾಡಿತ್ತು. ವೇತನ ಹೆಚ್ಚಳದ ಪ್ರಸ್ತಾವನ್ನು ನೌಕರರ ಪ್ರತಿನಿಧಿಗಳೊಂದಿಗೆ ಚರ್ಚೆಮಾಡಿ, ಒಪ್ಪಂದಕ್ಕೆ ನೌಕರರ ಪ್ರತಿನಿಧಿಗಳ ಸಹಿ ಹಾಕಿದ ನಂತರವಷ್ಟೇ ಅದನ್ನು ಘೋಷಿಸಬೇಕೆಂದು ನೌಕರರ ಸಂಘಟನೆಗಳ ಪ್ರಮುಖ ಬೇಡಿಕೆ. ಆದರೆ ಸರ್ಕಾರ ವೇತನ ಪರಿಷ್ಕರಣೆಯನ್ನು ಏಕಪಕ್ಷೀಯವಾಗಿ ಘೋಷಿಸುವುದನ್ನೇ ಮುಂದುವರೆಸುತ್ತದೆ.

ನೌಕರರ ವೇತನ ಪರಿಷ್ಕರಣೆಯ ಬೇಡಿಕೆ ಮಾತ್ರವಲ್ಲದೆ ಇತರ ಸಮಸ್ಯೆಗಳನ್ನು ಸಹ ಚರ್ಚೆಮಾಡಲು ಸರ್ಕಾರ ಅವಕಾಶ ಕೊಡುತ್ತಿಲ್ಲ. ಡಬಲ್ ಡ್ಯೂಟಿ ಮಾಡಲು ಒತ್ತಾಯಿಸಲಾಗುತ್ತದೆ. ತಿಂಗಳ ಸಂಬಳದಲ್ಲಿ ದಂಡಗಳ ಹೆಸರಿನಲ್ಲಿ ಅಕ್ರಮ ಕಡಿತ ಮಾಡಲಾಗುತ್ತದೆ. ಹಕ್ಕಿನ ರಜೆ ಪಡೆಯಲು ಸಹ ಅಧಿಕಾರಿಗಳಿಗೆ ಲಂಚ



ಕೊಡಬೇಕಾಗುತ್ತದೆ. ಇಲ್ಲದೆ ಹೋದರೆ ಗೈರು ಹಾಜರಿ ಎಂದು ದಾಖಲಿಸಿ ಕಿರುಕುಳ ನೀಡಲಾಗುತ್ತದೆ. ನೌಕರರನ್ನು ಮನ ಬಂದಂತೆ ವರ್ಗಾವಣೆ ಮಾಡಿ ತೊಂದರೆ ಕೊಡಲಾಗುತ್ತದೆ. ನೌಕರರ ಸಣ್ಣಪುಟ್ಟ ತಪ್ಪುಗಳನ್ನೇ ಮುಂದಿಟ್ಟುಕೊಂಡು ಡಿಪೋದಿಂದ ಡಿಪೋಗೆ ವಿಭಾಗದಿಂದ ವಿಭಾಗಕ್ಕೆ ವರ್ಗಾವಣೆ ಮಾಡಿ ಸತಾಯಿಸಲಾಗುತ್ತದೆ. ಆದರೆ ನೌಕರರು ಕುಟುಂಬದ ಆವಶ್ಯಕತೆಗಾಗಿ ವರ್ಗಾವಣೆ ಕೇಳಿಕೊಂಡರೆ, ಅದನ್ನು ನಿರಾಕರಿಸಲಾಗುತ್ತದೆ. ಹೀಗೆ ಎಲ್ಲಾ ನಾಲ್ಕು ನಿಗಮಗಳ ಡ್ರೈವರ್, ಕಂಡಕ್ಟರ್, ಮೆಕ್ಯಾನಿಕ್, ಆಡಳಿತ ಮತ್ತು ಸೆಕ್ಯೂರಿಟಿ ಸಿಬ್ಬಂಧಿಗಳು ಹಾಗೂ ತರಬೇತಿ ನಿರತ ನೌಕರರು ಹತ್ತು ಹಲವು ಸಮಸ್ಯೆಗಳನ್ನು ಎದುರಿಸುತ್ತಾ ತೀವ್ರವಾಗಿ ನೊಂದಿರುವ ಪರಿಣಾಮವೇ ಈ ಮುಷ್ಕರದ ಯಶಸ್ಸಿನ ಗುಟ್ಟು.

ಎಐಟಿಯುಸಿ ಸಂಕುಚಿತ ನೀತಿ:

ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘಟನೆಗಳಲ್ಲಿ ಎಐಟಿಯುಸಿ ನೇತೃತ್ವದ "ಸ್ಟಾಫ್ & ವರ್ಕರ್ಸ್ ಫೆಡರೇಷನ್" ಅತ್ಯಂತ ಹಳೆಯ ಮತ್ತು ದೊಡ್ಡ ಸಂಘಟನೆಯಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ನೌಕರರ ಹಿತಕಾಪಾಡುವಲ್ಲಿ, ಸಂಘದ ಸಮರಶೀಲತೆಯನ್ನು ಉಳಿಸಿಕೊಂಡು ಹೋಗುವಲ್ಲಿ ಅದು ಸಂಪೂರ್ಣ ವಿಫಲವಾಗಿತ್ತು. ಆದ್ದರಿಂದಲೇ ಸಾರಿಗೆ ನೌಕರರರ ನಡುವೆ ಅನೇಕ ಸಂಘಟನೆಗಳು ಹುಟ್ಟಿಕೊಳ್ಳುವಂತಾಯಿತು. ಕಾರ್ಮಿಕರ ಅಖಿಲ ಭಾರತ ಮಟ್ಟದ ಹೋರಾಟಗಳಲ್ಲಿ ಸಾರಿಗೆ ನೌಕರರನ್ನು ಪಾಲ್ಗೊಳಿಸುವಲ್ಲಿಯೂ ಎಐಟಿಯುಸಿ ವಿಫಲವಾಗಿತ್ತು. ನೌಕರರ ವೇತನ ಪರಿಷ್ಕರಣೆಯ ಮಾತುಕತೆಗೆ ಸಂಸ್ಥೆಯಲ್ಲಿರುವ ಇತರ ನೌಕರರ ಸಂಘಟನೆಗಳನ್ನು ಕರೆಯಬಾರದೆಂದು ಆಡಳಿತ ವರ್ಗಕ್ಕೆ ಅದು ಪತ್ರವನ್ನು ಬರೆದಿತ್ತು. ಈ ಸಲದ ಮುಷ್ಕರ ಮತ್ತು ಅದರ ಪೂರ್ವಭಾವಿ ಸಿದ್ಧತೆಗಳಲ್ಲಿ ಸಿಐಟಿಯು ಸಂಘವನ್ನು ಹೊರಗಿಡಲು ಒತ್ತಡ ಹೇರುವ ಮೂಲಕ ನೌಕರರ ಐಕ್ಯ ಚಳುವಳಿಗೆ ದ್ರೋಹ ಬಗೆದಿದೆ.

ಸಾರಿಗೆ ನೌಕರರ ನಡುವೆ ಸಿಐಟಿಯು ಸಂಘ ಟನೆಯಾದ ದಿನದಿಂದಲೂ ಅದು ನೌಕರರ ಐಕ್ಯತೆಗೆ ಹಾಗೂ ನೌಕರ ಸಂಘಟನೆಗಳ ಐಕ್ಯ ಹೋರಾಟಕ್ಕೆ ಒತ್ತು ನೀಡುತ್ತಾ ಬಂದಿದೆ. ಸಾರಿಗೆ ನೌಕರರ ಎಲ್ಲಾ ಸಂಘಟನೆಗಳನ್ನು ಒಂದೇ ವೇದಿಕೆಗೆ ತರುವ ಪ್ರಯತ್ನದಲ್ಲಿ ಸಿಐಟಿಯು ಸಕ್ರೀಯ ಪಾತ್ರವನ್ನು ನಿರ್ವಹಿಸಿದೆ. ಆದರೆ ಎಐಟಿಯುಸಿ ಮಾತ್ರ ಸಿಐಟಿಯು ಸಂಘವನ್ನು ಐಕ್ಯ ಹೋರಾಟದಲ್ಲಿ ಸೇರಿಸಿಕೊಳ್ಳುವುನೇ ವಿರೋಧಿಸುತ್ತಾ ಬಂದಿದೆ. ಎಐಟಿಯುಸಿ ಮತ್ತು ಇತರ ಕಾರ್ಮಿಕ ಸಂಘಗಳು ವೇತನ ಪರಿಷ್ಕರಣೆ ಮತ್ತು ಇತರ ಬೇಡಿಕೆಗಳಿಗಾಗಿ ಒತ್ತಾಯಿಸಿ 27-04-2012 ರಂದು ರಾಜ್ಯ ವ್ಯಾಪ್ತಿ ಮುಷ್ಕರಕ್ಕೆ ಕರೆ ನೀಡಿದಾಗ ಸಿಐಟಿಯು ಆ ತೀರ್ಮಾನದ ಭಾಗ ಆಗಿರದಿದ್ದರೂ ಮುಷ್ಕರದ ಕರೆಗೆ ಸಂಪೂರ್ಣ ಬೆಂಬಲ ನೀಡಿತ್ತು. ಆದರೆ ಆಡಳಿತ ವರ್ಗ 10% ರಷ್ಟು ವೇತನ ಹೆಚ್ಚಳದ ಪ್ರಸ್ತಾವವನ್ನು ಸರ್ಕಾರಕ್ಕೆ ಶಿಫಾರಸು ಮಾಡಿ ನಂತರ ನೌಕರ ಸಂಘಟನೆಗಳ ಮುಂದೆ ತಂದು ಒಪ್ಪಿಗೆ ಪಡೆಯುವ ಭರವಸೆಯನ್ನು ನೀಡಿದಾಗ ಜಂಟಿ ಸಮಿತಿ ಮುಷ್ಕರದ ಕರೆಯನ್ನು ಹಿಂದಕ್ಕೆ ಪಡೆಯಿತು. ಮುಷ್ಕರ ವಾಪಸ್ ಪಡೆದ ತೀರ್ಮಾನ ನೌಕರರಲ್ಲಿ ಅತೀವ ಬೇಸರವನ್ನು ಉಂಟುಮಾಡಿತು. ಸರ್ಕಾರ ಕೊಟ್ಟ ಭರವಸೆಯನ್ನು ಉಲ್ಲಂಘಿಸಿ 10% ರಷ್ಟು ವೇತನ ಹೆಚ್ಚಳವನ್ನು ಏಕಪಕ್ಷೀಯವಾಗಿ ಘೋಷಿಸಿದಾಗ ಜಂಟಿ ಹೋರಾಟ ಸಮಿತಿ ಮುಷ್ಕರದ ಇನ್ನೊಂದು ಕರೆ ನೀಡುವಂತಾಯಿತು. ಈ ಹಂತಲ್ಲಿಯೂ ಸಿಐಟಿಯು ಸಂಘವನ್ನು ಸೇರಿಸದಿರಲು ಎಐಟಿಯುಸಿ ಬಿಗಿ ಪಟ್ಟು ಹಿಡಿಯಿತು.

ಮುಷ್ಕರದ ನಡುವೆಯೂ ದ್ವಿಪಕ್ಷೀಯ ಮಾತುಕತೆ ಚಾಲನೆಯಲ್ಲಿತ್ತು. ಸಿಐಟಿಯು ಮುಷ್ಕರವನ್ನು ವಿರೋಧಿಸಲಿಲ್ಲ. ತನ್ನ ಬೆಂಬಲಿಗ ನೌಕರರು ಮುಷ್ಕರದಲ್ಲಿ ಪಾಲ್ಗೊಳ್ಳುವುದನ್ನು ಅದು ತಡೆಯಲಿಲ್ಲ. ರಾಜ್ಯ ವಿವಿದೆಡೆ ನೌಕರರನ್ನು ಬಂಧಿಸಲಾಗಿದ್ದು ಅವರಲ್ಲಿ ಸಿಐಟಿಯು ನೌಕರರು ಹಾಗೂ ಕಾರ್ಯಕರ್ತರು ಸೇರಿದ್ದಾರೆ. ಇನ್ನಾದರೂ ಸರ್ಕಾರ ನೌಕರರ ಪ್ರತಿನಿಧಿಗಳನ್ನು ಕರೆದು ಮಾತುಕತೆ ನಡೆಸಿ ನೌಕರರ ಧೀರ್ಘಕಾಲದ ಹಾಗೂ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಸಿಐಟಿಯು ಆಗ್ರಹಿಸಿದೆ. ಇದರ ಬದಲಾಗಿ ಸರ್ಕಾರ ದಮನಕಾರಿ ಕ್ರಮಗಳ ಮೂಲಕ ನೌಕರರ ಹೋರಾಟವನ್ನು ಹತ್ತಿಕ್ಕಲು ಸರ್ಕಾರ ಪ್ರಯತ್ನ ಪಟ್ಟರೆ ಸಿಐಟಿಯು ಅದನ್ನು ವಿರೋಧಿಸಲು ಬೀದಿಗಿಳಿಯುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದೆ.

ನೈತಿಕ(?) ಪೋಲೀಸರ ರಾಜಕಾರಣ

ಬಾಲಕೃಷ್ಣ ಶೆಟ್ಟಿ

ಕರಾವಳಿ ಜಿಲ್ಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ನೈತಿಕ ಪೋಲೀಸರದೇ' ಮೇಲುಗೈ, ಸರಕಾರದ ಪೋಲೀಸರಿಗೆ ಇಲ್ಲದ ಅಧಿಕಾರ ಇವರಿಗಿದೆ. ಏಕೆಂದರೆ ಆಳುತ್ತಿರುವ ಬಿಜೆಪಿ ಸರಕಾರದ ಆಶೀರ್ವಾದ ಈ "ನೈತಿಕ ಪೋಲೀಸರ" ಮೇಲಿದೆ.

ಹಿಂದೂ ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ಪಬ್‌ಗಳ ಮೇಲೆ, ಹೋಂಸ್ಟೇಗಳ ಧಾಳಿ ನಡೆಸುತ್ತ ಮಹಿಳೆಯರ ಮೇಲೆ, ವಿದ್ಯಾರ್ಥಿಗಳ ವಿರುದ್ಧ ಅಪಪ್ರಚಾರ ನಡೆಸುತ್ತಾರೆ. ಹಿಂದೂ-ಮುಸ್ಲಿಂ ಧರ್ಮಗಳಿಗೆ ಸೇರಿದ ಯುವಕ-ಯುವತಿಯರು ಒಬ್ಬರನ್ನೊಬ್ಬರು ಪ್ರೀತಿಸಿದರೆ ಮಧ್ಯ ಪ್ರವೇಶಿಸಿ ದಾಳಿ ನಡೆಸುತ್ತಾರೆ. 'ನಮ್ಮ (ಹಿಂದೂ) ಹೆಣ್ಣು ಮಕ್ಕಳನ್ನು ಮುಸ್ಲಿಂ ಯುವಕರು ಹಾಳು ಮಾಡುತ್ತಾರೆ' ಎಂದು ಅಪಪ್ರಚಾರ ನಡೆಸುತ್ತಾರೆ. ಆ ಮೂಲಕ ಹಿಂದೂ ರಕ್ಷಕರೆಂದು ನಟಿಸಿ ಹಿಂದೂ ಮತ ಬ್ಯಾಂಕ್ ಸೃಷ್ಟಿಸಲು ಪ್ರಯತ್ನಿಸುತ್ತಾರೆ. ಇದು ಅವರ ಗುರಿ.

ಪ್ರತಿ ನಿತ್ಯ ಎಂಬಂತೆ ನಡೆಯುವ ಈ ಚಟುವಟಿಕೆಗಳು ಇತ್ತೀಚಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಿವೆ ಇದು ಯಾಕೆ?

ಕ್ಷೀಣಿಸುತ್ತಿರುವ ಬಿಜೆಪಿ ಪ್ರಭಾವ ;

ದ.ಕ ಜಿಲ್ಲೆಯಲ್ಲಿ 8 ಅಸೆಂಬ್ಲಿ ಕ್ಷೇತ್ರಗಳಿವೆ. ಅವುಗಳಲ್ಲಿ 4 ಬಿಜೆಪಿಯದ್ದು. ಕ್ಷೇತ್ರ ಪುರ್ನವಿಂಗಡಣೆ ಆಗುವ ಮೊದಲು ಅಂದರೆ 2004 ರ ಚುನಾವಣೆಯಲ್ಲಿ 8 ಕ್ಷೇತ್ರಗಳಲ್ಲಿ 7ಬಿಜೆಪಿಯದ್ದಾಗಿತ್ತು ಪಕ್ಕದ ಉಡುಪಿ ಜಿಲ್ಲೆಯ 5 ಕ್ಷೇತ್ರಗಳಲ್ಲಿ 4 ಬಿಜೆಪಿಯದ್ದಾಗಿದ್ದು ಈ ಎರಡೂ ಜಿಲ್ಲೆಗಳಲ್ಲಿ ಬಿಜೆಪಿಗೆ ಕಾರ್ಯರ್ತರನ್ನು ಪೂರೈಸುವ, ನಿರ್ದೇಶನ ನೀಡುವ ಆರ್.ಎಸ್.ಎಸ್ ಸಕ್ರಿಯವಾಗಿದೆ. ಆದರೂ ಇತ್ತೀಚೆಗೆ ನಡೆದ ಉಡುಪಿ-ಚಿಕ್ಕಮಗಳೂರು ಪಾರ್ಲಿಮೆಂಟ್ ಚುನಾವಣೆಯಲ್ಲಿ ಬಿಜೆಪಿ ಸೋತಿತು.

ಇದಲ್ಲದೆ, ಕುಂದಾಪುರ ಕ್ಷೇತ್ರದ ಶಾಸಕರು ತನ್ನ ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡಿದರು. ಕಾಂಗ್ರೆಸ್ ಪಕ್ಷ ಸೇರಲು ತುದಿಗಾಲಲ್ಲಿ ನಿಂತಿದ್ದಾರೆ. ಬಂಟ್ವಾಳ ಕ್ಷೇತ್ರದ ಮಾಜಿ ಶಾಸಕರು ಬಿಜೆಪಿಯ ಪ್ರಾಥಮಿಕ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ ಎಂಬ ವರದಿ ಇದೆ. ರಾಜಿನಾಮೆಗೆ ಅವರಿಬ್ಬರೂ ನೀಡಿದ ಕಾರಣ ಹೆಚ್ಚು ಕಡಿಮೆ ಒಂದೇ. "ಆರ್.ಎಸ್.ಎಸ್‌ನ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ಟ ಎನ್ನುವವರು ಬಿಜೆಪಿಯ ಆಂತರಿಕ ವ್ಯವಹಾರದಲ್ಲಿ ಕೈ ಹಾಕುತ್ತಿದ್ದಾರೆ. ಆರ್.ಎಸ್.ಎಸ್ ಹಿನ್ನೆಲೆ ಇಲ್ಲದ ವ್ಯಕ್ತಿಗಳನ್ನು ತುಳಿಯುತ್ತಿದ್ದಾರೆ" ಎಂದು ಹೇಳಿದ್ದಾರೆ. ಇವರಿಬ್ಬರಲ್ಲದೆ ಆರ್.ಎಸ್.ಎಸ್ ಹಿನ್ನೆಲೆ ಇಲ್ಲದ ಅನೇಕ ಬಿಜೆಪಿ ಮುಖಂಡರಲ್ಲಿ ಅಸಮಾಧಾನ ಇದೆ. ಆರ್.ಎಸ್.ಎಸ್‌ಗೆ ಸೇರಿದ ಮುಖಂಡರಲ್ಲಿಯೂ ಭಿನ್ನಾಭಿಪ್ರಾಯಗಳಿವೆ. ಬೇರೆ ದಾರಿ ಇಲ್ಲ ಎಂಬಂತೆ ತೆಪ್ಪಗಿದ್ದಾರೆ. ಉದಾಹರಣೆಗೆ ಕುಂದಾಪುರ ಶಾಸಕರು



ರಾಜಿನಾಮೆ ನೀಡಿದಾಗ "ನಾನು ಕೂಡಾ ರಾಜಿನಾಮೆ ನೀಡುತ್ತೇನೆ" ಎಂದು ಹೇಳಿದ ಶಾಸಕ ರಘುಪತಿ ಭಟ್ ಈಗ ತೆಪ್ಪಗಿದ್ದಾರೆ.

ಒಟ್ಟಾರೆಯಾಗಿ ದ.ಕ ಜಿಲ್ಲೆಯಲ್ಲಿ ಬಿಜೆಪಿ ಪ್ರಭಾವ ಕ್ಷೀಣಿಸುತ್ತಿದೆ.

ಜೊತೆಯಲ್ಲಿ ಬಿಜೆಪಿ ಸರಕಾರದ 4 ವರ್ಷ 4 ತಿಂಗಳ ಆಡಳಿತದಿಂದ ಜನತೆ ಕಂಗೆಟ್ಟಿದ್ದಾರೆ. ವ್ಯಾಪಕ ಭ್ರಷ್ಟಾಚಾರ, ವಿಧಾನ ಸಭೆಯಲ್ಲಿ ಬ್ಲೂ ಫಿಲಂ ವೀಕ್ಷಣೆ, ಉಡುಪಿ ಜಿಲ್ಲೆಯ ಮಲ್ಪೆ ಬಳಿಯ ದ್ವೀಪ ವೊಂದರಲ್ಲಿ ರೇವ್ ಪಾರ್ಟಿಗೆ ಅವಕಾಶ ಇತ್ಯಾದಿ ಹೇಯವಾದ ಘಟನೆಗಳು ಒಂದೆಡೆಯಾದರೆ, ಜನ ಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದನೆ ಇಲ್ಲ. ಬಿಜೆಪಿ ಆಡಳಿತ ಇರುವ ಮಂಗಳೂರು ಮಹಾ ನಗರ ಪಾಲಿಕೆ ಇದಕ್ಕೆ ಸಾಕ್ಷಿ. ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ತ್ಯಾಜ್ಯ ವಿಲೇವಾರಿ ಇಲ್ಲ. ಒಳ ಚರಂಡಿಯಿಂದ ಕೊಳಚೆ ನೀರು ಉಕ್ಕಿ ಕೃಷಿ ನಾಶವಾಗಿದೆ. ಬರ ಪ್ರದೇಶಗಳಲ್ಲಾಗಲಿ, ನೆರೆ ಪ್ರದೇಶಗಳಲ್ಲಾಗಲಿ ಜನರ ಕಷ್ಟಗಳಿಗೆ ಪರಿಹಾರವಿಲ್ಲ. ಈ ಹಿನ್ನೆಲೆಯಲ್ಲಿ ಹಿಂದೂ ಮತಗಳನ್ನು ಸೆಳೆಯುವ ತಂತ್ರದಲ್ಲಿ ಆರ್.ಎಸ್.ಎಸ್ ಮತ್ತು ಬಿಜೆಪಿ ತೊಡಗಿದೆ. ಅದಕ್ಕಾಗಿ ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಅಲ್ಪ ಸಂಖ್ಯಾತರ ವಿರುದ್ಧ ಅಪಪ್ರಚಾರ ಅವ್ಯಾಹತವಾಗಿ ಸಾಗಿದೆ.

ಕೆಳಗೆ ವಿವರಿಸಿದ ಘಟನೆಗಳಿಂದ ಈ ಹಿಂದೂ ರಕ್ಷಕರು ಎಂತಹ ಕೃತ್ಯಗಳನ್ನು ನಡೆಸಿತ್ತಿದ್ದಾರೆ ಎಂದು ತಿಳಿಯುತ್ತದೆ.

ಘಟನೆ 1 : 2012 ಎಪ್ರಿಲ್ 26 ರಂದು ಫರ್ನಿಚರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಹಿಂದೂ ಯುವತಿಯೊಬ್ಬಳು ತನ್ನ ಮಾಲಿಕ (ಮುಸ್ಲಿಂ)ರ ಕಾರಿನಲ್ಲಿ ಮನೆಗೆ ತೆರಳುತ್ತಿದ್ದಳು. ದಾರಿಯಲ್ಲಿ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಕಾರಿಗೆ ಕಲ್ಲು ಬಿಸಾಕಿದ್ದು ಮಾತ್ರವಲ್ಲದೇ ಬೈಕ್‌ನಲ್ಲಿ ಹಿಂಬಾಲಿಸಿದರು. ಇದರಿಂದ ಭೀತಿಗೊಂಡ ಮುಸ್ಲಿಂ ಮಾಲಿಕನಿಗೆ ಆಯ ತಪ್ಪಿ ಕಾರು ಚರಂಡಿಗೆ ಬಿತ್ತು. ಹಿಂದೂ ಜಾಗರಣ ವೇದಿಕೆಯವರು ಇಬ್ಬರನ್ನು ಪೋಲೀಸ್ ಸ್ಟೇಷನ್ನಿಗೆ ಕರೆದು ಕೊಂಡು ಹೋದುದಲ್ಲದೆ, ಯುವತಿಗೆ ಬೆದರಿಸಿ ಮಾಲಿಕನ ವಿರುದ್ಧ ದೂರು ನಿಡುವಂತೆ ಒತ್ತಾಯಿಸಿದರು. ಭಯಗೊಂಡ ಆಕೆ ಮಾಲಿಕ ತನ್ನನ್ನು ಒತ್ತಾಯ ಪೂರ್ವಕವಾಗಿ ಕೊಂಡೊಯ್ಯುತ್ತಿದ್ದಾನೆಂದು ದೂರು ನೀಡಿ ಪೋಲೀಸರಿಂದ ಬಿಡಿಸಿ ಕೊಂಡು ಮನೆ ಸೇರಿದಳು. ಮುಸ್ಲಿಂ ಮಾಲಿಕನನ್ನು ರಾತ್ರಿ ಇಡೀ ಠಾಣೆಯಲ್ಲೇ ಇರಿಸಲಾಯಿತು. ಮರುದಿನ ಸ್ಟೇಷನ್ ನಿಂದ ಬಿಡಿಸಿ ಕೊಂಡ ಯುವಕ ಕಾರು ತೆಗೆಯಲೆಂದು ಹೋದರೆ ಕಾರು ಸುಟ್ಟು ಕರಕಲಾಗಿತ್ತು ಮತ್ತು ಅದರ ಒಳಗಿದ್ದ ಬೆಲೆ ಬಾಳುವ ವಸ್ತುಗಳು ಕಾಣೆಯಾಗಿದ್ದವು.

ಘಟನೆ 2 : ಜುಲೈ 16 ರಂದು ಬಂಟ್ವಾಳ ತಾಲ್ಲೂಕಿನ ಒಂದು ಪ್ರದೇಶದಲ್ಲಿ ಹಿಂದೂ ಯುವಕನೊಬ್ಬ ಮುಸ್ಲಿಂ ಯುವತಿಯೊಂದಿಗೆ ಕಾರಿನಲ್ಲಿ ತೆರಳುತ್ತಿದ್ದ. ಹಲವು ಸಮಯದಿಂದ ಅವರು ಸ್ನೇಹಿತರಾಗಿದ್ದರು. ಇದು ಸಂಘ ಪರಿವಾರದವರ ಕಣ್ಣಿಗೆ ಬಿತ್ತು. ಕಾರನ್ನು ಅಡ್ಡಗಟ್ಟಿದ ಅವರು ಮುಸ್ಲಿಂ ಯುವತಿಯನ್ನು ಮದುವೆಯಾಗಬೇಕೆಂದು ಹಿಂದೂ ಯುವಕನಿಗೆ ಒತ್ತಾಯಿಸಿದರು. ಕೊನೆಗೆ ಆತ ನೈತಿಕ ಪೋಲೀಸರಿಂದ ತಪ್ಪಿಸಿಕೊಳ್ಳ ಬೇಕಾದರೆ 3.5 ಲಕ್ಷ ರೂ. ದಂಡ ತರಬೇಕಾಯಿತು. ಹಿಂದುತ್ವ ರಕ್ಷಣೆಗೆ ಲಕ್ಷಗಟ್ಟಳೆ ಹಣ?

ಘಟನೆ 3: ಜುಲೈ 25ರ ಮಧ್ಯಾಹ್ನ 1:30ರ ಸಮಯ. ಮಂಗಳೂರು ಬಂದರ್ ಠಾಣೆ ವ್ಯಾಪ್ತಿಯ ವಸತಿ ಗೃಹದಲ್ಲಿ ಕೆಲಸಕ್ಕಾಗಿ ಇಂಟರ್‌ವ್ಯೂ ನಡೆಯುತ್ತಿತ್ತು. ಆ ವಸತಿ ಗೃಹ ಮುಸ್ಲಿಂ ಒಬ್ಬರಿಗೆ ಸೇರಿದ್ದು. ಕೆಲಸಕ್ಕೆಂದು ಹಿಂದೂ ಯುವತಿಯೊಬ್ಬರು ಬಂದಿದ್ದರು. ಆದರೆ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಮಾಲೀಕನನ್ನು ಬಂದರು ಪೋಲೀಸ್ ಠಾಣೆಗೆ ಕರೆದೊಯ್ದು ವಸತಿಗೃಹದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿದೆ ಎಂದು ದೂರು ನೀಡಿದರು ಹಾಗೂ ಕೇಸು ದಾಖಲಾಯಿತು.

ಒಂದಲ್ಲ, ಎರಡಲ್ಲ ಇದು ದಿನ ನಿತ್ಯವೆಂಬಂತೆ ನಡೆಯುವ ಸಂಗತಿಗಳು. ಪ್ರತಿ ನಿತ್ಯ ನಡೆಯುವುದರಿಂದ ಬೇರೆ ಪತ್ರಿಕೆಗಳು ಇದನ್ನು ಸುದ್ದಿ ಮಾಡುವುದಿಲ್ಲ. ಒಂದೋ ಅವರಿಗೆ ಭಯ ಇರಬೇಕು. ಇಲ್ಲವಾದಲ್ಲಿ ಈ ಕೃತ್ಯಗಳನ್ನು ಅವರೂ ಬೆಂಬಲಿಸುತ್ತಿರಬೇಕು. 'ಕರಾವಳಿ ಅಲೆ' ಮಾತ್ರ ಇಂತಹ ಸುದ್ದಿಗಳನ್ನು

ಪುಟ 14 ಕ್ಕೆ

ಬಿಜೆಪಿ ಆಡಳಿತದಲ್ಲಿ ಸಂಘ ಪರಿವಾರದ ಮೇಲಿನ 369 ಕೇಸ್ ರದ್ದು

ಕಳೆದ ಜುಲೈ ತಿಂಗಳವರೆಗೆ ಬಿಜೆಪಿ ಸರಕಾರ ಬರೋಬ್ಬರಿ 4ವರ್ಷ 2ತಿಂಗಳು ಅಧಿಕಾರ ನಡೆಸಿದೆ. ಈ ಅವಧಿಯಲ್ಲಿ, ಕೇವಲ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ಸೇರಿದ ಕಾರ್ಯಕರ್ತರ ಮೇಲೆ ಹಾಕಿದ್ದ 369 ಕೇಸುಗಳನ್ನು ಹಿಂತೆಗಿದು ಕೊಂಡಿದೆ. ಇದರಲ್ಲಿ 128 ಕೇಸುಗಳು ಕೋಮು ಗಲಭೆಗಳಿಗೆ ಸೇರಿದವುಗಳು. ಹಾಗೆ ನೋಡಿದರೆ ಕೋಮು ಗಲಭೆಗಳಿಗೆ ಸಂಬಂಧಿಸಿದ ಕೇಸುಗಳನ್ನು ವಾಪಸ್ ಪಡೆಯುವಂತಿಲ್ಲ. ಕೇವಲ ಪ್ರಜಾಸತ್ತಾತ್ಮಕ ಹೋರಾಟಗಳು - ಅಂದರೆ ರೈತ, ಕಾರ್ಮಿಕ ಮತ್ತು ಇತರೆ ಜನ ವಿಭಾಗಗಳ ಸಮಸ್ಯೆಗಳ ಪರಿಹಾರಕ್ಕಾಗಿ ನಡೆದ ಹೋರಾಟಗಳ ಬಗ್ಗೆ ಮಾತ್ರ ಕೇಸುಗಳನ್ನು ವಾಪಸು ತೆಗೆದುಕೊಳ್ಳಬಹುದು. ಅಂತಹ ಹಲವಾರು ಮೊಕದ್ದಮೆಗಳನ್ನು 3-4 ವರ್ಷಗಳಿಂದ ಬಾಕಿ ಇದ್ದರೂ ವಾಪಸು ಪಡೆದಿಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೇಸುಗಳನ್ನು ಹಿಂತೆಗೆದು ಕೊಂಡುದರಿಂದಲೇ, ಸಂಘ ಪರಿವಾರದ ಕಾರ್ಯಕರ್ತರಿಗೆ(ಗೂಂಡಾಗಳಿಗೆ) ಹೊಸ ಕೃತ್ಯಗಳನ್ನು ಮಾಡುವ ಪ್ರೇರಣೆ ನೀಡಿದೆ.

ಬಿಜೆಪಿ ಮತ್ತು ಸಂಘ ಪರಿವಾರದ ಮೇಲಿನ ಹಿಂತೆಗೆದುಕೊಂಡಿರುವ ಕೇಸುಗಳ ವಿವರ.

ಕಲ್ಲಡ್ಕ ಭಟ್ಟರ ಶಾಲೆಗೆ 15 ಲಕ್ಷ ರೂ ದೇಣಿಗೆ ?

ಬಂಟ್ವಾಳ ತಾಲ್ಲೂಕಿನಲ್ಲಿರುವ ಶ್ರೀ ರಾಮ್ ವಿದ್ಯಾ ಕೇಂದ್ರ ಆರ್.ಎಸ್.ಎಸ್ ರೂವಾರಿ ಕಲ್ಲಡ್ಕ ಪ್ರಭಾಕರ ಭಟ್ಟರ ಮಾಲಿಕತ್ವದ ಶಾಲೆ. ಈ ಶಾಲೆಗೆ ಕೊಲ್ಲೂರು ಮೂಕಾಂಬಿಕಾ ದೇವಾಸ್ಥಾನದ ನಿಧಿಯಿಂದ 2007-08ರಲ್ಲಿ 15,02,910 ರೂ. ನೀಡಿದ್ದಾರೆಂದು

ಕುಂದಾಪುರ ತಾಲ್ಲೂಕಿನ ಬಸರೂರು ಅಪ್ಪಣ್ಣ ಹೆಗ್ಡೆ ಆಪಾದಿಸಿದ್ದಾರೆ. ಈ ಹಣ ದಕ್ಕಿದ್ದು ಹೇಗೆಂದರೆ, ಕಲ್ಲಡ್ಕ ಭಟ್ಟರ ಆತ್ಮೀಯ ಗೆಳೆಯ ಅಡ್ಯಾಂತಾಯರನ್ನು ಕೊಲ್ಲೂರು ಮೂಕಾಂಬಿಕ ದೇವಸ್ಥಾನದ ಆಡಳಿತ ಮೊಕ್ತೇಸರರನ್ನಾಗಿ ಮಾಡಿದ್ದು ಕಲ್ಲಡ್ಕ ಪ್ರಭಾಕರ ಭಟ್ಟರು. ಅದಕ್ಕೆ ದಕ್ಷಿಣೆಯಾಗಿ ಅಷ್ಟೊಂದು ಮೊತ್ತದ ಕಾಣಿಕೆಯನ್ನು ದೇವಳದ ಹುಂಡಿಯಿಂದ ನೀಡಿದ್ದಾರೆ, ಹಿಂದೂ ಸಂಸ್ಕೃತಿಯ ರಕ್ಷಕರು.

ವಿವೇಕಾನಂದರಿಗೆ ನಮಿಸುವ ನರೇಂದ್ರ ಮೋದಿ

ಒಂದು ದೈತ್ಯ ವಂಚನೆ

ಸೀತಾರಾಂ ಯೆಚೂರಿ

ಯುಪಿಎ-2 ಸರಕಾರ 'ತೈಲ ಕಂಪನಿಗಳ ಏರುತ್ತಿರುವ ನಷ್ಟಗಳನ್ನು' ತಡೆಯುವ ಹೆಸರಿನಲ್ಲಿ ಇನ್ನೊಂದು ಸುತ್ತಿನ ಪೆಟ್ರೋಲಿಯಂ ದರ ಏರಿಕೆಗಳಿಗೆ ಮುಂದಾಗಿದೆ. ಅತ್ತ ಬಿಜೆಪಿಯ ಒಬ್ಬ ಪ್ರಧಾನ ಮಂತ್ರಿ ಹುದ್ದೆಯ ಆಕಾಂಕ್ಷಿ 2002ರ ಕೋಮು ಹತ್ಯಾಕಾಂಡದ ರಕ್ತದಿಂದ ತೊಯ್ದ ಕೈಗಳಿಂದ ಸ್ವಾಮಿ ವಿವೇಕಾನಂದರಿಗೆ ನಮಿಸುತ್ತ ಚುನಾವಣಾ ಪ್ರಚಾರದ 'ರಥಯಾತ್ರೆ' ಆರಂಭಿಸಿದ್ದಾರೆ. ಅದಕ್ಕಿಂತ ದೊಡ್ಡದಾದ ವಂಚನೆ, ಇದಕ್ಕಿಂತ ಹೇಯವಾದ ಅಪ್ರಾಮಾಣಿಕತೆ ಬೇರೆ ಇದೆಯೇ?

ಗುಜರಾತ ರಾಜ್ಯದಲ್ಲಿ ನರೇಂದ್ರ ಮೋದಿಯವರ ಚುನಾವಣಾ ಪ್ರಚಾರದ ಆರಂಭ. ಅದನ್ನು ಅವರು ಒಂದು 'ರಥಯಾತ್ರೆ'ಯ ಮೂಲಕ ಆರಂಭಿಸಿದ್ದಾರೆ! ಇದಕ್ಕೆ ಮಾದರಿ ಅಡ್ವಾಣಿಯವರ ಕುಖ್ಯಾತ 'ರಥಯಾತ್ರೆ', ತಾನು ಸಾಗಿದ ದಾರಿಯಲ್ಲೆಲ್ಲ ಸಾವು-ನೋವುಗಳ ಕುರುಹುಗಳನ್ನು ಬಿಟ್ಟು ಹೋದ, ಅಂತಿಮವಾಗಿ ಬಾಬ್ರಿ ಮಸೀದಿಯ ಧ್ವಂಸಕ್ಕೆ ಕಾರಣವಾದ 'ರಥಯಾತ್ರೆ'. ಆದರೂ ಈ ಮಾದರಿ ಹಾಕಿಕೊಟ್ಟ ಅಡ್ವಾಣಿಯವರೇ ಅಲ್ಲಿ ಕಾಣಿಸಿಕೊಳ್ಳಲಿಲ್ಲ. ಇದು ನಿಜಕ್ಕೂ ವಿಚಿತ್ರ- ಏಕೆಂದರೆ, ಅವರೇ ಸ್ವತಃ ಗುಜರಾತದ ರಾಜಧಾನಿ ಗಾಂಧಿನಗರವನ್ನು ಲೋಕಸಭೆಯಲ್ಲಿ ಪ್ರತಿನಿಧಿಸುತ್ತಿರುವವರು. ಹೌದು, ಈಗ ಇದರಲ್ಲಿ ಅಷ್ಟೇನೂ ಆಶ್ಚರ್ಯ ಇಲ್ಲ. ಏಕೆಂದರೆ, ಭವಿಷ್ಯದ ಪ್ರಧಾನ ಮಂತ್ರಿಯ ಹುದ್ದೆಯ ಭ್ರಾಂತಿ ಬಿಜೆಪಿಯೊಳಗೆ ಒಂದು ಹುಚ್ಚು ಸ್ಪರ್ಧೆಯನ್ನು ಉಂಟು ಮಾಡಿರುವುದು ಎಲ್ಲರಿಗೂ ಗೊತ್ತು. ಇದರಲ್ಲಿ ಶಿವಸೇನೆಯ ಸರ್ವೋಚ್ಚ ಮುಖಂಡ ಬಾಳ ಠಾಕ್ರೆಯವರೂ ತಾವೇಕೆ ಹಿಂದೆ ಬೀಳಬೇಕೆಂದುಕೊಳ್ಳುತ್ತ, ತನ್ನ ಪ್ರಕಾರ ಸುಷ್ಮಾ ಸ್ವರಾಜ್ ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ ಶಿವಸೇನೆ ನಡೆಸಿರುವ ಬಿಹಾರಿಗಳ, ಉತ್ತರ ಭಾರತೀಯರ ವಿರುದ್ಧವಾದ ಕರಾಳ ಪ್ರಚಾರದ ಹಿನ್ನೆಲೆಯಲ್ಲಿ ಬಿಹಾರದ ಮುಖ್ಯಮಂತ್ರಿಗಳು ತಾನೂ ಪ್ರಧಾನ ಮಂತ್ರಿಯಾಗುವ ಭ್ರಮೆಯನ್ನು ಬೆಳೆಸಿಕೊಳ್ಳದಂತೆ ಮೊದಲೇ ತಡೆಯುವ ಪ್ರಯತ್ನ ಇದಾಗಿರಲೂ ಬಹುದು.

ಹೇಯ ಪ್ರದರ್ಶನ

ನರೇಂದ್ರ ಮೋದಿ ತನ್ನ ಪ್ರಚಾರವನ್ನು ಸ್ವಾಮಿ ವಿವೇಕಾನಂದರಿಗೆ ನಮನ ಸಲ್ಲಿಸುತ್ತ ಆರಂಭಿಸಿದ್ದು ನಿಜಕ್ಕೂ ಗೋಸುಂಬೆತನದ, ಅಪ್ರಾಮಾಣಿಕತೆಯ ಅತ್ಯಂತ ಹೇಯ ಪ್ರದರ್ಶನಗಳ ಸಾಲಿಗೆ ಸೇರುವಂತದ್ದು. ಗುಜರಾತಿನ 2002ರ ಕೋಮುವಾದಿ ಹತ್ಯಾಕಾಂಡದ ರಕ್ತಸಿಕ್ತ ಕೈಗಳಿಂದ ನಮಿಸುವ ಮೊದಲು ಆತ ಸ್ವಾಮಿ ವಿವೇಕಾನಂದರ ಕೆಲವಾದರೂ ಬರವಣಿಗೆಗಳನ್ನು ಓದಿಕೊಳ್ಳಬೇಕಾಗಿತ್ತು. "ನನ್ನ ಧರ್ಮ ಮಾತ್ರವೇ ಬದುಕುಳಿಯಬೇಕು, ಬೇರೆಲ್ಲವೂ ಧ್ವಂಸವಾಗಿ ಬಿಡಬೇಕು ಎಂದು ಯಾರಾದರೂ ಕನಸು ಕಾಣುತ್ತಿದ್ದರೆ, ಆತನ ಬಗ್ಗೆ ನಾನು ಹೃದಯಾಂತರಾಳದಿಂದ ಕನಿಕರ ಪಡುತ್ತೇನೆ, ಯಾರೇ ಪ್ರತಿರೋಧಿಸಿದರೂ, ಬೇಗನೇ ಪ್ರತಿಯೊಂದು ಧರ್ಮದ ಪತಾಕೆಯಲ್ಲಿ ನೇರವಾಗಿ, ಕಿತ್ತಾಡಬೇಡಿ, ಹೊಂದಾಣಿಕೆಯಿರಲಿ, ಧ್ವಂಸ ಬೇಡ, ಸಾಮರಸ್ಯ, ಶಾಂತಿಯಿರಲಿ, ವೈಮನಸ್ಯವಲ್ಲ ಎಂದು ಬರೆದಿರುತ್ತದೆ" ಎಂಬುದು ಅವರ ಒಂದು ಪ್ರಸಿದ್ಧ ಉದ್ಗಾರ.

1893ರಲ್ಲಿ ಚಿಕಾಗೋದಲ್ಲಿ ವಿಶ್ವ ಧರ್ಮಗಳ ಸಮ್ಮೇಳನದ ತಮ್ಮ ಪ್ರಖ್ಯಾತ ಭಾಷಣವನ್ನು ಮುಗಿಸುತ್ತಾ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಸಂಕುಚಿತ ಪಂಥವಾದ, ಕುರುಡು ನಂಬಿಕೆ, ಮತ್ತು ಅದರ ಭೀಕರ ವಂಶಜ, ಧರ್ಮಾಂಧತೆ, ಈ ಸುಂದರ ಭೂಮಿಯನ್ನು ಬಹಳ ಕಾಲದಿಂದ ಅಮರಿಕೊಂಡಿದೆ. ಇವು ಭೂಮಿಯನ್ನು ಹಿಂಸಾಚಾರಗಳಿಂದ ತುಂಬಿಸಿಟ್ಟಿವೆ, ತೊಯ್ದಿವೆ, ಕೆಲವೊಮ್ಮೆ ಮಾನವ ರಕ್ತದಿಂದಲೂ ತೊಯ್ದಿವೆ, ನಾಗರಿಕತೆಯನ್ನು ಧ್ವಂಸಮಾಡಿವೆ, ಮತ್ತು ಇಡಿ-ಇಡಿ ದೇಶಗಳನ್ನು ಹತಾಶೆಯತ್ತ ನೂಕಿವೆ. ಈ ಭೀಕರ ರಕ್ಕಸರು ಇದ್ದಿರದಿದ್ದರೆ, ಮಾನವ ಸಮಾಜ ಈಗಿರುವುದಕ್ಕಿಂತಲೂ ಅದೆಷ್ಟೋ ಹೆಚ್ಚು ಮುನ್ನಡೆ ಸಾಧಿಸುತ್ತಿತ್ತು. ಆದರೆ ಅವರ ಅಂತ್ಯದ ಸಮಯವೀಗ ಬಂದಿದೆ; ಇಂದು ಬೆಳಿಗ್ಗೆ ಈ ಸಮಾವೇಶದ ಗೌರವಾರ್ಥ ಬಾರಿಸಿದ ಗಂಟೆ ಎಲ್ಲ ಧರ್ಮಾಂಧತೆಗಳ, ಖಡ್ಗಗಳಿಂದಾಗಲಿ, ಲೇಖಣಿಗಳಿಂದಾಗಲಿ, ಮತ್ತು ಅದೇ ಗುರಿಯತ್ತ ಮುಖಮಾಡಿರುವ ವ್ಯಕ್ತಿಗಳ ನಡುವಿನಲ್ಲಿ ಕಟು ಭಾವನೆಗಳ ಎಲ್ಲ ಕಿರುಕುಳಗಳನ್ನು ಕೊನೆಗೊಳಿಸುವ ಸಾವಿನ ಗಂಟೆಯಾಗಲಿ ಎಂದು ನಾನು ಉತ್ಕಟ ಭಾವದಿಂದ ಆಶಿಸುತ್ತೇನೆ."

ದುರದೃಷ್ಟವಶಾತ್, ಆ ಸಮಯ, ಒಂದು ಶತಮಾನ ಕಳೆದರೂ ಇನ್ನೂ ಬಂದಿಲ್ಲ. ನಿಜ, ನರೇಂದ್ರ ಮೋದಿಗೆ ಅಂತಹ ಒಂದು ಸಮಯ ಬಂದೇ ಬಿಟ್ಟಿದೆಯೇ ಎಂಬುದನ್ನು ಗುಜರಾತಿನ ಮತದಾರರು ನಿರ್ಧರಿಸುತ್ತಾರೆ.

ಕಾಂಗ್ರೆಸ್-ಬಿಜೆಪಿ ಒಂದೇ ಪಾತಳಿಯಲ್ಲಿ

ಈ ನಡುವೆ ದೇಶದ ಬಹುಭಾಗಗಳಲ್ಲಿ ಕೋಮುವಾದಿ ಧ್ರುವೀಕರಣವನ್ನು ಬಡಿದೆಬ್ಬಿಸುವ ಪ್ರಯತ್ನಗಳನ್ನು ಬಿಜೆಪಿ/ಆರೆಸ್ಸೆಸ್ ನಡೆಸಿವೆ. ಅಸ್ಸಾಂನ ಬೋಡೋಲ್ಯಾಂಡ್ ಪ್ರದೇಶದಲ್ಲಿ ನಡೆದ ಅತ್ಯಂತ ದುರದೃಷ್ಟಕರ, ಖಂಡನಾರ್ಹ ಹಿಂಸಾಚಾರ, ಬೇರೆಡೆಗಳಲ್ಲಿ, ವಿಶೇಷವಾಗಿ ಮತ್ತೊಂದು ಬಿಜೆಪಿ ಆಳ್ವಿಕೆಯ ರಾಜ್ಯವಾದ ಕರ್ನಾಟಕದಲ್ಲಿ(ಇಲ್ಲೂ ಸದ್ಯದಲ್ಲೇ ಚುನಾವಣೆ ನಡೆಯಲಿದೆ) ಅದರ ಪ್ರತಿಧ್ವನಿಗಳು, ಚುನಾವಣಾ ಲಾಭ ಗಿಟ್ಟಿಸಲಿಕ್ಕಾಗಿ ಕೋಮುವಾದಿ ಧ್ರುವೀಕರಣ ನಡೆಸುವ ಈಗ ಸುಪರಿಚಿತವಾಗಿ ಬಿಟ್ಟಿರುವ ಕಾರ್ಯತಂತ್ರದ ಭಾಗವೆಂದೇ ಕಾಣ ಬರುತ್ತದೆ. ನಿಜ, ಇದು ಮುಗ್ಧ ಜೀವಗಳ ಬಲಿಯೊಂದಿಗೆ, ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ ತರುವ ಮೂಲಕ ಮಾತ್ರವೇ ಸಾಧ್ಯ.



ಹೀಗೆ ಮಾಡುತ್ತ, ಬಿಜೆಪಿ ಯುಪಿಎ ಸರಕಾರದ ಆರ್ಥಿಕ ನೀತಿಗಳೊಂದಿಗೆ, ಜನತೆಯ ಮೇಲೆ ಅದು ನಿರಂತರವಾಗಿ ಹೇರುತ್ತಿರುವ ಹೊರೆಗಳಿಗೆ ತನ್ನ ಸಹಮತವನ್ನು ತೋರಿಸುತ್ತಿದೆಯಷ್ಟೇ. ಜನತೆಯ ಬದುಕಿನ ಮೇಲಿನ ಈ ದಾಳಿಗಳಲ್ಲಿ, ಇನ್ನೂ ಹಲವು ನವ-ಉದಾರವಾದಿ ಧೋರಣೆಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ಪಾತಳಿಯಲ್ಲಿ ನಿಂತಿರುತ್ತವೆ.

ಹೀಗಿರುವಾಗ, ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಲ್ಲಿ ಆಗಲಿರುವ ಏರಿಕೆಯ ಬಗ್ಗೆ ಹೇಳಲು ಅದರ ಬಳಿ ಏನೂ ಇಲ್ಲದಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯ ವಿವಿಧ ಇಂಧನಗಳ ಬೆಲೆಗಳಲ್ಲಿ ಎಷ್ಟೆಷ್ಟು ದರ ಪರಿಷ್ಕರಣೆ ಮಾಡಬೇಕು ಎಂಬ ಬಗ್ಗೆ ಒಂದು ಸಂಪುಟ ಟಿಪ್ಪಣಿಯನ್ನು ಸಲ್ಲಿಸಿದೆಯಂತೆ. ಪೆಟ್ರೋಲ್ ದರವನ್ನು ಲೀಟರಿಗೆ 5 ರೂ.ಗಳಷ್ಟು ಹೆಚ್ಚಿಸಬಹುದು ಎಂದು ಮಾಧ್ಯಮ ವರದಿಗಳು ಹೇಳುತ್ತಿವೆ. ಸ್ವತಃ ಮಂತ್ರಿಗಳೇ ಹೇಳುತ್ತಾರೆ, "ತೈಲ ಉತ್ಪನ್ನಗಳ ಬೆಲೆಗಳನ್ನು ಏರಿಸುವುದು ಎಷ್ಟೇ ನೋವಿನ, ಕಷ್ಟದಾಯಕ ಸಂಗತಿಯಾದರೂ, ಹೆಚ್ಚಳವನ್ನು ತಪ್ಪಿಸಲು ಸಾಧ್ಯವಿಲ್ಲ" ಎಂದಿದ್ದಾರೆ. "ವಿಪರೀತ ಹಣಕಾಸು ಕೊರತೆಯನ್ನು ಮತ್ತು ತೈಲ ಕಂಪನಿಗಳ ಏರುತ್ತಿರುವ ನಷ್ಟಗಳನ್ನು ತಡೆಯುವುದು" ಇದಕ್ಕೆ ಕಾರಣವಂತೆ.

ಯುಪಿಎ-2ರ ವಂಚನೆ

ಸತ್ಯಕ್ಕಿಂತ ಇನ್ನೂ ದೂರ ಇರಬಹುದಾದ ಸಂಗತಿ ಬೇರಿದೆಯೇ? ಈ ಹಿಂದೆ ಹಲವು ಬಾರಿ ಹೇಳಿರುವಂತೆ, ಈ ವಿಪರೀತ ಹಣಕಾಸು ಕೊರತೆ ನಮ್ಮ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ 6.9ಶೇ. ಎಂದರೆ, 5.22 ಲಕ್ಷ ಕೋಟಿ ರೂ. ಆಗುತ್ತದೆ. ಅದೇ ಹಣಕಾಸು ವರ್ಷದಲ್ಲಿ ಇದೇ ಸರಕಾರ ಕಾರ್ಪೊರೇಟುಗಳಿಗೆ ಮತ್ತು ಇತರ ಶ್ರೀಮಂತರಿಗೆ ನೀಡಿರುವ ವಿವಿಧ ತೆರಿಗೆ ರಿಯಾಯ್ತಿಗಳ ಮೊತ್ತ 5.28 ಲಕ್ಷ ಕೋಟಿ ರೂ.ಗಳು. ಅಂದರೆ ಈಗಾಗಲೇ ಶ್ರೀಮಂತರಾಗಿರುವವರಿಗೆ ಅನಗತ್ಯವಾಗಿದ್ದ ಈ ಬಕ್ಷೀಸುಗಳನ್ನು ಕೊಟ್ಟಿರದಿದ್ದರೆ, ಹಣಕಾಸು ಕೊರತೆಯೆಂಬುದೇ ಇರುತ್ತಿರಲಿಲ್ಲ. ಶ್ರೀಮಂತರಿಗೆ ಇಷ್ಟು ದೊಡ್ಡ ಪ್ರಮಾಣದ ಸಬ್ಸಿಡಿಗಳನ್ನು ಕೊಟ್ಟ ಮೇಲೆ, ಯುಪಿಎ-2 ಸರಕಾರ, ಅದರಿಂದ ಉಂಟಾದ ಹಣಕಾಸು ಕೊರತೆಯನ್ನು ತಡೆಯುವ ಹೆಸರಿನಲ್ಲಿ ಈಗ ಬಹುಪಾಲು ಜನಗಳ ಮೇಲೆ ತೀವ್ರ ಹೊರೆಗಳನ್ನು ಹೇರುತ್ತಿದೆ, ಆಮೂಲಕ ಬಡವರಿಗೆ, ಅಗತ್ಯವುಳ್ಳವರಿಗೆ ಕೊಡುತ್ತಿದ್ದ ಅಲ್ಪ-ಸ್ವಲ್ಪ ಸಬ್ಸಿಡಿಗಳಲ್ಲಿಯೂ ಕಡಿತ ತರುತ್ತಿದೆ.

ತೈಲ ಕಂಪನಿಗಳು ನಿಜಕ್ಕೂ ನಷ್ಟದಲ್ಲಿವೆಯೇ? ನಿಜಸಂಗತಿಗಳನ್ನು ಪರೀಕ್ಷಿಸೋಣ: ಒಎನ್‌ಜಿಸಿ, ಅಂದರೆ ತೈಲ ಮತ್ತು ನೈಸರ್ಗಿಕ ಅನಿಲ ನಿಗಮ 2011-12ರಲ್ಲಿ ರೂ.25,213 ಕೋಟಿ ರೂ.ಗಳ ನಿವ್ವಳ ಲಾಭ ಘೋಷಿಸಿದೆ. ಮುಂದಿನ ಮೂರು ತಿಂಗಳ ಅವಧಿಯ ಕೊನೆಯಲ್ಲಿ, ಜೂನ್ 30, 2012 ರಂದು ಅದರ ಲಾಭ ಮತ್ತೆ 48.4ಶೇ.ದಷ್ಟು ಏರಿದೆ ಎಂದು ತಿಳಿಸಿದೆ. ಇಂಡಿಯನ್ ಆಯಿಲ್ ಕಾರ್ಪೊರೇಶನ್ 2011-12ರಲ್ಲಿ ರೂ.4265.27 ಕೋಟಿ ರೂ.ಗಳ ನಿವ್ವಳ ಲಾಭ ಸಾರಿದೆ.

ಪುಟ 11ಕ್ಕೆ



"ಯುವ ಭಾರತದ ಭವಿಷ್ಯ ಯುವ ಜನರೇ ನಿರ್ಧರಿಸಬೇಕು"

– ಯೆಚೂರಿ

ಡಿವೈಎಫ್ಐ 9ನೆಯ ಅಖಿಲಭಾರತ ಸಮ್ಮೇಳನದಂಗವಾಗಿ ಬೆಂಗಳೂರಿನ ರೈಲ್ವೇ ನಿಲ್ದಾಣದಿಂದ ಹೊರಟ ಬೃಹತ್ ಮೆರವಣಿಗೆಯು ಕೆಂಪು ನಕ್ಷತ್ರಗಳ ಸಾಗರವನ್ನು ಸೃಷ್ಟಿಸಿತು.

ಮೆರವಣಿಗೆಯಲ್ಲಿ ಡಿವೈಎಫ್ಐ ಹೋರಾಟಗಾಥೆಯನ್ನು ಹೇಳುವ ಭಿತ್ತಿ ಚಿತ್ರಗಳು ಹಾಗೂ ದೇಶಕ್ಕಾಗಿ ತ್ಯಾಗ, ಬಲಿದಾನಗಳನ್ನು ನಡೆಸಿದ ಕ್ರಾಂತಿಕಾರಿಗಳ ಭಾವಚಿತ್ರಗಳು ಗಮನ ಸೆಳೆದವು.

ಆಯಾ ರಾಜ್ಯದ ಡಿವೈಎಫ್ಐ ಹೋರಾಟವನ್ನು ಸ್ಮರಿಸುವ ಚಿತ್ರಗಳು, ಫಲಕಗಳೊಂದಿಗೆ ಮೆರವಣಿಗೆ ವರ್ಣರಂಜಿತವಾಗಿತ್ತು. ಮೆರವಣಿಗೆಯಲ್ಲಿ ಅದಮ್ಯ ಕ್ರಾಂತಿಕಾರಿ ಚೇಗವಾರ, ಭಗತ್ ಸಿಂಗ್ ಚಿತ್ರಗಳು ಮಂಚೂಣಿಯಲ್ಲಿದ್ದವು. ಭಾರತದ ಪ್ರಜಾಸತ್ತಾತ್ಮಕ ಯುವಜನತೆಯು ದೇಶದ ಭವಿಷ್ಯವನ್ನು ರೂಪಿಸುತ್ತೆ ಎಂಬ ಆತ್ಮ ವಿಶ್ವಾಸವನ್ನು ನೀಡುವಂತೆ ಮೆರವಣಿಗೆಯು ಧೀರ ನಡುಗೆಯನ್ನು ಪ್ರಿಥಂ ಪಾರ್ಕ್ ವರೆಗೆ ನಡೆಸಿತು. ದಾರಿಯಲ್ಲಿ ಸಿಐಟಿಯು ಕಾರ್ಮಿಕ ಸಂಘಟನೆ ಹಾಗೂ ಎಸ್.ಎಫ್.ಐ. ಕಾರ್ಯಕರ್ತರು ಕೆಂಪು ಹೂವುಗಳನ್ನು ಎರಚುವ ಮೂಲಕ ಕೆಂಪು ಸ್ವಾಗತ ನೀಡಿದರು.

ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಯುಪಿಎ ಸ್ಥಿತಿ 'ಅಲಿಬಾಬಾ ಮತ್ತು 40 ಮಂದಿ ಕಳ್ಳರ ಕತೆಯಂತಿದೆ ಎಂದು ರಾಜ್ಯ ಸಭಾ ಸದಸ್ಯ ಸಿತಾರಾಂ ಯೆಚೂರಿ ವ್ಯಂಗವಾಡಿದರು. ಭಾರತ ಪ್ರಜಸತ್ತಾತ್ಮಕ ಯುವಜನ ಫೆಡರೇಷನ್ ಬೆಂಗಳೂರಿನಲ್ಲಿ ಆಯೋಜಿಸಿರುವ '9 ನೇ ಅಖಿಲ ಭಾರತ ಸಮ್ಮೇಳನದ ಬಹಿರಂಗ ಸಭೆ' ಉದ್ದೇಶಿಸಿ ಅವರು ಮಾತನಾಡಿದರು. ಸರ್ಕಾರದ ನೇತೃತ್ವ ವಹಿಸಿರುವ ಅಲಿಬಾಬಾ ಸಭ್ಯರಂತೆ ಕಂಡು ಬಂದರೂ ಅವರ ಹಿಂದಿರುವ ಕಳ್ಳರು ಲೂಟಿಯಲ್ಲಿ ತೊಡಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಪುಟ ಸಭೆ ತಿಹಾರ ಜೈಲಿನಲ್ಲಿ :

ಸರಣಿ ಹಗರಣಗಳ ಸರಮಾಲೆಯೇ ಬಿಚ್ಚಿಕೊಳ್ಳುತ್ತಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದ ಅನೇಕ ನಾಯಕರು ಸರತಿ ಸಾಲಿನಲ್ಲಿ ತಿಹಾರ್ ಜೈಲಿಗೆ ಸೇರುತ್ತಿದ್ದಾರೆ.ಆದ್ದರಿಂದ ಕೇಂದ್ರ ಸರಕಾರದ್ಧ ಮುಂದಿನ ಸಚಿವ ಸಂಪುಟ ಸಭೆ ತಿಹಾರ ಜೈಲಿನಲ್ಲಿ ನಡೆಯಲಿದೆ. ಕೇಂದ್ರ ಸರಕಾರ 2ಜಿ ಹಗರಣದಲ್ಲಿ ರೂ 1.76 ಲಕ್ಷ ಕೋಟಿ ಹಣವನ್ನು ಲೂಟಿ ಮಾಡಿದೆ.ಕಲ್ಲಿದ್ದಲು ಹಗರಣದಲ್ಲಿ ರೂ 1.86 ಲಕ್ಷ ಕೋಟಿ ಸರಕಾರದ ಬೊಕ್ಕಸಕ್ಕೆ ನಷ್ಟವಾಗಿದೆ. ಇದೇ ಹಣ ಶಿಕ್ಷಣದ ಮೇಲೆ ಸಕಾರ ವಿನಿಯೋಗಿಸಿದ್ದರೆ, ಮುಂದಿನ ಐದು ವರ್ಷಗಳವರೆಗೆ ದೇಶದ ಎಲ್ಲಾ 6–14 ವರ್ಷದ ಮಕ್ಕಳಿಗೆ ಶಿಕ್ಷಣ ಒದಗಿಸಬಹುದಿತ್ತು. ಇದೇ ಹಣ ಬಳಸಿ ತಿಂಗಳಿಗೆ 35 ಕಿಲೋದಂತೆ ಯಾವುದೇ ಬಿಪಿಎಲ್ ಮತ್ತು ಎಪಿಎಲ್‌ಗಳ ಭೇದವಿಲ್ಲದೆ ಪ್ರತಿ ಕಿಲೋಗೆ ರೂ 2 ರಂತೆ ಮಾರಾಟ ಮಾಡಬಹುದಾಗಿತ್ತು. ಎಂದು ಕೇಂದ್ರದ ಮೇಲೆ ಹರಿಹಾಯ್ದರು.

ಅಸಮಾನತೆ ಹೋಗಲಾಡಿಸಿ :

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಮಾತನಾಡಿ ದೇಶಕ್ಕೆ ಸ್ವಾತಂತ್ರ್ಯ ಬಂದು ಅನೇಕ ವರ್ಷ ಕಳೆದರೂ ಅಸಮಾನತೆ ತಾಂಡವವಾಡುತ್ತಿದೆ. ಇದಕ್ಕೆ ತಕ್ಕಂತೆ ಅಧಿಕಾರಕ್ಕೆ ಬಂದ ಸರಕಾರಗಳು ದೇಶದ ಶೆ.30 ರಷ್ಟು ಜನರನ್ನು ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದಾರೆ. ಶೆ. 10 ರಷ್ಟು ಜನರ ಅಭಿವೃದ್ಧಿಗಾಗಿ ಸರಕಾರ ಪಣತೊಟ್ಟು ಕಾರ್ಯನಿರ್ವಹಿಸುತ್ತಿದೆ. ಅಭಿವೃದ್ಧಿಯ ಬದಲಾಗಿ, ಹಣಕ್ಕೆ ಹೆಚ್ಚಿನ ಆಧ್ಯತೆ ನೀಡಿರುವುದರಿಂದ ಅಸಮಾನತೆಯ ಗೋಡೆಗಳು ನಿರ್ಮಾಣವಾಗುತ್ತಿವೆ ಎಂದು ಅಸಮಧಾನ ವ್ಯಕ್ತಪಡಿಸಿದರು. ಡಿ.ವೈ.ಎಫ್.ಐ ಪ್ರಧಾನ ಕಾರ್ಯದರ್ಶಿಗಳಾದ ತಪಸ್ಸಿನ್ಹಾ, ಎಂ.ಎ.ಬೇಬಿ, ಕೇರಳದ ಮಾಜಿ ಶಿಕ್ಷಣ ಸಚಿವರು, ಸ್ವಾಗತ ಸಮಿತಿ ಅಧ್ಯಕ್ಷರಾದ ಜಿ.ಸಿ ಬಯ್ಯಾರೆಡ್ಡಿ, ರಾಜ್ಯಾಧ್ಯಕ್ಷ ಎನ್.ಎಲ್.ಭರತ್‌ರಾಜ್, ಮಾಜಿ ಶಾಸಕ ಶ್ರೀರಾಮ್‌ರೆಡ್ಡಿ ಇದ್ದರು.

ಉದ್ಘಾಟನೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಿವೈಎಫ್ಐ ರಾಷ್ಟ್ರಾಧ್ಯಕ್ಷ ಪಿ. ಶ್ರೀರಾಮಕೃಷ್ಣನ್ ಮಾತನಾಡಿ ಡಿವೈಎಫ್ಐ ಸಮರಶೀಲ ಹೋರಾಟ ನಡೆಸುತ್ತಾ ಬಂದಿದೆ. ಅದನ್ನು ವಿಸ್ತರಿಸುವ ಮೂಲಕ ಅಮೇರಿಕಾ ಸಾಮ್ರಾಜ್ಯಷಾಹಿಯನ್ನು ಸೋಲಿಸಬೇಕು ಎಂದರು.

ಆರಂಭದಲ್ಲಿ ಡಿ.ವೈ.ಎಫ್.ಐ.ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರ ಮೂರ್ತಿ ಸ್ವಾಗತಿಸಿದರು, ಡಿ.ವೈ.ಎಫ್.ಐ.ರಾಜ್ಯ ಅಧ್ಯಕ್ಷರಾದ ಎನ್.ಎಲ್. ಭರತ್ ರಾಜ್ ಕಾರ್ಯಕ್ರಮ ನಿರೂಪಿಸಿದರು. ಡಿವೈಎಫ್ಐ ರಾಜ್ಯ ಖಜಾಂಚಿ ಲಿಂಗರಾಜು ವಂದಿಸಿದರು.







"ಪ್ರಜಾಪ್ರಭುತ್ವವೆಂದರೆ ಚುನಾವಣೆ ಮಾತ್ರವಲ್ಲ..."

– ನಾಡೋಜ ಡಾ. ಬರಗೂರು ರಾಮಚಂದ್ರಪ್ಪ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ 9ನೇ ಅಖಿಲ ಭಾರತ ಸಮ್ಮೇಳನ ಸೆ.11ರ ಉತ್ಸಾಹ ಭರಿತ ಬೃಹತ್ ರ್‍ಯಾಲಿ ಹಾಗೂ ಸ್ಫೂರ್ತಿದಾಯಕ ಉದ್ಘಾಟನಾ ಸಮಾರಂಭದೊಂದಿಗೆ ಆರಂಭವಾಗಿದೆ. ರ್‍ಯಾಲಿ ಹಾಗೂ ಉದ್ಘಾಟನ ಸಮಾರಂಭದ ಕೆಲವು ಪ್ರಮುಖ ವಿವರಗಳು ಹೀಗಿವೆ.



ಸೆ. 11 ರ ಸಂಜೆ ರವೀಂದ್ರನಾಥ ಟಾಗೋರ ನಗರ, ಶಹೀದ್ ಮಂಚ್(ಪುರಭವನ, ಬೆಂಗಳೂರು)ನಲ್ಲಿ ಸಮ್ಮೇಳನದ ಉದ್ಘಾಟನಾ ಸಮಾರಂಭ ಆರಂಭವಾಯಿತು. ಸ್ವಾಗತ ಸಮಿತಿ ಅಧ್ಯಕ್ಷರಾದ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಸ್ವಾಗತಿಸಿದರು.





ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಸಮಾನತೆ ಮತ್ತು ಸ್ವಾತಂತ್ರ್ಯಗಳ ಪರಿಕಲ್ಪನೆಗಳ ಸತ್ವದ ಕರಿತು ಅಭಿನಂದಿಸಿ ಮಾತು ಆರಂಭಿಸಿದ ಬರಗೂರು ರಾಮಚಂದ್ರಪ್ಪ ಅವರು "ಇಂದು ಪ್ರಜಾಪ್ರಭುತ್ವದ ಹೆಸರಿನಲ್ಲಿ ಚುನಾವಣೆಯ ಪ್ರಕ್ರಿಯೆ ಮಾತ್ರವನ್ನೇ ಪ್ರಮುಖ ಅಂಶವಾಗಿಸಿ ಸಮಾನತೆಯ ಆಶಯಗಳನ್ನು ಹಿಂದಕ್ಕೆ ತಳ್ಳಲಾಗುತ್ತಿದೆ. ಸ್ವಾತಂತ್ರ್ಯದ ಹೆಸರಿನಲ್ಲಿ ಸಾಮ್ರಾಜ್ಯಶಾಹಿ ಆಶಯ ಹಾಗೂ ಬಂಡವಾಳಶಾಹಿ ಮಾದರಿಗಳಿಗೆ ಮಣೆ ಹಾಕಲಾಗುತ್ತಿದೆ. ಪ್ರಜಾಪ್ರಭುತ್ವದ ಅರ್ಥವನ್ನೇ ಪಲ್ಲಟಗೊಳಿಸಿ ಜನಸಾಮಾನ್ಯರ ಬದುಕನ್ನು ಬಲಿತೆಗೆದುಕೊಳ್ಳಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವ ಸಂಘಟನೆಯು ಪ್ರಜಾಪ್ರಭುತ್ವದ ನಿಜರೂಪವನ್ನು ಮುನ್ನೆಲೆಗೆ ತಂದು ಸಮಾನತೆಯಲ್ಲೇ ಸ್ವಾತಂತ್ರ್ಯವನ್ನು ಕಾಣುವ ದರ್ಶನವನ್ನು ಸಾದರಪಡಿಸುತ್ತಿದೆ. ಚುನಾವಣೆಯು ದೇಹ ಮತ್ತು ಸಮಾನತೆಯು ಆತ್ಮ ಇದು ನೈಜ ಪ್ರಜಾಪ್ರಭುತ್ವ. ಈಗ ದೇಹವನ್ನು ವಿಜೃಂಭಿಸಲಾಗುತ್ತಿದೆ; ಆತ್ಮವನ್ನು ಮರೆಯಲಾಗುತ್ತಿದೆ. ಇದು ಅತ್ಯಂತ ವಿಷಾದದ ಸಂಗತಿಯಾಗಿದೆ ಎಂದರು.

ಈ ಸಂದರ್ಭದಲ್ಲಿ – ಡಿವೈಎಫ್ಐ ನ ಆಶಯಗಳ ಪ್ರತೀಕವಾಗಿರುವ ಕಾಂ. ಭಗತ್‌ಸಿಂಗ್ ಅವರು ನ್ಯಾಯಾಲಯದಲ್ಲಿ ನಿಂತು ಹೇಳಿದ ಮಾತುಗಳಲ್ಲಿ ಮೂಡಿಬಂದ ಕ್ರಾಂತಿಯು ಕಲ್ಪನೆಗೆ ಡಿವೈಎಫ್ಐ ಸದಾ ಬದ್ಧವಾಗಿ ಕ್ರಿಯಾಶೀಲವಾಗಿದೆ. ಕ್ರೂರ ವ್ಯವಸ್ಥೆಯ ಬದಲಾವಣೆಗಾಗಿ ಯುವ ಮನಸ್ಸುಗಳನ್ನು ಸಜ್ಜು ಮಾಡುತ್ತಿದೆ; ಸಾಮಾಜಿಕ–ಆರ್ಥಿಕ ಅಸಮಾನತೆಗೆ ವಿರುದ್ಧವಾದ ಹೋರಾಟಗಳನ್ನು ನಡೆಸುತ್ತ ಬಂದಿದೆ. ನಿಜವಾದ ಅರ್ಥದಲ್ಲಿ

ಪುಟ 10ಕ್ಕೆ





ಸಾಧಕರಿಗೆ ಯುವ ಸನ್ಮಾನ

1. ಪದ್ಮಭೂಷಣ ಸಂಗೀತ ಕಲಾನಿಧಿ ಡಾ.ಆರ್.ಕೆ.ಶ್ರೀಕಂಠನ್
2. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಕಾದಂಬರಿಕಾರ ಡಾ. ಯು.ಆರ್.ಅನಂತಮೂರ್ತಿ
3. ಪ್ರಸಿದ್ಧ ಬರಹಗಾರ ಮತ್ತು ಚಿತ್ರ ನಿರ್ದೇಶಕರು ನಾಡೋಜ ಡಾ.ಬರಗೂರು ರಾಮಚಂದ್ರಪ್ಪ
4. ಪ್ರಸಿದ್ಧ ಪಿಟೀಲು ವಾದಕರು ಮತ್ತು ಸಂಗೀತ ವಿದ್ವಾಂಸರು ಡಾ.ಎಲ್.ಸುಬ್ರಮಣ್ಯಂ
5. ಪ್ರಸಿದ್ಧ ಗಾಯಕಿ ಪದ್ಮಶ್ರೀ ಕವಿತಾ ಕೃಷ್ಣಮೂರ್ತಿ
6. ಪ್ರಸಿದ್ಧ ವರ್ಣ ಚಿತ್ರ ಕಲಾವಿದರು ಶ್ರೀ ಎಸ್.ಜಿ.ವಾಸುದೇವ್
7. ಹಿರಿಯ ಸಾಹಿತಿಗಳು ಶ್ರೀಮತಿ ಸಾರಾ ಅಬೂಬಕರ್
8. ವಿಜ್ಞಾನ ಅಂಕಣಕಾರರು ಮತ್ತು ಪರಿಸರ ವಿಜ್ಞಾನಿ ಶ್ರೀ ನಾಗೇಶ್ ಹೆಗಡೆ
9. ಹಿರಿಯ ಸಾಹಿತಿಗಳು ಮತ್ತು ರಂಗ ವಿಮರ್ಶಕರು ಡಾ.ಕೆ.ಮರುಳಸಿದ್ದಪ್ಪ
10. ಹಿರಿಯ ಚಿಂತಕಿ ಮತ್ತು ಪತ್ರಕರ್ತೆ ಡಾ.ವಿಜಯಾ
11. ಯಕ್ಷಗಾನ ತಜ್ಞರು ಜವನಹಳ್ಳಿ ವೆಂಕಟೇಶ ರಾವ್
12. ಪ್ರಸಿದ್ಧ ರಂಗ ನಿರ್ದೇಶಕ ಶ್ರೀ ಸಿ.ಬಸವಲಿಂಗಯ್ಯ
13. ಪ್ರಸಿದ್ಧ ಜನಪರ ಗಾಯಕ ಶ್ರೀ ಜನಾರ್ಧನ (ಜನ್ನಿ)
14. ಏಕಲವ್ಯ ಪ್ರಶಸ್ತಿ ವಿಜೇತರು(ಅಥ್ಲೆಟಿಕ್ಸ್) ಶ್ರೀ ಸಿ.ವಿ.ರಾಜಣ್ಣ
15. ಏಕಲವ್ಯ ಪ್ರಶಸ್ತಿ ವಿಜೇತರು(ಬ್ಯಾಸ್ಕೆಟ್ಬಾಲ್) ಕು. ಕೃತಿಕಾ ಲಕ್ಷ್ಮಣ್.

ಇವರು ಸಮ್ಮೇಳನ ಉದ್ಘಟನಾ ಸಮಾರಂಭದಲ್ಲಿ ಸನ್ಮಾನಿಸಲಾದ ನಾನಾ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಗಣ್ಯರು, ಇದು ಉದ್ಘಾಟನಾ ಸಮಾರಂಭದ ವೈಶಿಷ್ಟ್ಯವಾಗಿತ್ತು.

ಪ್ರಜಾಪ್ರಭುತ್ವವೆಂದರೆ .....

ಪುಟ 9 ರಿಂದ

ಪ್ರಜಾಸತ್ತಾತ್ಮಕವಾಗಿರುವ ಡಿವೈಎಫ್ಐ ನ ರಾಷ್ಟ್ರೀಯ ಸಮ್ಮೇಳನವು ಈ ಸಾರಿ ಕರ್ನಾಟಕದಲ್ಲಿ ನಡೆಯುತ್ತಿರುವುದು ನಮ್ಮ ನಾಡಿನ ಪ್ರಗತಿಪರರಿಗೆಲ್ಲ ಸಂತೋಷದ ಹಾಗೂ ಸಂಭ್ರಮದ ಸಂಗತಿಯಾಗಿದೆ ಎಂದರು.

ಹಾಗೆ ನೋಡಿದರೆ ಕರ್ನಾಟಕಕ್ಕೆ ತನ್ನದೇ ಆದ ಪ್ರಗತಿಪರ ಪರಂಪರೆಯಿದೆ. ರಾಜಶಾಹಿಯ ಕಾಲದಲ್ಲೇ ಸಮಾನತೆಯ ಆಶಯಗಳನ್ನು ಚಿಗುರಿಸಿದ ಕೀರ್ತಿ ಕರ್ನಾಟಕದ್ದಾಗಿದೆ. ನನ್ನ ಈ ಮಾತಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಒಂದು ಉತ್ತಮ ಉದಾಹರಣೆ. ಅವರು ಶೋಷಿತರಿಗೆ ಉದ್ಯೋಗದಲ್ಲಿ ಮೀಸಲಾತಿ ಆಳವಡಿಸುವ ನೀತಿಯನ್ನು ತಂದರು. ಬಡವರ ಮಕ್ಕಳಿಗೆ ಶಿಕ್ಷಣ ಸಿಗಬೇಕೆಂದು ಪೋಷಕರಿಗೆ ಪ್ರೋತ್ಸಾಹ ಧನವನ್ನು ನೀಡಿ ಮಕ್ಕಳು ಶಾಲೆಗೆ ಸೇರುವಂತೆ ಮಾಡಿದರು. ವಯಸ್ಕರಿಗಾಗಿ ಸಾವಿರಾರು ರಾತ್ರಿ ಶಾಲೆಗಳನ್ನು ಆರಂಭಿಸಿದರು. 'ನನ್ನ ರಾಜ್ಯದಲ್ಲಿ ಎಲ್ಲ ಜಾತಿ ಮತ್ತು ಧರ್ಮದವರಿಗೂ ಶಿಕ್ಷಣ ಸಿಗಬೇಕು' ಎಂದು ಸಾರಿ ಶೈಕ್ಷಣಿಕ ಹಾಗೂ ಸಾಮಾಜಿಕ ಸಮಾನತೆಯನ್ನು ವಿಸ್ತರಿಸಿದರು.



ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಗತಿಪರ ಆಶಯಗಳನ್ನು ಜೀವಂತವಾಗಿಡುವ ಕೆಲಸವು ಸಾವಿರಾರು ವರ್ಷಗಳಿಂದ ನಡೆಯುತ್ತ ಬಂದಿದೆ. ಕೆಲವು ಮುಖ್ಯ ನಿದರ್ಶನಗಳನ್ನು ನೆನೆಯುವುದಾದರೆ – ಕನ್ನಡದ ಆದಿಕವಿ ಪಂಪ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಸಾರಿದ. ವಚನಕಾರರು ಧಾರ್ಮಿಕ ಸಮಾನತೆಯ ಚಳವಳಿಯನ್ನು ರೂಪಿಸಿದರು. ಕುಮಾರವ್ಯಾಸ ಕವಿಯು ಯುದ್ಧದ ವೈಭವವನ್ನು ಹೇಳುತ್ತಲೇ ಅದನ್ನು 'ಉರಿಯ ಪೇಟೆ' ಎಂದು ಕರೆದು ಯುದ್ಧವೂ ವ್ಯಾಪಾರವಾಗುತ್ತಿರುವುದನ್ನು ಸೂಚಿಸಿದ. ಕನಕದಾಸರು ಶ್ರೀಮಂತರನ್ನು ಅಕ್ಕಿಗೂ ಬಡವರನ್ನು ರಾಗಿಗೂ ಹೋಲಿಸಿ ಬಡ ಶ್ರಮಜೀವಿಗಳ ಶಕ್ತಿ ಸಾಮರ್ಥ್ಯಕ್ಕೆ ಮನ್ನಣೆ ನೀಡಿದರು. ಅನೇಕ ಸೂಫಿ ಸಂತರು ಧಾರ್ಮಿಕ ಸಾಮರಸ್ಯಕ್ಕೆ ಸಂಕೇತವಾದರು. ಆಧುನಿಕ ಸಂದರ್ಭಕ್ಕೆ ಬಂ ದರೆ ರಾಷ್ಟ್ರಕವಿ ಕುವೆಂಪು, ಬೇಂದ್ರೆ ಮುಂತಾದವರ ಸಮಾನತೆಯ ಆಶಯಗಳು ಕಣ್ಣೆದುರಿಗಿವೆ. ಜೊತೆಗೆ, ಸಮತಾವಾದಿ ಆಶಯಗಳಿಂದ ರೂಪುಗೊಂಡ ಪ್ರಗತಿಶೀಲ ಸಾಹಿತ್ಯ ಚಳವಳಿಯು ಬೀರಿದ ಪ್ರಭಾವವನ್ನು ಕಡೆಗಣಿಸುವಂತಿಲ್ಲ. ಇಪ್ಪತ್ತನೆಯ ಶತಮಾನದ ಎಪ್ಪತ್ತರ ದಶಕದಲ್ಲಿ ಗಟ್ಟಿದನಿಯಾಗಿ ಹುಟ್ಟಿಬಂದ ದಲಿತ ಚಳವಳಿ, ರೈತ ಚಳವಳಿ, ಕಾರ್ಮಿಕ ಚಳವಳಿ, ಬಂಡಾಯ ಸಾಹಿತ್ಯ ಚಳವಳಿ, ಸಮುದಾಯ ರಂಗ ಚಳವಳಿ, ಬೀದಿ ನಾಟಕ ಚಳವಳಿ ಮುಂತಾದ ಮುಖ್ಯ ಮಾದರಿಗಳನ್ನು ನಾವು ಉಲ್ಲೇಖಿಸಲೇಬೇಕು. ಬಹುಮುಖ್ಯವಾಗಿ ಎಲ್ಲ ಪ್ರಜಾಸತ್ತಾತ್ಮಕ ಎಡಪಂಥೀಯ ಚಳವಳಿಗಳೂ ಕರ್ನಾಟಕದಲ್ಲಿ ಜೀವಂತವಾಗಿವೆಯೆಂಬುದನ್ನು ಗಮನಿಸಬೇಕು. ಯಾವುದೇ ಸ್ವಹಿತಾಸಕ್ತಿಯಿಲ್ಲದೆ ಸಮರ್ಪಣಭಾವದಿಂದ ಕ್ರಿಯಾಶೀಲವಾಗಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಚಳವಳಿಗಳು ಮತ್ತಷ್ಟು ಗಟ್ಟಿಗೊಂಡು ವಿಸ್ತಾರಗೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ಯುವಜನರ ಪಾತ್ರ ಬಹುಮುಖ್ಯ ಎಂಬ ಅಂಶವನ್ನು ಕರ್ನಾಟಕದ ಪ್ರಗತಿಪರ ಶಕ್ತಿಗಳು ಮರೆತಿಲ್ಲ ಎಂದರು.

ಮಾನವೀಯ ಮೌಲ್ಯಗಳನ್ನು ಮುಖ್ಯವೆಂದು ಭಾವಿಸಿ ಸ್ವಾತಂತ್ರ್ಯ, ಸಮಾನತೆ, ಸಾಮರಸ್ಯಗಳನ್ನು ಮುನ್ನೆಲೆಗೆ ತಂದಿದ್ದ ಕರ್ನಾಟಕ ಇಂದು ಜಾತಿವಾದ ಮತ್ತು ಕೋಮುವಾದಗಳ ಆಟದ ಅಂಗಳವಾಗುತ್ತಿದೆ. ಕರ್ನಾಟಕವಷ್ಟೇ ಅಲ್ಲ ಇಡೀ ಇಂಡಿಯಾದ ಚಿತ್ರವೇ ಆಘಾತವುಂಟು ಮಾಡುತ್ತಿದೆ. ಸಾಮಾಜಿಕ ವಿವೇಕದ ಜಗತ್ತನ್ನು ಆರ್ಥಿಕ ಅವಿವೇಕ ಆವರಿಸಿಕೊಂಡಿದೆ. ಕೋಮು ಸಾಮರಸ್ಯದ ಆದರ್ಶವನ್ನು ಕೋಮು ಸಂಘರ್ಷವು ನಾಶಮಾಡುತ್ತಿದೆ. ಜಾತಿವಿನಾಶದ ಜಾಗದಲ್ಲಿ ಜಾತಿವಾದ ವಿಜೃಂಭಿಸುತ್ತಿದೆ.

ಮಾನವೀಯತೆಯ ಮೇಲೆ ಮತೀಯತೆ ಸವಾರಿ ಮಾಡುತ್ತಿದೆ. ಸದಾಚಾರದ ಬದಲು ಭ್ರಷ್ಟಾಚಾರವೇ ಜೀವನವಿಧಾನವಾಗುತ್ತಿದೆ. ಮನುಷ್ಯ ಸಂಬಂಧಗಳನ್ನು ನುಂಗಿಹಾಕಿ ಮಾರುಕಟ್ಟೆ ಸಂಬಂಧ ಮುಂಚೂಣಿಯಲ್ಲಿ ಮಿಂಚುತ್ತಿದೆ. ಮಾರುಕಟ್ಟೆ ಮನೋಧರ್ಮ ಸರ್ವವ್ಯಾಪಿಯಾಗುತ್ತಿರುವ ಸವಾಲು ನಮ್ಮೆದುರಿಗಿದೆ.

ಜಾಗತೀಕರಣದ ಹೆಸರಿನಲ್ಲಿ ತರುತ್ತಿರುವ ಆರ್ಥಿಕ ಸುಧಾರಣೆಗಳು ಬಹುರಾಷ್ಟ್ರೀಯ ಕಂಪನಿಗಳಿಗೆ ಹಾಗೂ ಬೃಹತ್ ಬಂಡವಾಳಗಾರರಿಗೆ ಹೆಚ್ಚು ಅನುಕೂಲ ಕಲ್ಪಿಸುವ ಕ್ರಮಗಳಾಗಿವೆ. ಬಂಡವಾಳ ಹೂಡಿಕೆಯನ್ನೇ ಮೊದಲ ಆದ್ಯತೆಯೆಂದು ಭಾವಿಸಿದ ಸರ್ಕಾರಗಳು ಬಂಡವಾಳಶಾಹಿಯಲ್ಲಿ ಭಗವಂತನನ್ನು ಕಾಣುತ್ತಿವೆ. ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರಗಳು ಬಂಡವಾಳಶಾಹಿಗಳ ಮುಂದೆ ಮಂಡಿಯೂರಿ ಕೂತುಕೊಳ್ಳುತ್ತಿವೆ. ನಮ್ಮ ರಾಷ್ಟ್ರದ ಆರ್ಥಿಕ ನೀತಿಯನ್ನು ವಿಶ್ವಬ್ಯಾಂಕ್ ನೀತಿಗಳು ನಿಯಂತ್ರಿಸುತ್ತಿವೆ. ಆರ್ಥಿಕ ನೀತಿಯ ಜೊತೆಗೆ ರಾಜಕೀಯ ನೀತಿಯನ್ನು ನಿಯಂತ್ರಿಸುವ ಶಕ್ತಿಕೇಂದ್ರವಾಗಿ ಅಮೇರಿಕವು ವರ್ತಿಸುತ್ತಿದೆ. ನಮ್ಮ ದೇಶವು ಸ್ಥಳೀಯ ಚೈತನ್ಯವನ್ನು ಕಳೆದುಕೊಳ್ಳುತ್ತಿದೆ. ಒಂದು ಜಾಗತಿಕ ಶಕ್ತಿಯಾಗಿ ಬೆಳೆಯುತ್ತಿರುವ ಭ್ರಮೆಯನ್ನು ಬಿತ್ತುತ್ತಲೇ ನಮ್ಮ ಭಾರತವು ಬಡವಾಗುತ್ತಿದೆ. ಈ ದೃಷ್ಟಿಯಿಂದ ಈ ಶತಮಾನರು ಭಾರತಕ್ಕೆ ಶರಣಾಗತಿಯ ಶತಮಾನವಾಗುತ್ತಿದೆ.

ಇಂತಹ ಸನ್ನಿವೇಶದಲ್ಲಿ 'ಉತ್ತಮ ಭಾರತಕ್ಕಾಗಿ ಯುವಜನರ ಸಶಕ್ತೀಕರಣ' ಎಂಬ ಘೋಷವಾಕ್ಯದೊಂದಿಗೆ ಈ ಸಮ್ಮೇಳನವನ್ನು ಆಯೋಜಿಸಲಾಗಿದೆ. "ಉತ್ತಮ ಭಾರತಕ್ಕಾಗಿ ಯುವಜನರ ಸಶಕ್ತೀಕರಣ' ಎನ್ನುವುದು ಕೇವಲ ಘೋಷವಾಕ್ಯವಾಗದೆ ನಮ್ಮೆಲ್ಲರ 'ಆತ್ಮವಾಕ್ಯ'ವಾಗಬೇಕಾಗಿದೆ. ಇಂದು ಉದ್ಯಮಪತಿಗಳು ಯುವಜನರಿಗೆ ಆದರ್ಶವಾಗುತ್ತಿರುವ ಅಪಾಯವನ್ನು ಮನಗಾಣಬೇಕಾಗಿದೆ. ಉದ್ಯಮಪತಿಗಳು ಉದ್ಯಮಶೀಲತೆಗೆ ಆದರ್ಶವಾಗಲಿ. ಆದರೆ ಭಾರತದ ಬದುಕಿಗೆ ಆದ್ಯತೆಯ ಆದರ್ಶವಾಗುವುದು ಉತ್ತಮ ಭಾರತದ ನಿರ್ಮಾಣಕ್ಕೆ ಸೂಕ್ತವಾದುದಲ್ಲ. ನಮ್ಮ ಇತಿಹಾಸದಲ್ಲಿ ನಿಸ್ವಾರ್ಥ ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ. ಪ್ರಗತಿಪರ ಚಳವಳಿಗಾರರಿದ್ದಾರೆ. ಚಲನಶೀಲ ಚಿಂತಕರಿದ್ದಾರೆ. ಶಿಖರಪ್ರಾಯ ಸಾಂಸ್ಕೃತಿಕ ವ್ಯಕ್ತಿಗಳಿದ್ದಾರೆ. ಇವರೆಲ್ಲರ ಒಟ್ಟು ವ್ಯಕ್ತಿತ್ವ ಹಾಗೂ ಕ್ರಿಯಾಮಾದರಿಗಳಲ್ಲಿ ನಮ್ಮ ಆದರ್ಶದ ಮಾದರಿಯನ್ನು ಕಂಡುಕೊಳ್ಳಬೇಕಾಗಿದೆ. ಆಗ ಉತ್ತಮ ಭಾರತದ ಕನಸುಗಳು ನನಸಾಗುವ ಸರಿದಾರಿ ಗೋಚರವಾಗುತ್ತದೆ. ಈ ದಿಕ್ಕಿನಲ್ಲಿ ಯುವಜನತೆಯ ಶಕ್ತಿಸಂಚಯವಾಗಬೇಕು. ಈ ಶಕ್ತಿಸಂಚಯಕ್ಕೆ ಸಮಾಜ ಬದಲಾವಣೆಯ ಸೈದ್ಧಾಂತಿಕ ಶಕ್ತಿ ಬೇಕೇ ಬೇಕು. ಎಂದೂ ಬರಗೂರು ರಾಮಚಂದ್ರಪ್ಪ ಹೇಳಿದರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಸಂಘಟಿಸಿರುವ ಈ ಅಖಿಲ ಭಾರತ ಸಮ್ಮೇಳನದ ಪ್ರತಿನಿಧಿ ಸಮಾವೇಶವನ್ನು ಉದ್ಘಾಟಿಸಲು ನಮ್ಮ ದೇಶದ ಹೆಮ್ಮೆಯ ಚಲನಚಿತ್ರ ನಿರ್ದೇಶಕರೂ ಪ್ರಗತಿಪರ ಚಿಂತಕರೂ ಆದ ಶ್ರೀ ಶ್ಯಾಮ್ ಬೆನೆಗಲ್ ಅವರು ಬಂದಿರುವುದು ನಮಗೆಲ್ಲ ಅತ್ಯಂತ ಸಂತೋಷದ ಸಂಗತಿಯಾಗಿದೆ. ಶ್ರೀ ಶ್ಯಾಮ್ ಬೆನೆಗಲ್ ಅವರ ಕೌಟುಂಬಿಕ ಮೂಲ ಕರ್ನಾಟಕ ಎನ್ನುವುದು ಇಲ್ಲಿ ಉಲ್ಲೇಖನೀಯ. ಶ್ಯಾಮ್ ಬೆನೆಗಲ್ ಅವರು ಭಾರತೀಯ ಚಿತ್ರರಂಗಕ್ಕೆ ನೀಡಿದ ಅಪಾರ ಕೊಡುಗೆಗಾಗಿ ದಾದಾ ಫಾಲ್ಕೆ ಪ್ರಶಸ್ತಿಯ ಗೌರವಕ್ಕೆ ಭಾಜನರಾಗಿದ್ದಾರೆ. ಅವರು ನಿರ್ದೇಶಿಸಿದ ಅಂಕುರ್, ನಿಶಾಂತ್, ಮಂಥನ್ ಮುಂತಾದ ಚಿತ್ರಗಳು ಏಕಕಾಲಕ್ಕೆ ವ್ಯಾಪಾರಿ ಚಿತ್ರಗಳ ಹಾಗೂ ಪರ್ಯಾಯ ಹೊಸ ಅಲೆ ಚಿತ್ರಗಳ ಸಿದ್ಧಸೂತ್ರಗಳನ್ನು ಮೀರಿದ ಹೊಸ ವಿನ್ಯಾಸವನ್ನು ಚಿತ್ರರಂಗಕ್ಕೆ ಕೊಟ್ಟಿವೆ. ಸಿನಿಮಾಗಳು ಸಂವಹನಶೀಲವಾದಾಗಲೇ ಸಾರ್ಥಕ ವಾಗುತ್ತವೆಯೆಂಬ ನಿಲುವನ್ನು ಶಾನ್ ಬೆನೆಗಲ್ ಅವರು ಗಂಭೀರವಾಗಿಯೇ ತಮ್ಮ ಸಿನಿಮಾಗಳ ಮೂಲಕ ಪ್ರತಿಪಾದಿಸಿದ್ದಾರೆ. ಬಹುಮುಖ್ಯವಾಗಿ ಸಾಮಾಜಿಕ ಕಾಳಜಿಯ ಸಿನಿಮಾಗಳನ್ನು ನೀಡಿದ ಅಪರೂಪದ ಪ್ರಗತಿಪರ ನಿರ್ದೇಶಕರಾಗಿದ್ದಾರೆ. ಸಮಾಜಮುಖಿ ಬದ್ಧತೆಯುಳ್ಳ ಶ್ರೀ ಶ್ಯಾಮ್ ಬೆನೆಗಲ್ ಅವರು ಈ ಸಮ್ಮೇಳನದ ಪ್ರತಿನಿಧಿ ಸಮಾವೇಶವನ್ನು ಉದ್ಘಾಟಿಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದ ಬರಗೂರು ಗಣ್ಯರು ಸೇರಿದಂತೆ ಎಲ್ಲರನ್ನು ಸ್ವಾಗತಿಸಿದರು.

ಕೇರಳ ಸರ್ಕಾರದ ಮಾಜಿ ಸಚಿವರೂ, ಡಿ.ವೈ.ಎಫ್.ಐ ನ ಮಾಜಿ ರಾಷ್ಟ್ರೀಯ ಅಧ್ಯಕ್ಷರೂ ಆದ ಎಂ.ಎ.ಬೇಬಿ, ತಪನ್ ಸಿನ್ಹಾರವರು ಡಿ.ವೈ.ಎಫ್.ಐ ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳು. ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ ನ ಅಖಿಲ ಭಾರತ ಅಧ್ಯಕ್ಷರಾದ ಶ್ರೀರಾಮಕೃಷ್ಣನ್ ವಹಿಸಿದ್ದರು.

ಮತ್ತೊಂದು ಬೃಹತ್ ಹೋರಾಟಕ್ಕೆ ಸಜ್ಜುಗೊಳ್ಳುತ್ತಿದೆ ದೇಶದ ಕಾರ್ಮಿಕ ವರ್ಗ

ಅಕ್ಟೋಬರ್ ಮತ್ತು ನವೆಂಬರ್‌ಗಳಲ್ಲಿ ತಾಲೂಕು, ಜಿಲ್ಲಾ, ವಿಭಾಗ ಹಾಗೂ ರಾಜ್ಯ ಮಟ್ಟದಲ್ಲಿ ಕಾರ್ಮಿಕ ಸಂಘಟನೆಗಳ ಸಮಾವೇಶಗಳು

ಡಿಸೆಂಬರ್ 18-19ರಂದು ಸತ್ಯಾಗ್ರಹ ಹಾಗೂ ಪಿಕೆಟಿಂಗ್

ಡಿಸೆಂಬರ್ 20ರಂದು ಪಾರ್ಲಿಮೆಂಟ್ ಚಲೋ

ಫೆ 20-21, 2013 ಅಖಿಲ ಭಾರತ ಸಾರ್ವತ್ರಿಕ ಮುಷ್ಕರ




ದೇಶದ ಕಾರ್ಮಿಕ ವರ್ಗ ಮತ್ತೊಂದು ಬೃಹತ್ ಹೋರಾಟಕ್ಕೆ ಸಜ್ಜುಗೊಳ್ಳುತ್ತಿದೆ. ನವ ಉದಾರೀಕರಣದ ನೀತಿಗಳ ಮೂಲಕ ಕೇಂದ್ರ ಸರ್ಕಾರ ದೇಶದ ಜನರ ಬದುಕನ್ನು ದುರ್ಬರಗೊಳಿಸುತ್ತಿದೆ. ನೌಕರರು ಹಾಗೂ ಕಾರ್ಮಿಕರ ಮೇಲೆ ಮಾಲಕರ ಶೋಷಣೆ ದಿನೇ ದಿನೇ ಹೆಚ್ಚುತ್ತಿದೆ.

ಕಾರ್ಮಿಕ ವರ್ಗವೂ ಸುಮ್ಮನೆ ಕುಳಿತಿಲ್ಲ. ಶ್ರಮಜೀವಿಗಳ ಮೇಲಿನ ದೌರ್ಜನ್ಯ ಹಾಗೂ ಶೋಷಣೆ ವಿರೋಧಿಸಿ, ಜನಸಾಮಾನ್ಯರ ಬದುಕಿನ ಪ್ರಶ್ನೆಗಳ ಮೇಲೆ ಕಳೆದ 20 ವರ್ಷಗಳಲ್ಲಿ 14 ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ನಡೆಸಿದೆ. ಈ ಮೂಲಕ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಜನಾಕ್ರೋಶವನ್ನು ಪ್ರತಿಧ್ವನಿಸಿದೆ ಮಾತ್ರವಲ್ಲದೆ ಸರ್ಕಾರಕ್ಕೆ ಬಿಸಿ ಮುಟ್ಟಿಸಿದೆ.

ಈ ಮಧ್ಯೆ ದೇಶದ ಪ್ರಮುಖ ಕಾರ್ಮಿಕ ಸಂಘಟನೆಗಳ ಐಕ್ಯ ಹೋರಾಟಕ್ಕೆ ಮತ್ತೊಂದು ವೇದಿಕೆ ಸಿದ್ಧಗೊಂಡಿದೆ. ರಾಜಧಾನಿ ನವದೆಹಲಿಯ ತಾಲ್ಕಟೋರ ಸ್ಟೇಡಿಯಂನಲ್ಲಿ ಸೆಪ್ಟಂಬರ್ 4ರಂದು ಬೃಹತ್ ಸಮಾವೇಶ ನಡೆದಿದೆ. ಈ ಸಮಾವೇಶದಲ್ಲಿ ಕಾರ್ಮಿಕ ವರ್ಗದ ಐಕ್ಯತೆ ಕಾಪಾಡಿಕೊಳ್ಳುವ ಜೊತೆಗೆ ಶ್ರಮಿಕ ಸಮುದಾಯದ ಸಮಸ್ಯೆಗಳನ್ನು ಮುಂದಿಟ್ಟು ಪ್ರಬಲ ಹೋರಾಟ ರೂಪಿಸಲು ನಿರ್ಧರಿಸಲಾಗಿದೆ.

ನವ ಉದಾರೀಕರಣದ ನೀತಿಗಳು ಕಾರ್ಮಿಕರ ಹಕ್ಕುಗಳು ಮತ್ತು ಅವರ ಬದುಕಿನ ಮೇಲೆ ನೇರ ದಾಳಿ ನಡೆಸುತ್ತಿದುದ, ಇದರ ವಿರುದ್ಧ ಪ್ರಬಲ ಧ್ವನಿ ಮೊಳಗಿಸಲು 2013 ಫೆಬ್ರವರಿಯಲ್ಲಿ ಎರಡು ದಿನಗಳ ಮುಷ್ಕರ ನಡೆಸಲು ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ನಿರ್ಧಾರ ತೆಗೆದುಕೊಂಡಿವೆ. ಇದಕ್ಕೆ ಪೂರ್ವಭಾವಿಯಾಗಿ ದೇಶಾದ್ಯಂತ ವಿವಿಧ ಹಂತಗಳ ಹೋರಾಟ ನಡೆಯಲಿದೆ. ಡಿಸೆಂಬರ್ 18-19ರಂದು ಸತ್ಯಾಗ್ರಹ ಹಾಗೂ ಪಿಕೆಟಿಂಗ್ ನಡೆಸುವುದು, ಡಿಸೆಂಬರ್ 20ರಂದು ಪಾರ್ಲಿಮೆಂಟ್ ಚಲೋ ಕಾರ್ಯಕ್ರಮ ನಡೆಯಲಿದೆ. ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್‌ಗಳಲ್ಲಿ ತಾಲೂಕು, ಜಿಲ್ಲಾ, ವಿಭಾಗ ಹಾಗೂ ರಾಜ್ಯ ಮಟ್ಟದಲ್ಲಿ ಕಾರ್ಮಿಕ ಸಂಘಟನೆಗಳ ಸಮಾವೇಶಗಳು ನಡೆಯಲಿವೆ. ರಾಷ್ಟ್ರೀಯ ಮಟ್ಟದಲ್ಲಿ ನಡೆದಿರುವ ಈ ಬೃಹತ್ ಸಮಾವೇಶದ ಕಾರ್ಮಿಕರ ಐಕ್ಯತೆ ತಳಮಟ್ಟಕ್ಕೂ ವ್ಯಾಪಿಸಲು ಸಮಾವೇಶಗಳು ವೇದಿಕೆಯಾಗಲಿವೆ. ಈ ಮೂಲಕ ದೇಶದಲ್ಲೇ ಒಂದು ಪ್ರಬಲ ಕಾರ್ಮಿಕರ ಚಳವಳಿ ಮೂಡಿಬರಲಿದೆ.



ಪ್ರಸಕ್ತ ವಾತಾವರಣದಲ್ಲಿ ರಾಷ್ಟ್ರೀಯ ಜಂಟಿ ಸಮಾವೇಶಕ್ಕೆ ಕಾರ್ಮಿಕ ನಾಯಕರು ತೋರಿಸಿರುವ ಆಸಕ್ತಿ ನಿಜಕ್ಕೂ ಆಶಾದಾಯಕವಾಗಿದೆ.

ದೇಶಾದ್ಯಂತ ಕಾರ್ಮಿಕರು, ಶ್ರಮಿಕರ ದೊಡ್ಡ ಜನಸಮೂಹ ಈ ಸರಣಿ ಹೋರಾಟದಲ್ಲಿ ಪಾಲುಪಡೆಯಲಿದ್ದಾರೆ. ಸಂಘಟಿತ ಕಾರ್ಮಿಕರು, ಅಸಂಘಟಿತ ಶ್ರಮಿಕರು, ಕೈಗಾರಿಕೆ, ಉಕ್ಕು, ಕಲ್ಲಿದ್ದಲು, ಗಣಿಗಾರಿಕೆ, ಬಂದರು, ರೈಲ್ವೇ, ಬ್ಯಾಂಕ್, ವಿದ್ಯುಚ್ಛಕ್ತಿ, ತೈಲ, ಸಾರಿಗೆ, ಟೆಲಿಕಾಂ, ಕಟ್ಟಡ ನಿರ್ಮಾಣ, ವಿಮೆ, ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರು, ಅಂಚೆ ನೌಕರರ ಸಂಘಟನೆಗಳು ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ಸಮಾವೇಶದಲ್ಲಿ ಭಾಗಿಯಾಗಿದ್ದರು. ಇದರ ಜೊತೆಗೆ ಪ್ಲಾಂಟೇಷನ್ ಕಾರ್ಮಿಕರು, ಬೀಡಿ ಮಜೂರರು, ಹೆಂಚಿನ ಕಾರ್ಖಾನೆ ಕೆಲಸಗಾರರು, ಬ್ರಿಕ್, ಹಾಲೋಬ್ಲಾಕ್ ಕಾರ್ಮಿಕರು, ಸಣ್ಣ ಕೈಗಾರಿಕೆಯ ಕಾರ್ಮಿಕರು, ಅಂಗಡಿ ಹಾಗೂ ಮೀನು ಉದ್ಯಮದಲ್ಲಿ ತೊಡಗಿಸಿಕೊಂಡ ಶ್ರಮಿಕರಲ್ಲದೆ, ಮಹಿಳಾ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ-ಬಿಸಿಯೂಟ ಅಡುಗೆ ಸಹಾಯಕಿಯರ ಸಂಘಟನೆಗಳೂ ದೊಡ್ಡ ಪ್ರಮಾಣದಲ್ಲಿ ಹೋರಾಟದ ಕರೆಗೆ ದನಿಗೂಡಿಸಿದ್ದಾರೆ.

ಇದರಲ್ಲಿ ಮತ್ತೊಂದು ಪ್ರಸ್ತಾಪಿಸಬೇಕಾದ ಮತ್ತೊಂದು ಮಹತ್ವದ ಅಂಶವೆಂದರೆ ಯುವ ಕಾರ್ಮಿಕ ಸಮುದಾಯದ ಪ್ರತಿಸ್ಪಂದನೆ. ತಲ್ಕೊಟೊರಾ ಕ್ರೀಡಾಂಗಣದಲ್ಲಿ ಕಾರ್ಮಿಕರ ಉತ್ಸಾಹ ಮುಗಿಲುಮುಟ್ಟಿತ್ತು. ಸೇರಿದ ಜನಸಂಖ್ಯೆಯಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಕ್ರೀಡಾಂಗಣದಿಂದ ಹೊರಗಿದ್ದು, ಹೋರಾಟದ ಕರೆಗೆ ದನಿಗೂಡಿಸಿದರು.

ಈ ಬೃಹತ್ ಐತಿಹಾಸಿಕ ಸಮಾವೇಶದ ಅಧ್ಯಕ್ಷೀಯ ಮಂಡಳಿಯಲ್ಲಿ ಬಿಎಂಎಸ್‌ನ ಅಖ್ತರ್ ಹುಸೇನ್, ಇಂಟಕ್‌ನ ಅಶೋಕ್ ಸಿಂಗ್, ಎಐಟಿಯುಸಿಯ ಅಮರ್‌ಜೀತ್ ಕೌರ್, ಎಚ್‌ಎಂಎಸ್‌ನ ಶರದ್ ರಾವ್, ಸಿಐಟಿಯು ಎ.ಕೆ. ಪದ್ಮನಾಭನ್, ಎಐಯುಟಿಯುಸಿನ ಸತ್ಯವಾಸ ಸಿಂಗ್, ಟಿಯುಸಿಸಿಯ ಶಿವಶಂಕರ್, ಯುಟಿಯುಸಿಯ ಅಬನಿ ರಾಯ್, ಎಐಸಿಸಿಟಿಯುನ ಎಸ್.ಪಿ. ರಾಯ್, ಎಲ್‌ಪಿಎಫ್‌ನ ರತ್ನಾ ಸಭಾಪತಿ ಮತ್ತು ಎಸ್‌ಇಡಬ್ಲ್ಯೂಎನ ಜ್ಯೋತಿ ಮರ್ವಾ ಪಾಲ್ಗೊಂಡಿದ್ದರು.

ಬಿಎಂಎಸ್ ಬಿ.ಎನ್. ರೈ ಇಂಟಕ್ ಸಂಜೀವ ರೆಡ್ಡಿ ಮತ್ತು ಐಟಕ್‌ನ ಗುರುದಾಸ್ ದಾಸ್‌ಗುಪ್ತ, ಎಚ್‌ಎಂಎಸ್‌ನ ಎಚ್‌ಎಸ್ ಸಿದ್ಧು, ಸಿಐಟಿಯು ತಪನ್ ಸೇನ್ ಮೊದಲಾದ ನಾಯಕರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಸಿಐಟಿಯುನ ಪದಾಧಿಕಾರಿಗಳು ಹಾಗೂ ರಾಜ್ಯಮಟ್ಟದ ಎಲ್ಲ ನಾಯಕರು ಈ ಬೃಹತ್ ಸಮಾವೇಶದಲ್ಲಿ ಭಾಗವಹಿಸಿದ್ದರು. ● ಸಿಮ್ಮಿಸಿ

ವಿವೇಕಾನಂದರಿಗೆ ನಮಿಸುವ ನರೇಂದ್ರ ಮೋದಿ

ಪುಟ 7 ರಿಂದ

ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಶನ್ 911 ಕೋಟಿ ರೂ.ಗಳ ನಿವ್ವಳ ಲಾಭ ವರದಿ ಮಾಡಿದೆ. ಕುತೂಹಲದ ಸಂಗತಿಯೆಂದರೆ, ಕಳೆದ ಹಣಕಾಸು ವರ್ಷದ ಕೊನೆಯ ಮೂರು ತಿಂಗಳಲ್ಲಿ, ಜನವರಿ-ಮಾರ್ಚ್ 2012ರ ಅವಧಿಯಲ್ಲಿ ಅದರ ನಿವ್ವಳ ಲಾಭ 312ಶೇ.ದಷ್ಟು ಹೆಚ್ಚಿದೆ. ಭಾರತ್ ಪೆಟ್ರೋಲಿಯಂ 1,546.68 ಕೋಟಿ ರೂ.ಗಳ ನಿವ್ವಳ ಲಾಭ ವರದಿ ಮಾಡಿದೆ.

ಈ ಅಂಕಿ-ಅಂಶಗಳಲ್ಲಿ 'ತೈಲ ಕಂಪನಿಗಳ ಏರುತ್ತಿರುವ ನಷ್ಟಗಳು' ಎಲ್ಲಿವೆ? ಭಾರತೀಯ ಜನತೆಗೆ ಒಂದು ದೈತ್ಯ ಪ್ರಮಾಣದ ವಂಚನೆಯನ್ನು ಎಸಗಲಾಗುತ್ತಿದೆ. ಈಗಾಗಲೇ ನಮ್ಮ ಜನತೆಯ ಬದುಕಿನ ಮಟ್ಟ ಇಳಿಮುಖಗೊಂಡಿದ್ದು, ಅದು ಇನ್ನಷ್ಟು ಹದಗೆಡುವಂತೆ ಮಾಡುವ ಇಂತಹ ತೀವ್ರ ಆರ್ಥಿಕ ಹೊರೆಗಳನ್ನು ಹೇರಲು ಬಿಡಲಾಗದು. ಜನಗಳ ವ್ಯಾಪಕ ಪ್ರತಿಭಟನೆಗಳು ಯುಪಿಎ-2 ಸರಕಾರ ಇಂತಹ ಬೆಲೆಯೇರಿಕೆಗಳನ್ನು ಹಿಂತೆಗೆದುಕೊಳ್ಳುವ ಬಲವಂತವನ್ನು ಉಂಟು ಮಾಡಬೇಕು.

●

(ಪೀಪಲ್ಸ್ ಡೆಮಾಕ್ರಸಿ ವಾರಪತ್ರಿಕೆಯ ಸಂಪಾದಕೀಯ)

ಕೇರಳದಲ್ಲಿ ಮೂಡಿಬರುತ್ತಿರುವ ಪ್ರಬಲ ಚಳವಳಿ

ಎಂ.ಎ. ಬೇಬಿ
ಸಿಪಿಐ(ಎಂ) ಪಿ.ಬಿ. ಸದಸ್ಯರು
ಕೇರಳದ ಮಾಜಿ ಶಿಕ್ಷಣ ಸಚಿವರು

ಕೇರಳದಲ್ಲಿ ಹೋರಾಟದ ಹೊಸ ಶಕೆಯೊಂದು ಮೂಡಿಬರುತ್ತಿದೆ. ಇದಕ್ಕೆ ಕಳೆದ ಆಗಸ್ಟ್ 22ರಂದು ರಾಜ್ಯಾದ್ಯಂತ ನಡೆದ ಕ್ರಾಂತಿಕಾರಿ ಚಳವಳಿಯೇ ಸಾಕ್ಷಿ. ರಾಜ್ಯ ವಿಧಾನಸಭೆ ಮತ್ತು ಎಲ್ಲ ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಜನಸಮೂಹ ಐತಿಹಾಸಿಕ ಪ್ರತಿಭಟನಾ ಪ್ರದರ್ಶನವನ್ನು ನಡೆಸಿತು. ಮುಂಜಾನೆ ಆರು ಗಂಟೆಯಿಂದ ಸಂಜೆ 5 ಗಂಟೆ ವರೆಗೆ 5.5 ಲಕ್ಷ ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ಭಾಗಿಯಾದ ಈ ಹೋರಾಟದಲ್ಲಿ ಸರ್ಕಾರಿ ಯಂತ್ರ ಸಂಪೂರ್ಣ ಸ್ತಬ್ಧಗೊಂಡಿತು.

ಸಂಘಟಕರ ಎಲ್ಲ ನಿರೀಕ್ಷೆಗಳನ್ನು ಮೀರಿ ಜನರು ಈ ಹೋರಾಟದಲ್ಲಿ ಪಾಲ್ಗೊಂಡು ಯುಡಿಎಫ್ ಸರ್ಕಾರದ ವಿರುದ್ಧ ಜನಾಕ್ರೋಶವನ್ನು ಪ್ರದರ್ಶಿಸಿದರು. ಈ ಹೋರಾಟವನ್ನು ವಿಫಲಗೊಳಿಸಲು ಪೊಲೀಸ್ ಸಹಿತ ಎಲ್ಲ ಸರ್ಕಾರಿ ಯಂತ್ರವನ್ನೂ ಆಡಳಿತ ಪಕ್ಷ ಬಳಸಿತು. ಆದರೆ, ಯಾವುದೇ ಪ್ರಯೋಜನವಾಗಲಿಲ್ಲ.



ಹೆಚ್ಚುತ್ತಿರುವ ಜನಾಕ್ರೋಶ

ಆಹಾರ ಭದ್ರತೆಗಾಗಿ ನಡೆದ ಚಳವಳಿ ಇದರ ಒಂದು ಮಹತ್ವದ ಭಾಗ. ಎಪಿಎಲ್-ಬಿಪಿಎಲ್ ಎಂಬ ಭೇದವಿಲ್ಲದೆ ಪ್ರತಿ ಕುಟುಂಬಕ್ಕೆ ಕೆ.ಜಿ.ಯೊಂದಕ್ಕೆ ಎರಡು ರೂಪಾಯಿ ವೆಚ್ಚದಲ್ಲಿ 35 ಕಿಲೋ ಆಹಾರ ಧಾನ್ಯ ಸಿಗುವಂತಾಗಬೇಕು ಎಂಬುದು ಈ ಚಳವಳಿಯ ಪ್ರಮುಖ ಬೇಡಿಕೆ. ರಸಗೊಬ್ಬರ ಮತ್ತು ಆಹಾರ ಸೇರಿದಂತೆ ಅವಶ್ಯ ವಸ್ತುಗಳ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡಬಾರದು, ಏರಿಸಿದ ವಿದ್ಯುತ್ ದರಗಳನ್ನು ಇಳಿಸಬೇಕು ಮತ್ತು ತೈಲೋತ್ಪನ್ನ ದರಗಳನ್ನು ಇಳಿಸಬೇಕು ಎಂಬುದು ಇತರ ಬೇಡಿಕೆಗಳು.

ಶಿಕ್ಷಣದ ಖಾಸಗೀಕರಣ ಮತ್ತು ಕೋಮುವಾದೀಕರಣಕ್ಕೆ ತಡೆ ಮತ್ತು ಪೊಲೀಸ್ ದೌರ್ಜನ್ಯದ ವಿರುದ್ಧವೂ ಜನ ಧ್ವನಿ ಎತ್ತಿದರು.

ಪ್ರತಿಭಟನಾನಿರತ ಬೃಹತ್ ಜನಸಮೂಹ ವಸ್ತುಶಃ ಕೇರಳದ ಹೋರಾಟ ಚಳವಳಿಗೆ ಹೊಸ ದಿಶೆ ನೀಡಿತು. ಹೋರಾಟದ ಪ್ರಮುಖ ಕೇಂದ್ರವಾಗಿದ್ದ ರಾಜಧಾನಿಯಲ್ಲಿ ಬೃಹತ್ ಜನಸಮೂಹವನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್, ಇಂತಹ ಜನವಿರೋಧಿ ನೀತಿಗಳನ್ನು ಸ್ಥಗಿತಗೊಳಿಸದಿದ್ದರೆ ಇನ್ನಷ್ಟು ಪ್ರಬಲ ಹೋರಾಟಗಳನ್ನು ಸಂಘಟಿಸುವುದಾಗಿ ಎಚ್ಚರಿಕೆ ನೀಡಿದರು. ತಿರುವನಂತಪುರದಲ್ಲಿ ವಿಧಾನಸಭೆ ಮುತ್ತಿಗೆ ಕಾರ್ಯಕ್ರಮಕ್ಕೆ ಪಿಣರಾಯಿ ವಿಜಯನ್ ಚಾಲನೆ ನೀಡಿದರೆ, ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ಕೊಡಿಯೇರಿ ಬಾಲಕೃಷ್ಣನ್, ವಿ.ಎಸ್. ಅಚ್ಯುತಾನಂದನ್, ಎಂ.ಎ.ಬೇಬಿ ಮತ್ತು ಇತರ ಕೇಂದ್ರ ಸಮಿತಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಪ್ರತಿಭಟನೆಗೆ ಚಾಲನೆ ನೀಡಿದರು.

ಚಳವಳಿಯಲ್ಲಿ ಜನರ ಭಾಗವಹಿಸುವಿಕೆಯಲ್ಲಿ ನಿಜಕ್ಕೂ ಸರ್ಕಾರದ ವಿರುದ್ಧದ ಆಕ್ರೋಶ ಪ್ರತಿಫಲಿಸುತ್ತಿತ್ತು. ಅವರನ್ನು ದೈನಂದಿನ ಸಮಸ್ಯೆಗಳು ಎಷ್ಟು ಬಾಧಿಸುತ್ತಿವೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತಿತ್ತು. ಹಾಗಾಗಿ ಸಿಪಿಐ(ಎಂ) ಕರೆ ನೀಡಿದ ಹೋರಾಟಕ್ಕೆ ಸಕಾರಾತ್ಮಕವಾಗಿ ವಿಶಾಲ ಜನಸಮೂಹ ಸ್ಪಂದಿಸಿತು.

ತೆಂಗಿನ ನಾರಿನ ಕಾರ್ಮಿಕರಿಂದ ಹಿಡಿದು, ಕಾಲೇಜಿನ ಪ್ರಾಧ್ಯಾಪಕರ ವರೆಗೆ ಜನರು ಬೀದಿಗೆ ಇಳಿದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ನರ್ಸ್‌ಗಳೂ ಈ ಹೋರಾಟದಲ್ಲಿ ಪಾಲ್ಗೊಂಡರು. ಸಂಘಟಿತರಾಗಲು ಬಿಡದ ಖಾಸಗಿ ಸಂಸ್ಥೆಗಳ ಆಡಳಿತ ಮಂಡಳಿಗಳು ಇದಕ್ಕೆ ಅವಕಾಶ ನಿರಾಕರಿಸಿದರೂ ಅದನ್ನು ವಿರೋಧಿಸಿ ನರ್ಸ್‌ಗಳು ಬೃಹತ್ ಸಂಖ್ಯೆಯಲ್ಲಿ ಹೋರಾಟದ ಅಂಗಣಕ್ಕೆ ಇಳಿದಿದ್ದರು. ಧಾರ್ಮಿಕ ಹಾಗೂ ಜಾತೀಯ ಆಧಾರದ ಸಂಸ್ಥೆಗಳ ಹಿಡಿತದಲ್ಲಿರುವ ಈ ಸಂಸ್ಥೆಗಳಲ್ಲಿ ನಡೆಯುತ್ತಿರುವ ಶೋಷಣೆ, ದೌರ್ಜನ್ಯಗಳನ್ನು ಹಾಗೂ ಸಂವಿಧಾನಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸುತ್ತಿರುವುದನ್ನು ಅವರು ಎಳೆಎಳೆಯಾಗಿ ಬಿಚ್ಚಿಟ್ಟರು.

ಇದೇ ವೇಳೆ, ಬಲಪಂಥೀಯ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಜನರನ್ನು ದಾರಿತಪ್ಪಿಸಲು ಕಪೋಲಕಲ್ಪಿತ ಕಥೆಗಳನ್ನು ಹೆಣೆದರು.

ಆದರೆ, ವಾಸ್ತವವೇ ಬೇರೆ. ಕಳೆದ 12 ತಿಂಗಳಲ್ಲಿ ರಾಜ್ಯದಲ್ಲಿ ಒಂದು ರೀತಿಯ ಅರಾಜಕತೆ ಸೃಷ್ಟಿಯಾಗಿದೆ. ಆಹಾರ ಧಾನ್ಯಗಳ ಬೆಲೆಗಳು ಗಗನಕ್ಕೇರಿದವು. ಸೂಕ್ತ ಸಂದರ್ಭದಲ್ಲಿ ಚಿಕಿತ್ಸೆ ಸಿಗದ ಕಾರಣ 60ಕ್ಕೂ ಹೆಚ್ಚು ಮಂದಿ ಆದಿವಾಸಿ-ಬುಡಕಟ್ಟು ಜನರು ಮೃತಪಟ್ಟರು. ಅಗತ್ಯ ಹಾಗೂ ಜೀವ ಉಳಿಸುವ ಔಷಧಿಗಳ ಬೆಲೆಗಳು ಸಾಮಾನ್ಯರ ಕೈಗೆಟುಕದಂತಾಯಿತು. ಸೂಕ್ತ ಪ್ರೋತ್ಸಾಹ ಹಾಗೂ ಆರ್ಥಿಕ ನೆರವು ಸಿಗದ ಕಾರಣ ಸಾಂಪ್ರದಾಯಿಕ ಉದ್ಯಮಗಳು ಸೊರಗಿದವು. ಇದರ ಪರಿಣಾಮವಾಗಿ ಜನರಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಯಿತು. ಇದೆಲ್ಲವೂ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಆರ್ಥಿಕ ನವ ಉದಾರೀಕರಣ ನೀತಿಗಳ ಪರಿಣಾಮ ಹಾಗೂ ನೇರ ಪ್ರತಿಫಲನವಾಗಿತ್ತು.

ಇಂತಹ ಪರಿಸ್ಥಿತಿಯನ್ನು ಬದಲಾಯಿಸಬಹುದಿತ್ತು. ಭಾರತೀಯ ಆಹಾರ ನಿಗಮದ ಉಗ್ರಾಣಗಳಲ್ಲಿ ಇದ್ದ ಆಹಾರ ಧಾನ್ಯಗಳ ದಾಸ್ತಾನು ಬಡವರಿಗೆ ಪೂರೈಕೆಯಾಗದೆ ಹಾಳಾಗುತ್ತಿತ್ತು. ಸಮರ್ಪಕ ಆಹಾರ ಪೂರೈಕೆಗೆ ಸುಪ್ರೀಂ ಕೋರ್ಟ್ ಆದೇಶ ಇದ್ದರೂ ಇದನ್ನು ಪಾಲಿಸಲು ಸಂಪೂರ್ಣ ನಿರ್ಲಕ್ಷ್ಯ ತೋರಲಾಯಿತು. ಇದೇ, ಸಮಯದಲ್ಲಿ ರಾಜ್ಯ ಸರ್ಕಾರ ಕಂಪೆನಿಗಳಿಗೆ, ಕಾರ್ಪೊರೇಟ್ ಸಂಸ್ಥೆಗಳಿಗೆ ಉದಾರತೆ ತೋರಲು ಮರೆಯಲಿಲ್ಲ. ನಾಲ್ಕು ವರ್ಷಗಳಲ್ಲಿ 28 ಲಕ್ಷ ಕೋಟಿ ರೂಪಾಯಿಗಳ ರಿಯಾಯಿತಿಯನ್ನು ನೀಡಲಾಯಿತು. ಆದರೆ, ಹಸಿವಿನಿಂದ ಸಾಯುತ್ತಿರುವ ಜನರತ್ತ ಈ ಸರ್ಕಾರಕ್ಕೆ ಕೃಪಾ ದೃಷ್ಟಿ ಬೀರಲಿಲ್ಲ.

ಅಗತ್ಯವಸ್ತುಗಳ ಮಾರುಕಟ್ಟೆಯಲ್ಲಿ ಕಾಳಸಂತೆ, ಫ್ಯೂಚರ್ ಟ್ರೇಡಿಂಗ್, ತೈಲ ಉತ್ಪನ್ನಗಳಲ್ಲಿ ಗನೀಯ ಬೆಲೆ ಏರಿಕೆಗಳು ಸಾಮಾನ್ಯರ ಬದುಕನ್ನು ಸಂಕಷ್ಟದ ಮೇಲೆ ಸಂಕಷ್ಟಕ್ಕೆ ದೂಡಿಹಾಕಿತು. ಆದರೆ, ಕಳೆದ ನಾಲ್ಕು ವರ್ಷಗಳ ಹಿಂದೆ ಪರಿಸ್ಥಿತಿ ಹೀಗಿರಲಿಲ್ಲ. ಎಲ್‌ಡಿಎಫ್ ನೇತೃತ್ವದ ಸರ್ಕಾರ ಸಮರ್ಪಕವಾಗಿ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ ಮಾಡುತ್ತಿತ್ತು. ಸಾರ್ವಜನಿಕ ವಿತರಣಾ ವ್ಯವಸ್ಥೆ ಸದೃಢವಾಗಿತ್ತು. ಎಲ್ಲರಿಗೂ ತಿಂಗಳಿಗೆ ಬೇಕಾದಷ್ಟು ಅಕ್ಕಿ, ಧವಸ ಧಾನ್ಯ ಸಿಗುತ್ತಿತ್ತು. ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಲಾಗಿತ್ತು. ಇದರಿಂದ ಬೆಲೆಗಳು ನಿಯಂತ್ರಣದಲ್ಲಿದ್ದವು ಎಂಬುದನ್ನು ಅರ್ಥಶಾಸ್ತ್ರಜ್ಞರೇ ಹೇಳುತ್ತಾರೆ.

ಅಷ್ಟೇ ಏಕೆ, ನವೆಂಬರ್ 3, 2011ರಲ್ಲಿ ಹೈಕೋರ್ಟ್‌ನ ಆಗಿನ ಮುಖ್ಯ ನ್ಯಾಯಮೂರ್ತಿ ಸಿ.ಎನ್. ರಾಮಚಂದ್ರನ್ ನಾಯರ್ ಮತ್ತು ಜಸ್ಟಿಸ್ ಪಿ.ಎಸ್. ಗೋಪಿನಾಥ್ ಇಂತದ್ದೇ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. (ಸಂಗ್ರಾಹಾನುವಾದ) ಅಗಸ್ಟ್ 22 ರ ಹೋರಾಟದಲ್ಲಿ ಭಾಗವಹಿಸಿದ್ದ ಕೇರಳದ ಸಮರಶೀಲ ಜನತೆಗೆ ಸಿಪಿಐ(ಎಂ) ಪೊಲೀಟ್ ಬ್ಯೂರೋ ಅಭಿನಂದಿಸಿದೆ. ಆದಾಗ್ಯೂ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರ ಸಿಪಿಐ(ಎಂ) ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ಸುಳ್ಳು ಕೇಸುಗಳಲ್ಲಿ ಸೇರಿಸುವ ಪ್ರಯತ್ನವನ್ನು ಮುಂದುವರೆಸುತ್ತಿದೆ. ಈಗಾಗಲೇ ಪಕ್ಷದ ಕಣ್ಣೂರು ಜಿಲ್ಲಾ ಕಾರ್ಯದರ್ಶಿ, ಇನ್ನಿಬ್ಬರು ರಾಜ್ಯ ಸಮಿತಿ ಸದಸ್ಯರು, ಇನ್ನಿತರ ಜಿಲ್ಲಾ ಹಾಗೂ ಸ್ಥಳೀಯ ಮುಖಂಡರನ್ನು 3 ಕೊಲೆಪ್ರಕರಣಗಳಲ್ಲಿ ಸೇರಿಸಲಾಗಿದೆ. ಟಿ.ಪಿ. ಚಂದ್ರಶೇಖರನ್ ಕೊಲೆ ಪ್ರಕರಣಗಳಲ್ಲಿ 76 ಮಂದಿ ವಿರುದ್ಧ ಪೊಲೀಸರು ಚಾರ್ಜಶೀಟ್ ಸಲ್ಲಿಸಿದ್ದು ಅವರೊಳಗೆ ಹೆಚ್ಚಿನವರು ಸಿಪಿಐ(ಎಂ) ಕಾರ್ಯಕರ್ತರು ಆಗಿರುತ್ತಾರೆ. ಟಿ.ವಿ. ಚಂದ್ರಶೇಖರನ್ ಕೊಲೆಯಲ್ಲಿ ಪಕ್ಷದ ಪಾತ್ರವಿಲ್ಲ ಎಂದು ಪಕ್ಷ ಸ್ಪಷ್ಟಪಡಿಸಿಧೆ ಮತ್ತು ಸಮಗ್ರವಾದ ತನಿಖೆಗೆ ಒತ್ತಾಯಿಸಿದೆ.

ವ್ಯಂಗ್ಯ ಚಿತ್ರಕಾರ ತ್ರಿವೇದಿ ಬಿಡುಗಡೆ

ವ್ಯಂಗ್ಯ ಚಿತ್ರಕಾರ ಅಸೀಂ ತ್ರಿವೇದಿ ಅವರಿಗೆ ಮುಂಬೈ ಹೈಕೋರ್ಟ ಜಾಮೀನು ನೀಡಿದ ಹಿನ್ನೆಲೆಯಲ್ಲಿ ಅವರು ಜೈಲಿನಿಂದ ಬಿಡುಗಡೆಯಾಗಿರುವುದು ಸ್ವಾಗತಾರ್ಹವಾಗಿದೆ. ಆಕ್ಷೇಪಾರ್ಹ (?) ವ್ಯಂಗ್ಯಚಿತ್ರಗಳನ್ನು ತಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ಆರೋಪದ ಮೇಲೆ ತ್ರಿವೇಧಿ ಅವರನ್ನು ಮುಂಬೈ ಪೊಲೀಸರು ಬಂಧಿಸಿದ್ದರು. ಭ್ರಷ್ಟಾಚಾರ ವಿರೋಧಿ ಆಂದೋಲನದ ಅಂಗವಾಗಿ ವ್ಯಂಗ್ಯ ಚಿತ್ರಗಳನ್ನು ಪ್ರಕಟಿಸಿದ ತ್ರಿವೇದಿ ವಿರುದ್ಧ ಭಾರತೀಯ ದಂಡ ಸಂಹಿತೆ 124 (ಎ) ಅನ್ವಯ ರಾಷ್ಟ್ರ ದ್ರೋಹದ ಆರೋಪ ಹೊರಿಸಿ ಬಂಧಿಸಿದ ಕ್ರಮವನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿತ್ತು ಮತ್ತು ತ್ರಿವೇದಿ ಅವರನ್ನು ಕೂಡಲೇ ಬಿಡುಗಡೆ ಮಾಡಿ ಅವರ ವಿರುದ್ಧ ಮಾಡಲಾದ ರಾಷ್ಟ್ರದ್ರೋಹದ ಆರೋಪವನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು ಎಂದು ಒತ್ತಾಯಿಸಿತ್ತು.

ಬ್ರಿಟಿಷರು ಬಂಡಾಯದ ಧ್ವನಿ ಅಡಗಿಸಲು ಮಾಡಿದ ಕಾನೂನು ಇದು. ಹಿಂಸೆಗೆ ಪ್ರಚೋದಿಸಿದ ಸಾಕ್ಷ್ಯ ಇದ್ದಾಗ ಮಾತ್ರ ರಾಷ್ಟ್ರದ್ರೋಹದ ಆರೋಪದ ಅನ್ವಯ ಶಿಕ್ಷೆ ನೀಡಬಹುದೆಂದು 1962 ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು ಇದೆ, ಆದರೆ ಐಪಿಸಿಯ ಈ ಕಲಂ ಪದೇ ಪದೇ ದುರುಪಯೋಗವಾಗುತ್ತಿದ್ದು ಇದರ ತುರ್ತು ಪುನರ್ ವಿಮರ್ಶೆ ಆಗಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ


ಕಲ್ಲಿದ್ದಲು ಹಗರಣದ ಮಸಿ ಒರೆಸಿಕೊಳ್ಳಲು ಯುಪಿಎ ಮಂತ್ರಿಗಳ ದಂಡಯಾತ್ರೆಗಳು



ವೇದರಾಜ ಎನ್.ಕೆ.

ಯುಪಿಎ-2 ಮಾನವ ಸಂಪನ್ಮೂಲ ಮಂತ್ರಿ ಕೊಲ್ಕತಾದಲ್ಲಿ, ಪಾಟ್ನಾದಲ್ಲಿ ವಾಣಿಜ್ಯ ರಾಜ್ಯ ಮಂತ್ರಿ, ಲಕ್ನೌನಲ್ಲಿ ಆರೋಗ್ಯ ಮಂತ್ರಿ, ಜತೆಗೆ ಒಬ್ಬ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೂಡ, ಹೈದರಾಬಾದಿನಲ್ಲಿ ಕಾನೂನು ಮಂತ್ರಿ ಮತ್ತು ಆರೋಗ್ಯ ಮಂತ್ರಿ, ಚಂಡೀಗಡದಲ್ಲಿ ಐಟಿ ರಾಜ್ಯಮಂತ್ರಿ ಇನ್ನೊಬ್ಬ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯೊಂದಿಗೆ-ಸಂಸತ್ತಿನ ಮಳೆಗಾಲ ಅಧಿವೇಶನ ಸಂಪೂರ್ಣ 'ತೊಳೆದು'ಹೋಗುತ್ತಿದ್ದಂತೆ ಯುಪಿಎ-2 ಮಂತ್ರಿಗಳೆಲ್ಲ ಏಕೆ ಹೀಗೆ 'ದಿಕ್ಪಾಪಾಲಾ'ಗಿದ್ದಾರೆ? ಅವರೀಗ ತಮ್ಮ ಸರಕಾರವನ್ನು ಮೆತ್ತಿಕೊಂಡಿರುವ 1.86 ಲಕ್ಷ ಕೋಟಿ ರೂ.ಗಳ ಕಲ್ಲಿದ್ದಲು ಹಗರಣದ ಮಸಿಯನ್ನು 'ತೊಳೆದುಕೊಳ್ಳುವ' ಓಡಾಟದಲ್ಲಿದ್ದಾರಂತೆ. ಸಿಎಜಿ ವರದಿಯ ಹಿನ್ನೆಲೆಯಲ್ಲಿ, ಬಿಜೆಪಿಯೊಂದಿಗೆ 'ಮ್ಯಾಚ್ ಫಿಕ್ಸಿಂಗ್' ತಂತ್ರದಿಂದಾಗಿ ಸಂಸತ್ತಿನಲ್ಲಿ ಉತ್ತರ ನೀಡುವ ಮುಜುಗರದಿಂದ ತಪ್ಪಿಸಿಕೊಂಡ ಮೇಲೆ, ಬಿಜೆಪಿಯ ಮುಖಂಡರ ಮೇಲೆಯೂ ಇಂತಹದೇ ಆಪಾದನೆಗಳು ಬರುತ್ತಿರುವಾಗ ಇದೊಂದು ಹಗರಣವೇ ಅಲ್ಲ ಎಂದು ಬಿಂಬಿಸುವ ಶತಪ್ರಯತ್ನ ನಡೆಸುವ ಮಟ್ಟಕ್ಕೆ ಈ ಯುಪಿಎ-2 ಸರಕಾರ ಇಳಿದಿರುವಂತಿದೆ. ನಿಜ, ನವ-ಉದಾರವಾದಿ ಶಬ್ದಕೋಶದಲ್ಲಿ 'ಹಗರಣ' ಎಂಬ ಪದವೇ ಇಲ್ಲ!

ಆದರೆ ಕಾಂಗ್ರೆಸ್ 2ಜಿ ಹಗರಣದ ನಂತರದ 'ಅನುಭವ'ದಿಂದ ಇದೀಗ ಇಂತಹ ಪ್ರಯತ್ನಕ್ಕೆ ಇಳಿದಿದೆಯಂತೆ. ಆಗ 'ರಾಜಕೀಯ ಸ್ಥೈರ್ಯ' ತೋರಿಸದೆ ತಪ್ಪು ಮಾಡಿದೆವು, ಈ ಸಲ ಹಾಗಾಗಬಾರದು ಎಂದು ನಿರ್ಧರಿಸಿರುವುದಾಗಿ ಒಬ್ಬ ಕಾಂಗ್ರೆಸ್ ಮುಖಂಡರು ಅಭಿಪ್ರಾಯ ಪಟ್ಟಿದ್ದಾರಂತೆ. ಆಗ ಹಗರಣದಲ್ಲಿ ಸಿಕ್ಕಿಬಿದ್ದದ್ದು



ಮಿತ್ರಪಕ್ಷದವರು. ಈ ಬಾರಿ ಹಾಗಲ್ಲ, ಸ್ವತಃ ಪ್ರಧಾನ ಮಂತ್ರಿಯೂ ಸೇರಿದಂತೆ, ಯುಪಿಎಯ ನೇತೃತ್ವದ ಪಕ್ಷದ ಮುಖಂಡರುಗಳ ಮೇಲೆಯೇ ಮಸಿ ಬಿದ್ದಿದೆ.

ತಮ್ಮದೇ ಜಾಡಿನಲ್ಲಿರುವ ಬಿಜೆಪಿಯನ್ನೇನೋ, ಈ ವಿಷಯದಲ್ಲಿ ಹೀಗೆ ಎದುರಿಸಬಹುದು, ಆದರೆ ಅಷ್ಟರಿಂದಲೇ ಮಸಿ ತೊಳೆದು ಹೋಗದು ಎಂಬ ಭಯವೂ ಕೆಲವು ಕಾಂಗ್ರೆಸ್ ಮುಖಂಡರಲ್ಲಿ ವ್ಯಕ್ತವಾಗಿದೆಯಂತೆ. ಆದ್ದರಿಂದಲೇ ಇಂತಹ ಮಂತ್ರಿಗಳ ದಂಡಯಾತ್ರೆಗಳಲ್ಲಿನ 'ಪತ್ರಿಕಾ ಸಮ್ಮೇಳನ'ಗಳ ಆಚೆಗೂ ಹೋಗಬೇಕು, ಇಡೀ ಆಡಳಿತವೇ ಬಿಕ್ಕಟ್ಟಿಗೊಳಗಾಗಿದೆ ಎಂಬ ಭಾವನೆಯನ್ನು ಹೋಗಲಾಡಿಸಬೇಕು, ಎಲ್ಲಕ್ಕೂ ಮಿಗಿಲಾಗಿ ಆಹಾರ ಹಣದುಬ್ಬರವನ್ನು ಎದುರಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಇಂತಹ ಕೆಲವು ಮುಖಂಡರು ಭಾವಿಸುತ್ತಿರುವಂತೆಯೇ, ಯುಪಿಎ-2 ತೈಲ ಮಂತ್ರಿಗಳು ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆ ಮಾಡದೇ ಇರಲು ಸಾಧ್ಯವೇ ಇಲ್ಲ ಎಂದು ತೊಳಲಾಟ ವ್ಯಕ್ತಪಡಿಸಿದ್ದಾರೆ. ಈ ಸಪ್ಟಂಬರ್ 11ಕ್ಕೆ ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿ(ಸಿಸಿಪಿಎ) ಸಭೆ ಸೇರಿ ಈ ಬಗ್ಗೆ ನಿರ್ಧರಿಸ ಬೇಕಾಗಿತ್ತಂತೆ. ಆದರೆ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯ ಈ ಸಮಿತಿ ಸಭೆ ಸೇರಲಿಲ್ಲವಂತೆ.

ಈ ನಡುವೆ, ಈ ಹಗರಣವನ್ನೇ ಬಳಸಿಕೊಂಡು ಇದುವರೆಗೆ ಸಾಧ್ಯವಾಗದಿದ್ದ ಕಲ್ಲಿದ್ದಲು ವಲಯದ ಅರಾಷ್ಟ್ರೀಕರಣವನ್ನು ನಡೆಸಲು, ಆಮೂಲಕ ದೇಶದ ಈ ಅಮೂಲ್ಯ ಸಂಪನ್ಮೂಲದ ಲೂಟಿಯನ್ನು ಶಾಶ್ವತಗೊಳಿಸಲು ಕಾರ್ಪೊರೇಟ್ ಮತ್ತು ಆಡಳಿತದ ಕೂಟ ಪಿತೂರಿ ನಡೆಸುತ್ತಿವೆ ಎಂದು ಅಖಿಲ ಭಾರತ ಕಲ್ಲಿದ್ದಲು ಕಾರ್ಮಿಕರ ಒಕ್ಕೂಟ ಹೇಳಿದೆ. 1973ರಲ್ಲಿ ಕಲ್ಲಿದ್ದಲು ಗಣಿಗಾರಿಕೆಯನ್ನು ರಾಷ್ಟ್ರೀಕರಿಸಿ ಅದನ್ನು ಖಾಸಗಿ ಲೂಟಿಯಿಂದ ತಪ್ಪಿಸಲಾಗಿತ್ತು. ಆನಂತರ ಇದನ್ನು ಮೊದಲಿನ ಸ್ಥಿತಿಗೆ ಒಯ್ಯುವ ಬಹಳಷ್ಟು ಶಾಸನಾತ್ಮಕ ಪ್ರಯತ್ನಗಳು ನಡೆದರೂ ಸಫಲವಾಗಿರಲಿಲ್ಲ. ನವ-ಉದಾರೀಕರಣದ ಹಿನ್ನೆಲೆಯಲ್ಲಿ, ಕೋಲ್ ಇಂಡಿಯಾ ಲಿಮಿಟೆಡ್‌ನ್ನು ದುರ್ಬಲಗೊಳಿಸಿ, ಖಾಸಗಿಯವರಿಗೆ ಅವರಿಗೆ 'ಬೇಕಾದ' ಕಲ್ಲಿದ್ದಲನ್ನು ಹಂಚುವ ಹೆಸರಿನಲ್ಲಿ, ಪರೋಕ್ಷವಾಗಿ ರಾಷ್ಟ್ರೀಕರಣವನ್ನು ವಿಫಲಗೊಳಿಸುವ ಪ್ರಯತ್ನ ನಡೆದಿದೆ. ಅದರ ದುಷ್ಫಲವೇ ಈಗ ಭಾರತದ ಮಹಾಲೆಕ್ಕ ಪರಿಶೋಧಕರು ಕಂಡು ಹಿಡಿದಿರುವ ಈ ಬೃಹತ್ ಹಗರಣ.

ಕಲ್ಲಿದ್ದಲು ಗಣಿಗಾರಿಕೆಯನ್ನು ಅರಾಷ್ಟ್ರೀಕರಿಸುವ ಹುನ್ನಾರಗಳ ವಿರುದ್ಧ ಅಕ್ಟೋಬರ್ 1 ರಂದು ದೇಶಾದ್ಯಂತ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಲು ಕಲ್ಲಿದ್ದಲು ಕಾರ್ಮಿಕರ ಒಕ್ಕೂಟ ನಿರ್ಧರಿಸಿದೆ. ಮುಂದಿನ ಕ್ರಮಗಳನ್ನು ನವಂಬರಿನಲ್ಲಿ ನಡೆಯುವ ಒಕ್ಕೂಟದ ಸಮ್ಮೇಳನ ನಿರ್ಧರಿಸಲಿದೆ ಎಂದು ಒಕ್ಕೂಟದ ಪತ್ರಿಕಾ ಹೇಳಿಕೆ ತಿಳಿಸಿದೆ.

ಸುರಕ್ಷಿತವಲ್ಲದ, ವೆಚ್ಚದಾಯಕ ಜೈತಪುರ ಯೋಜನೆ ಪರಮಾಣು ಗೀಳಿನಿಂದಾಗಿ, ರದ್ದು ಮಾಡಲು ಹಿಂಜರಿಕೆ

ಮಹಾರಾಷ್ಟ್ರದ ಜೈತಪುರ ಪರಮಾಣು ವಿದ್ಯುತ್ ಪ್ರಾಜೆಕ್ಟ್‌ನಲ್ಲಿ ಸುರಕ್ಷಿತತೆ ಮತ್ತು ವೆಚ್ಚ, ಈ ಎರಡೂ ವಿಷಯದಲ್ಲಿ ಪರಿಣಿತರು, ಸಂಸದೀಯ ಪಟುಗಳು ಮತ್ತು ಇತರರಿಂದ ಗಂಭೀರ ಆಕ್ಷೇಪಗಳು ವ್ಯಕ್ತವಾಗಿದ್ದರೂ ಯುಪಿಎ-2 ಸರಕಾರ ಮತ್ತು ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿರುವ ಸರಕಾರ ಅವನ್ನೆಲ್ಲ ಉಪೇಕ್ಷಿಸಿ, ಸುತ್ತಲಿನ ಜನತೆಗೆ ಈ ಬಗ್ಗೆ ಇರುವ ಆತಂಕಗಳನ್ನು ಪರಿಹರಿಸುವ ಗೋಜಿಗೂ ಹೋಗದೆ ಮುಂದುವರೆಯಲು ನಿರ್ಧರಿಸಿದಂತೆ ಕಾಣುತ್ತದೆ. 2010ರಲ್ಲಿ ಪರಿಸರ ಮತ್ತು ಅರಣ್ಯ ಇಲಾಖೆ ಇದಕ್ಕೆ ನೀಡಿದ್ದು 'ಶರತ್ತುಬದ್ಧ' ಮಂಜೂರಾತಿ; ಅಲ್ಲದೆ ಈ ಮಂಜೂರಾತಿ ಯಾವ 'ಪರಿಸರದ ಮೇಲಿನ ಪ್ರಭಾವದ ಪರಿಶೀಲನೆ'(ಇಐಎ)ಯ ಆಧಾರದ ಮೇಲೆ ಕೊಡಲಾಗಿತ್ತೋ ಅದೇ ಅವೈಜ್ಞಾನಿಕ ಮತ್ತು ಬಹಳ ದೋಷಪೂರಿತ ಎಂಬ ಟೀಕೆಗಳೂ ಬಂದಿದ್ದವು. ವಾಸ್ತವವಾಗಿ ಇಂತಹ ಪ್ರಮಾಣ ಪತ್ರ 'ಪರಮಾಣು ವಿದ್ಯುತ್ ನಿಯಂತ್ರಣ ಮಂಡಳಿ'ಯಿಂದ ಬರಬೇಕಾಗಿತ್ತು. ಈ ಸ್ಥಾವರಕ್ಕೆ ಫ್ರಾನ್ಸಿನ ಅರೇವಾ ಕಂಪನಿ ಒದಗಿಸಿರುವ ವಿನ್ಯಾಸವನ್ನು ಕೂಡ ಈ ಮಂಡಳಿ ಇನ್ನೂ ಮಂಜೂರು ಮಾಡಿಲ್ಲ ಎಂದು ತಿಳಿದು ಬಂದಿದೆ. ಆದರೂ ಇವನ್ನೆಲ್ಲ ನಿರ್ಲಕ್ಷಿಸಿ ಅದನ್ನು ಹೇಗಾದರೂ ಸ್ಥಾಪಿಸಿಯೇ ಬಿಡಲು ಸರಕಾರ ಮುಂದಾಗಿದೆ.

ಇನ್ನೂ ಆತಂಕಕಾರಿ ಸಂಗತಿಯೆಂದರೆ ಅರೇವಾ ಕಂಪನಿ ಈ ಸ್ಥಾವರಕ್ಕೆ ಒದಗಿಸಿರುವ ಇಪಿಆರ್ ಸ್ಥಾವರದ ವಿನ್ಯಾಸದ ಬಗ್ಗೆ ವಿವಿಧ ದೇಶಗಳ ಪರಮಾಣು ಸುರಕ್ಷತಾ ಸಂಘಟನೆಗಳು ತೀವ್ರ ಆಕ್ಷೇಪಗಳನ್ನು ವ್ಯಕ್ತಪಡಿಸಿವೆ, ಸ್ವತಃ ಫ್ರಾನ್ಸ್ ದೇಶದ ವಿದ್ಯುತ್ ಇಲಾಖೆ ಈ ವಿನ್ಯಾಸ ಅನಗತ್ಯವಾಗಿ ಬಹಳ ಕ್ಲಿಷ್ಟವಾಗಿರುವುದರಿಂದ ಇದನ್ನು ಮುಂದುವರೆಸಬಾರದು ಎಂದು ಯೋಜಿಸಿರುವುದಾಗಿಯೂ ವರದಿಗಳಿವೆ. ಈ ವಿನ್ಯಾಸದ ಮೊದಲ ಎರಡು ಸ್ಥಾವರಗಳ ಸ್ಥಾಪನೆ ಬಹಳಷ್ಟು ವಿಳಂಬಗೊಂಡಿದೆ. ಫಿನ್‌ಲ್ಯಾಂಡಿನಲ್ಲಿ ನಾಲ್ಕು ವರ್ಷಗಳ ಹಿಂದೆ ಸ್ಥಾಪನೆಗೊಳ್ಳಬೇಕಾಗಿದ್ದ ಸ್ಥಾವರ ಇನ್ನೂ ಕಾರ್ಯಾರಂಭ ಮಾಡಿಲ್ಲ. ಫ್ರಾನ್ಸಿನಲ್ಲಿ ಯೋಜಿಸಿದ್ದ ಈ ವಿನ್ಯಾಸದ ಸ್ಥಾವರವನ್ನು ಅನಿರ್ದಿಷ್ಟವಾಗಿ ತಡೆ ಹಿಡಿಯಲಾಗಿದೆ. ಅದರೆ ಭಾರತದಲ್ಲಿ ಮಾತ್ರ ಯುಪಿಎ-2 ಸರಕಾರ ಇವನ್ನೆಲ್ಲ ಗಮನಕ್ಕೆ ತಗೊಳ್ಳದೇ ಮುಂದುವರೆಯಬೇಕೆಂದಿದೆ.

ಜಪಾನಿನ ಫುಕುಶಿಮಾ ಪರಮಾಣು ವಿದ್ಯುತ್ ದುರ್ಘಟನೆಯ ನಂತರ ಒಂದೇ ಕಡೆ ಒಂದಕ್ಕಿಂತ ಹೆಚ್ಚು ಸ್ಥಾವರಗಳನ್ನು ಹಾಕುವ ಸುರಕ್ಷತೆಯ ಬಗ್ಗೆ ತೀವ್ರ ಪ್ರಶ್ನೆಗಳೆದ್ದಿವೆ. ಈ ಜೈತಪುರ ವಿನ್ಯಾಸದಲ್ಲಿ ಒಂದೇ ಕಡೆ ಆರು ಸ್ಥಾವರಗಳ ಯೋಜನೆ ಇದೆ ಎಂಬುದು ಗಮನಾರ್ಹ.

ವೆಚ್ಚದ ವಿಷಯದಲ್ಲೂ ಬಹಳ ತಕರಾರುಗಳಿವೆ. ಎರಡೂ ಕಡೆ ಈಗಾಗಲೇ ವಾಸ್ತವಿಕ ವೆಚ್ಚ ಮೂಲ ಅಂದಾಜು ವೆಚ್ಚದ ಎರಡು ಪಟ್ಟನ್ನೂ ದಾಟಿದೆಯಂತೆ. ಅಲ್ಲದೇ ಈ ಅರೇವಾ ಕಂಪನಿಯೇ ಭಾರೀ ಹಣಕಾಸು ಸಂಕಷ್ಟದಲ್ಲಿದೆ. ಇದರಿಂದಾಗಿ ಅದರ ಶೇರು ಬೆಲೆಗಳು ಕಳೆದ ಐದು ವರ್ಷಗಳಲ್ಲಿ ಒಂದನೇ ಹತ್ತಕ್ಕೆ ಇಳಿದಿದೆ. 'ಭಾರತದ ಪರಮಾಣು ವಿದ್ಯುತ್ ನಿಗಮ' (ಎನ್‌ಪಿಸಿಐಎಲ್) ಈ ಯೋಜನೆಯ ವೆಚ್ಚದ ಬಗ್ಗೆ, ಆಮೂಲಕ ಈ ಸ್ಥಾವರದಿಂದ ಉತ್ಪಾದನೆಯಾಗುವ ವಿದ್ಯುತ್ ದರಗಳು ಏನಿರುತ್ತವೆ ಎಂದು ಹೇಳಲೂ ನಿರಾಕರಿಸುತ್ತಿದೆ.

ಇಷ್ಟೆಲ್ಲ ಪ್ರಶ್ನೆಗಳಿದ್ದರೂ, ಯುಪಿಎ-2 ಸರಕಾರಕ್ಕೆ ಈ ಸ್ಥಾವರವನ್ನು ಸ್ಥಾಪಿಸಿಯೇ ಬಿಡಬೇಕೆಂಬ ಗೀಳು ಹತ್ತಿದಂತಿದೆ. ಫ್ರಾನ್ಸಿನ ಅರೇವಾ ಕಂಪನಿಯೊಂದಿಗಿನ ಕಾಂಟ್ರಾಕ್ಟನ್ನು ರದ್ದು ಮಾಡಬೇಕು ಎಂದು ಈ ಯೋಜನೆಯ ವಿರುದ್ಧ ಪ್ರತಿಭಟಿಸುತ್ತಿರುವವರೊಂದಿಗೆ ಸೌಹಾರ್ದ ವ್ಯಕ್ತಪಡಿಸಲು ರಚಿಸಿರುವ ರಾಷ್ಟ್ರೀಯ ಸಮಿತಿಯ ಮುಖಂಡರು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಈ ಪತ್ರಕ್ಕೆ ಎಡಪಕ್ಷಗಳ ಮುಖಂಡರಾದ ಪ್ರಕಾಶ ಕಾರಟ್, ಸೀತಾರಾಂ ಯೆಚುರಿ, ಎ.ಬಿ.ಬರ್ಧನ್, ಡಿ.ರಾಜರವರಲ್ಲದೆ ಇತರ ಕೆಲವು ಪಕ್ಷಗಳ ಮುಖಂಡರಾದ ದಾನಿಷ್ ಅಲಿ, ರಾಮವಿಲಾಸ್ ಪಾಸ್ವಾನ್ ಮುಂತಾದವರು ಸಹಿ ಮಾಡಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜಗದಗಲ

ಶರತ್‌ಚಂದ್ರ

ಅಮೆರಿಕನ್ ಪ್ರಾಯೋಜಿತ 'ಪ್ರಜಾಸತ್ತೆ' ಜೆಹಾದಿಗಳನ್ನು ಬಲಪಡಿಸಿದೆ


ಲಿಬ್ಯಾದಲ್ಲಿ ಅಮೆರಿಕನ್ ರಾಯಭಾರ ಕಚೇರಿಯ ಬಳಿ ನಡೆದ ದೊಂಬಿಯಲ್ಲಿ ಅಮೆರಿಕನ್ ರಾಯಭಾರಿ ಮತ್ತು ಮೂವರು ಇತರ ಸಿಬ್ಬಂದಿಯ ಕೊಲೆ ಆಗಿದೆ. ಇದು ಕಳೆದ 2–3 ದಶಕಗಳಲ್ಲೇ ವಿದೇಶದಲ್ಲಿ ಅಮೆರಿಕನ್ ರಾಯಭಾರಿಯ ಕೊಲೆಯ ಮೊದಲ ಘಟನೆ ಎನ್ನಲಾಗಿದೆ. ವಿಶ್ವ ವಾಣಿಜ್ಯ ಕೇಂದ್ರವನ್ನು ನಾಶ ಮಾಡಿದ ಭೀಕರ ಭಯೋತ್ಪಾದಕ ದಾಳಿಯ 11ನೇ ವಾರ್ಷಿಕದಂದೇ ನಡೆದಿದೆ. ಇಸ್ಲಾಂ ವಿರುದ್ಧ ದ್ವೇಷ ಕಾರುವ ಮತ್ತು ಪ್ರವಾದಿ ಮಹಮ್ಮದರನ್ನು ಗೇಲಿ ಮಾಡುವ ಫಿಲಂ ಒಂದರ ಭಾಗಗಳನ್ನು ಇಂಟರ್‌ನೆಟ್‌ನಲ್ಲಿ ಕಳೆದ ಕೆಲವು ದಿನಗಳಲ್ಲಿ ಬಿಡುಗಡೆ ಮಾಡಲಾಗಿತ್ತು. ಅರಬ್ ಮತ್ತು ಉತ್ತರ ಆಫ್ರಿಕಾದ ಮುಸ್ಲಿಂ ಬಹುಸಂಖ್ಯಾತ ದೇಶಗಳ ಜನತೆಯಲ್ಲಿ ಇದು ತೀವ್ರ ಆಕ್ರೋಶ ಉಂಟು ಮಾಡಿತ್ತು. ಇದನ್ನು ಇಸ್ರೇಲಿ–ಅಮೆರಿಕನ್ ರೀಯಲ್ ಎಸ್ಟೇಟ್ ಉದ್ಯಮಿಯೊಬ್ಬ ನಿರ್ಮಿಸಿದ್ದು, ಕ್ರಿಶ್ಚಿಯನ್ ಮೂಲಭೂತವಾದಿ ಪಾದ್ರಿಯೊಬ್ಬ ಮುಕ್ತವಾಗಿ ಅದರ ಬಗ್ಗೆ ಪ್ರಚಾರ ಮಾಡುವುದರಲ್ಲಿ ತೊಡಗಿದ್ದು ಅಮೆರಿಕನ್ ಸರ್ಕಾರ ಆ ಬಗ್ಗೆ ಏನೂ ಕ್ರಮ ಕೈಗೊಳ್ಳದ್ದು ಜನತೆಯ ಆಕ್ರೋಶಕ್ಕೆ ಕಾರಣವಾಗಿತ್ತು.

ಜನತೆಯ ಆಕ್ರೋಶ ಅಮೆರಿಕನ್ ರಾಯಭಾರ ಕಚೇರಿಗಳ ಮುಂದೆ ಭಾರಿ ಪ್ರತಿಭಟನೆಗಳಲ್ಲಿ ಹರಿದು ಬಂದಿತ್ತು. ಈಜಿಪ್ಟಿನ ಕೈರೋ, ಯೆಮೆನಿನ ಸಾನಾ, ಲಿಬ್ಯಾದ ಬೆಂಗಾಝಿ, ಇರಾನಿನ ಟೆಹರಾನಿನಲ್ಲಿ, ಟುನಿಶಿಯಾದ ಟುನಿಸ್ ನಲ್ಲಿ, ಪ್ಯಾಲೆಸ್ತೈನಿನ ಗಾಜಾದಲ್ಲಿ, ಮೊರೊಕ್ಕೊ, ಇರಾಕ್ ಮುಂತಾದ ಹಲವು ದೇಶಗಳಲ್ಲಿ ನೂರಾರು ಜನ ಅಮೆರಿಕನ್ ರಾಯಭಾರ ಕಚೇರಿಯ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ಕೈರೋ, ಸಾನಾ, ಬೆಂಗಾಝಿ, ಗಾಝಾಗಳಲ್ಲಿ ಅಮೆರಿಕನ್ ಧ್ವಜಗಳನ್ನು ಸುಡಲಾಯಿತು. ಕೈರೋ, ಸಾನಾಗಳಲ್ಲಿ ಅಮೆರಿಕನ್ ಧ್ವಜ ಇಳಿಸಿ ಇಸ್ಲಾಮಿಕ್ ಧ್ವಜ ಹಾರಿಸಲಾಯಿತು. 'ಅಮೆರಿಕನ್ನರೇ ತೊಲಗಿ' ಎಂಬ ಘೋಷಣೆಗಳನ್ನು ಕೂಗಲಾಯಿತು. ಕೈರೋದಲ್ಲಿ ಪ್ರತಿಭಟನಾಕಾರರು ಕಚೇರಿಗೆ ನುಗ್ಗುವುದನ್ನು ತಡೆಯಲು ಗುಂಡು ಹಾರಿಸಬೇಕಾಯಿತು. ಇದರಿಂದ ಹಲವು ಜನ ಸತ್ತಿದ್ದಾರೆ ಮತ್ತು ಗಾಯಗೊಂಡಿದ್ದಾರೆ. ಹಲವು ದೇಶಗಳಲ್ಲಿ ಅಮೆರಿಕನ್ ರಾಯಭಾರ ಕಚೇರಿಗಳ ಎದುರಲ್ಲಿ ದೈನಿಕ ಪ್ರತಿಭಟನೆಗಳು ಮುಂದುವರೆದಿವೆ.

ಲಿಬ್ಯಾದ ಬೆಂಗಾಝಿ ಪಟ್ಟಣದಲ್ಲಿ ಸಹ ಇತರೆಡೆಯಂತೆ ಪ್ರತಿಭಟನಾಕಾರರು ಕಲ್ಲು ಮತ್ತು ಬಾಟಲಿಗಳಲ್ಲದೆ ಯಾವುದೇ ಶಸ್ತ್ರಗಳನ್ನು ಹೊಂದಿರಲಿಲ್ಲ. ಆದರೆ ಈ ಪ್ರಕ್ಷುಬ್ಧ ಪರಿಸ್ಥಿತಿ ಬಳಸಿ ಸಶಸ್ತ್ರ ಗುಂಪೊಂದು ಮಶಿನ್ ಗನ್, ರಾಕೆಟ್ ಲಾಂಚರುಗಳನ್ನು ಬಳಸಿ ಅಮೆರಿಕನ್ ರಾಯಭಾರ ಕಚೇರಿ ಮೇಲೆ ದಾಳಿ ನಡೆಸಿತು. ಈ ದಾಳಿ ನಡೆಯುತ್ತಿದ್ದಂತೆ ರಾಯಭಾರಿ ಮತ್ತು ಅವರ ಸಿಬ್ಬಂದಿಯನ್ನು ಒಂದು ಗೋಪ್ಯ ಸುರಕ್ಷಿತ ಕಟ್ಟಡಕ್ಕೆ ಕರೆದುಕೊಂಡು ಹೋಗಲಾಯಿತು. ಆದರೆ ಈ ಕಟ್ಟಡದ ಜಾಡು ಹಿಡಿದು ಬಂದ ಸಶಸ್ತ್ರ ಗುಂಪು ನಡೆಸಿದ ಎರಡನೇ ದಾಳಿಯಲ್ಲಿ ರಾಯಭಾರಿ ಮತ್ತು ಇತರ ಸಿಬ್ಬಂದಿ ತೀವ್ರವಾಗಿ ಗಾಯಗೊಂಡು ಸತ್ತರು. ಅನ್ಸರ್ ಅಲ್ ಶರಿಯಾ (ಅಲ್ ಖೈದಾದ ಸ್ಥಳೀಯ ಘಟಕ) ಎಂಬ ಸಶಸ್ತ್ರ ಗುಂಪು ಈ ದಾಳಿ ನಡೆಸಿದೆ ಎನ್ನಲಾಗಿದೆ. ಗೋಪ್ಯ ಸುರಕ್ಷಿತ ಕಟ್ಟಡದ ಬಗ್ಗೆ ಮಾಹಿತಿ ಅಮೆರಿಕನ್ ಕಚೇರಿ ಮತ್ತು ಲಿಬ್ಯಾ ಸುರಕ್ಷಾ ಸಿಬ್ಬಂದಿಯ ಕೆಲವರಿಗೆ ಮಾತ್ರ ಗೊತ್ತಿತ್ತು. ಇದರಿಂದಾಗಿ ಈ ಗುಂಪಿಗೆ ಲಿಬ್ಯಾ ಸರ್ಕಾರದ ಒಳಗೆ ಕನೆಕ್ಷನ್ ಇದೆ ಎಂದು ಅನುಮಾನ ಪಡಲಾಗಿದೆ. ಈ ಸಶಸ್ತ್ರ ದಾಳಿ ಪೂರ್ವಯೋಜಿತ ಅಥವಾ ಪ್ರತಿಭಟನಾ ಪ್ರದರ್ಶನದ ಅವಕಾಶ ಬಳಸಿಕೊಂಡು ವೇಗವಾಗಿ ಯೋಜಿಸಲಾಗಿತ್ತು ಎನ್ನುವುದು ಸ್ಪಷ್ಟ.



ಅರಬ್ ಮತ್ತು ಉತ್ತರ ಆಫ್ರಿಕಾದಲ್ಲಿ ಜಾತ್ಯತೀತ (ಕೆಲವು ಸರ್ವಾಧಿಕಾರಿಗಳು ಸೇರಿದಂತೆ) ಸರ್ಕಾರಗಳು ಅಲ್ ಖೈದಾ ಮುಂತಾದ ಮೂಲಭೂತವಾದಿ ಗುಂಪುಗಳು ಬೇರೂರದಂತೆ ಕ್ರಮ ಕೈಗೊಂಡಿದ್ದವು. ಇರಾಕ್, ಲಿಬ್ಯಾ (ಈಗ ಸಿರಿಯಾ) ಗಳಲ್ಲಿ ಅಮೆರಿಕದ ವ್ಯವಸ್ಥಿತ 'ಸರ್ಕಾರ ಬದಲಾಣೆ' ನೀತಿ ಇಂತಹ ಸರ್ಕಾರಗಳ ವಿರುದ್ಧ ಎಲ್ಲಾ ವಿರೋಧಿ ಗುಂಪುಗಳಿಗೆ ಭಾರೀ ಪ್ರಮಾಣದಲ್ಲಿ ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಕೊಟ್ಟಿದೆ. ಇದರ ಅತ್ಯಂತ ಹೆಚ್ಚಿನ ಪ್ರಯೋಜನ ಪಡೆದವರು ಅಲ್ ಖೈದಾ ಮತ್ತು ಅಂತಹ ಮೂಲಭೂತವಾದಿ ಜೆಹಾದಿ ಗುಂಪುಗಳು. ಹಿಂದೆ ಸೋವಿಯೆಟ್ ಒಕ್ಕೂಟ ಮತ್ತು ಅದರ ಬೆಂಬಲ ಪಡೆದ ಜಾತ್ಯತೀತ ಸರ್ಕಾರಗಳ ವಿರುದ್ಧ ಈ ಪ್ರದೇಶದಲ್ಲಿ ಜೆಹಾದಿ ಗುಂಪುಗಳ ದೊಡ್ಡ ಜಾಲವನ್ನು ರಚಿಸಿದ್ದು, ಇವರನ್ನೆಲ್ಲಾ ಅಫ್ಘಾನಿಸ್ತಾನದ ಜಾತ್ಯತೀತ ಸರ್ಕಾರದ ವಿರುದ್ಧ ಅಂತರ್ಯುದ್ಧದಲ್ಲಿ ಬಳಸಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. 'ಅರಬ್ ವಸಂತ'ದ ಜಾತ್ಯತೀತ ಸಮರಶೀಲ ಜನತಾ ಪ್ರತಿಭಟನೆಗಳ ಉಬ್ಬರ ಇಳಿಯುತ್ತಿದ್ದಂತೆ, ಇಸ್ಲಾಮಿಕ್ ಮೂಲಭೂತವಾದಿ ಶಕ್ತಿಗಳು ಸರ್ಕಾರ ರಚಿಸಿವೆ. ವಿರೋಧಿ ಚಳುವಳಿಗಳಲ್ಲೂ ಜೆಹಾದಿ ಶಕ್ತಿಗಳು ಅಧಿಪತ್ಯ ಸಾಧಿಸಿವೆ.



ಲಿಬ್ಯಾದಲ್ಲಿ ಗದ್ದಾಫಿ ಸರ್ಕಾರವನ್ನು ನಾಟೋ ಮಿಲಿಟರಿ ಬಲದಿಂದ ಉರುಳಿಸಿ, ವಿರೋಧ ಪಕ್ಷಗಳ ಒಕ್ಕೂಟದ ಸರ್ಕಾರ ಅಮೆರಿಕನ್ ಪ್ರಾಯೋಜಿತ 'ಪ್ರಜಾಸತ್ತೆ'ಯ ಭಾಗವಾಗಿ ಅಧಿಕಾರಕ್ಕೆ ಬಂದಿದೆ. ಆಗಿನಿಂದ ಲಿಬ್ಯಾದಲ್ಲಿ ಅರಾಜಕತೆ, ಭ್ರಷ್ಟಾಚಾರ, ಹಿಂಸಾಚಾರ ತಾಂಡವವಾಡುತ್ತಿದೆ. ಲಿಬ್ಯಾ ಹಿಂದಿನ ಅಭಿವೃದ್ಧಿ ನಾಶವಾಗಿದೆ. ಪ್ರಜಾಸತ್ತೆ ಮರೀಚಿಕೆಯಾಗಿದೆ. ಲಿಬ್ಯಾ ಇಡೀ ಪ್ರದೇಶದ ಜೆಹಾದಿ ಶಕ್ತಿಗಳ ಸಂಪನ್ಮೂಲ ಕೇಂದ್ರವಾಗಿದೆ. ಸಿರಿಯಾ ಮತ್ತು ಯೆಮೆನಿನಲ್ಲಿ ಜೆಹಾದಿ ಶಕ್ತಿಗಳಿಗೆ ಹಣ ಮತ್ತು ಶಸ್ತ್ರಾಸ್ತ್ರ ಲಿಬ್ಯಾದಿಂದ ಹರಿದು ಬರುತ್ತಿದೆ. ಹಲವು ತಿಂಗಳುಗಳಿಂದ ಒಸಾಮಾ ಬಿನ್ ಲಾಡೆನ್ ಮತ್ತು ಲಿಬ್ಯಾದ ಜೆಹಾದಿ ಪ್ರಮುಖ ನಾಯಕನ ಕೊಲೆಗೆ ಸೇಡು ತೀರಿಸಿಕೊಳ್ಳಲಿದೆ ಎಂದು ಅನ್ಸರ್ ಅಲ್ ಶರಿಯಾ ಹೇಳುತ್ತಾ ಬಂದಿದೆ. ಯೂಟ್ಯೂಬಿನಲ್ಲಿ ಬಿಡುಗಡೆ ಮಾಡಲಾದ ಇಸ್ಲಾಂ–ವಿರೋಧಿ ಫಿಲಂ ಇವರಿಗೆ ರಾಜಕೀಯವಾಗಿ ವರದಾನವಾಗಿ ಬಂತು. ಈ ಫಿಲಂ ವಿರುದ್ಧ ಅವರ ಪ್ರಚಾರ ಹಲವು ವಾರಗಳಿಂದ ನಡೆಯುತ್ತಿತ್ತು. ಕ್ರಿಶ್ಚಿಯನ್ ಮತ್ತು ಜ್ಯೂ ಮೂಲಭೂತವಾದಿಗಳಿಂದ ಈ ಫಿಲಂ ಬಿಡುಗಡೆ ಸಹ ಈ ಪ್ರದೇಶದಲ್ಲಿ ಪ್ರಕ್ಷುಬ್ಧತೆ ಹೆಚ್ಚಿಸುವ ಪ್ರಯತ್ನದ ಭಾಗವಾಗಿತ್ತು ಎಂಬ ಬಗ್ಗೆ ಸಂಶಯವಿಲ್ಲ. ಎಲ್ಲಾ ಧರ್ಮಗಳ ಮೂಲಭೂತವಾದಿಗಳು ಇಂತಹ ಪ್ರಚೋದನೆಗಳಿಂದ ಪರಸ್ಪರ ಪೂರಕವಾಗಿ ಬೆಳೆಯುತ್ತಾರೆ. ಇದರಿಂದ ಅರಬ್ ವಸಂತದ ಮೂಲಕ ಜನತೆ ವ್ಯಕ್ತಪಡಿಸಿದ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ಮೂಲೆಗುಂಪು ಮಾಡಿ, ನಿಜವಾದ ಸಮಸ್ಯೆಗಳನ್ನು ಪಕ್ಕಕ್ಕೆ ಸರಿಸಿ ಫ್ಯಾಸಿಸ್ಟ್ ದಬ್ಬಾಳಿಕೆ ತರಲು ಆಳುವ ವರ್ಗಗಳಿಗೆ ಸಹಾಯವಾಗುತ್ತದೆ. ಹಿಂದೆ ಡ್ಯಾನಿಶ್ ಕಾರ್ಟೂನು ವಿವಾದದ ಸಂದರ್ಭದಲ್ಲಿ ಇದೇ ಆಗಿದ್ದು.

ಆದರೆ ಅರಬ್ ಜನತೆಯ ಆಕ್ರೋಶದ ಗುರಿ ಅಮೆರಿಕನ್ ರಾಯಭಾರ ಕಚೇರಿ ಯಾಕೆ ಆಗಿರುತ್ತದೆ ಎಂಬುದು ಹಲವರಿಗೆ ಚಿದಂಬರ ರಹಸ್ಯವಾಗಿದೆ. ಇದಕ್ಕೆ ಕಾರಣ ಬಹಳ ಸರಳ. ಅರಬ್ ದೇಶಗಳಲ್ಲಿ 1950ರ ದಶಕದಿಂದಲೂ ಜನತೆಯ ಸಮಸ್ಯೆಗಳನ್ನು ಬಗೆಹರಿಸುವ ಮತ್ತು ಅಭಿವೃದ್ಧಿ ಸಾಧಿಸುವ ಜಾತ್ಯತೀತ ಪ್ರಜಾಸತ್ತಾತ್ಮಕ ಆಡಳಿತ ತರಲು ಇದ್ದ ಸಾಮಾನ್ಯ ತೊಡಕು ಎಂದರೆ ಅಮೆರಿಕನ್ ಸಾಮ್ರಾಜ್ಯಶಾಹಿ. ಈ ಪ್ರದೇಶದ ನಿಜವಾದ ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ

ಮನಕ್ಕೆ ಏನೂ ಮಾಡಲು ಹೇಸದ ಶಕ್ತಿ. 50ರ ದಶಕದಿಂದ ಜನತೆಯ ಪ್ರಾಥಮಿಕ ಕ್ಕುಗಳನ್ನೂ ದಮನ ಮಾಡಿರುವ ರ್ವಾಧಿಕಾರಿಗಳ (ಅದು ಇರಾನಿನ ಶಾ ರಲಿ, ಸೌದಿ ಅರೇಬಿಯಾದ ಶೇಕ್‌ಗಳಿರಲಿ, ಜಿಪ್ಟಿನ ಮುಬಾರಕ್ ಇರಲಿ, ಮಾಲಿಯಾ ಮತ್ತಿತರ ದೇಶಗಳ ಂಡುದೊರೆಗಳಿರಲಿ) ಹಿಂದೆ ಇದ್ದ ಶಕ್ತಿ ಮೆರಿನ್ ಸಾಮ್ರಾಜ್ಯಶಾಹಿ. ಆದು ಜನತೆಯ ತ್ರಿ ನಂಬರ್ ಒನ್ ಎಂದು ಜನತೆಗೆ ಸ್ಪಷ್ಟ ರಿವು ಇದೆ.

ಈ ದುರಂತಕ್ಕೆ ಅಮೆರಿಕನ್ ಸರ್ಕಾರದ ತಿಕ್ರಿಯೆ ನಿರೀಕ್ಷಿತವೇ ಇದೆ. ಅಧ್ಯಕ್ಷ ಬಾಮಾ ಈ ದಾಳಿ ನಡೆಸಿದ ಶಕ್ತಿಗಳ ಮೇಲೆ ಪ್ರತೀಕಾರ ಮಾಡಲು ಎರಡು ಯುದ್ಧ ಹಡಗುಗಳು ಮತ್ತು ವಿಶೇಷ ಡೆಗ್ಗಳನ್ನು ಕಳಿಸಲು ಆಜ್ಞೆ ಮಾಡಿದ್ದಾರೆ. ಬ್ಯಾದಲ್ಲಿ ನಾಟೋ ಮಿಲಿಟರಿ ಬಲಪ್ರಯೋಗದಿಂದ ಸರ್ಕಾರ ಬದಲಾವಣೆ, ಅದರ ನಂತರದ ಅರಾಜಕತೆ, ಜೆಹಾದಿ ಮುಂತಾದ ಶಕ್ತಿಗಳನ್ನು ಬಲಪಡಿಸಿದ್ದರಿಂದ ಈ ದುರಂತ ನಡೆದಿದೆ ಎಂದು ಒಪ್ಪಿಕೊಳ್ಳಲು ತಯಾರಿಲ್ಲ. ಮಾತ್ರವಲ್ಲ ಅಮೆರಿನ್ ಅಧ್ಯಕ್ಷೀಯ ಚುನಾವಣಾ ಬಿಸಿಯಲ್ಲಿ ಈ ದುರಂತ ರಾಜಕೀಯ ದಾಳವಾಗಿದೆ. 'ಇಸ್ಲಾಮಿಕ್ ಭಯೋತ್ಪಾದಕರಿಗೆ ಬುದ್ಧಿ ಕಲಿಸಬೇಕು', 'ಅಮೆರಿಕದ ರಾಷ್ಟ್ರೀಯ ಮಾನ ಉಳಿಸಬೇಕು' ಎಂಬ ಕೂಗು ಎರಡೂ ಪಕ್ಷಗಳಿಂದ ಕೇಳಿ ಬರುತ್ತಿದೆ. ಈ ದುರಂತಕ್ಕೆ ಕಾರಣವಾದ (ಕನಿಷ್ಟ ಕಿಡಿ ಹೊತ್ತಿಸಿದ) ಅಮೆರಿಕನ್ ಪ್ರಜೆ ನಿರ್ಮಿಸಿದ ಫಿಲಂ ಬಗ್ಗೆ ಖಂಡನೆಯಾಗಲಿ ವಿಷಾದವಾಗಲಿ ಇಲ್ಲ. ಈಗಾಗಲೇ ಹತ್ತಿ ಉರಿಯುತ್ತಿರುವ ಅರಬ್ ಮತ್ತು ಉತ್ತರ ಆಫ್ರಿಕಾದಲ್ಲಿ ಇದರಿಂದ ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಳ್ಳಬಹುದು.

ಈ ದುರಂತ ಎರಡು ಅಂಶಗಳನ್ನು ಸ್ಪಷ್ಟ ಪಡಿಸಿದೆ. ಬುಶ್ ಆರಂಭಿಸಿ ಒಬಾಮಾ ಮುಂದುವರೆಸುತ್ತಿರುವ ಕಳೆದ 11 ವರ್ಷಗಳ 'ಜಗತ್ತಿನಾದ್ಯಂತ ಭಯೋತ್ಪಾದಕತೆ ವಿರುದ್ಧ ಸತತ ಯುದ್ಧ' ವಿಫಲವಾಗಿದೆ. ಮಾತ್ರವಲ್ಲ, ಅಲ್-ಖೈದಾದಂತಹ ಮೂಲಭೂತವಾದಿ ಭಯೋತ್ಪಾದಕ ಗುಂಪುಗಳನ್ನು ಬಲಪಡಿಸಿದೆ. ಅಮೆರಿಕನ್ ಮಿಲಿಟರಿ ಬಲಪ್ರಯೋಗದಿಂದ 'ಸರ್ವಾಧಿಕಾರಿಗಳ ಆಡಳಿತ' ಉರುಳಿಸಿ (ಉದಾ. ಇರಾಕ್, ಲಿಬ್ಯಾ) ಅಥವಾ ಅಂತಹ ಕಾರ್ಯಾಚರಣೆಯಲ್ಲಿ ತೊಡಗಿ (ಉದಾ. ಸಿರಿಯಾ) ಸ್ಥಾಪಿಸುತ್ತದೆ ಎನ್ನಲಾದ 'ಪ್ರಜಾಸತ್ತೆ' ಬರಿಯ ಟೊಳ್ಳು, ಜನತೆಯ ಸಮಸ್ಯೆಗಳು ಈ ಎರಡು ಕ್ರಮಗಳಿಂದ ಪರಿಹಾರವಾಗಿಲ್ಲ. ಮಾತ್ರವಲ್ಲ ಉಲ್ಬಣಗೊಂಡಿದೆ.

ನೈತಿಕ ಪೋಲೀಸರ ರಾಜಕಾರಣ

ಪುಟ 5 ರಿಂದ

ಪ್ರಕಟಿಸುತ್ತದೆ. ಆದ್ದರಿಂದಲೇ ಕೆಲವು ವರ್ಷದ ಹಿಂದೆ ಆ ಪತ್ರಿಕೆಯನ್ನು ಮಾರಾಟ ಮಾಡದಂತೆ ಸಂಘ ಪರಿವಾರದವರು ಕಾನೂನು ಬಾಹಿರ ನಿರ್ಬಂಧ ಹೇರಿದ್ದಲ್ಲದೆ, ಅದರ ಮಾಲಿಕರನ್ನು ಸುಳ್ಳು ಕೇಸುಗಳನ್ನು ಹಾಕಿ ಜೈಲಿಗೆ ಕಳಿಸಿದ್ದರು.

ಇಂತಹ ಘಟನೆಗಳು ಪುನರಾವರ್ತನೆಯಾಗುವುದರಿಂದ ಮಂಗಳೂರಿನ ಕೆಲವು ಪೋಲಿಸರು ಇದರ ಲಾಭ ಪಡೆದುಕೊಳ್ಳುತ್ತಿದ್ದಾರೆ. ಇದಕ್ಕೊಂದು ಉದಾಹರಣೆ.

ಕದ್ರಿ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ 'ಅಲೊವೇರಾ' ಮಸಾಜ್ ಸೆಂಟರ್ ಮತ್ತು 'ಮೂನ್ ಶೈನ್' ಪಾರ್ಲರ್ ಮೇಲೆ ಧಾಳಿ ನಡೆಸಿದ ಇನ್ಸ್‌ಪೆಕ್ಟರ್ ಕಿರಣ್ ಕುಮಾರ್ 'ಕಾಂಡೊಮ್' ದೊರೆತಿವೆ ಎಂದು ಆಪಾದಿಸಿ ಮಹಿಳೆಯರನ್ನು ಜೈಲಿಗಟ್ಟಿದ್ದ. ನಿಜ ಹೇಳಬೇಕೆಂದರೆ ಕಿರಣ್ ಕುಮಾರ್ ಪಾರ್ಲರ್‌ನ ಮಾಲಿಕರಿಂದ 50.000 ರೂ ಹಫ್ತಾ ಕೇಳಿದ್ದ. ಅದನ್ನು ನೀಡಲು ಒಪ್ಪದೆ ಇದ್ದಾಗ, ಬೇರೆಯವರ ಕೈಯಿಂದ್ದ ಕಾಂಡೊಮ್ ಇರಿಸಿ 'ಧಾಳಿ' ನಡೆಸಲಾಗಿತ್ತು.

ಅದೃಷ್ಟವಶಾತ್ ಪಾರ್ಲರ್‌ನಲ್ಲಿದ್ದ ಸಿ.ಸಿ ಟಿವಿಯಲ್ಲಿ ಬೇರೊಬ್ಬರು 'ಕಾಂಡೊಮ್' ಇಡುತ್ತಿರುವುದು ರೆಕಾರ್ಡ್ ಆಗಿರುವುದರಿಂದ ಅದರ ಮಾಲಿಕರಾದ ಮಹಿಳೆ ಬಚಾವಾದರು, ಅಲ್ಲದೆ ಕಿರಣ್ ಕುಮಾರ್ ಸಸ್ಪೆಂಡ್ ಆದ. ಆದರೆ ಸಿ.ಸಿ ಟಿವಿ ಇಲ್ಲದೆ ಹೋಗಿದ್ದರೆ?

ಹಿಂದೂ ಗೂಂಡಾಗಳಿಗೆ ಸಹಾಯ :

ಜುಲೈ 19-2012 ರಂದು ಹಿಂದೂ ಜಾಗರಣೆ ವೇದಿಕೆಯ ಕಾರ್ಯಕರ್ತರು ಶಿವರಾಜ್ ಎಂಬ ಯುವಕನೊಬ್ಬನನ್ನು ಕೊಲೆಗೈದು ತೊಕ್ಕೂರು ಬಳಿ ರೈಲ್ವೆ ಹಳಿಯ ಬಳಿ ಬಿಸಾಡಿದ್ದರು. ಅಷ್ಟಲ್ಲದೆ ಅದಕ್ಕೆ ಕೋಮು ಬಣ್ಣವನ್ನು ನೀಡಲು ಪ್ರಯತ್ನಿಸಿದರು ಕೊಲೆಯನ್ನು ಮುಸ್ಲಿಂ ಭೂಗತ ಪಾತಕಿಯೊಬ್ಬ ನಡೆಸಿದ್ದು ಎಂದು ಪ್ರಚಾರವನ್ನು ನಡೆಸಿದ್ದರು. ಆದರೆ ಪೋಲೀಸರು ಹಿಂದೂ ಜಾಗರಣ ವೇದಿಕೆಯ ಪ್ರಕಾಶ ಮತ್ತು ದಿನೇಶರನ್ನು ಬಂಧಿಸಿದಾಗ ನಿಜಸ್ಥಿತಿ ಬೆಳಕಿಗೆ ಬಂತು.

ಸದಾನಂದ ಗೌಡರು ಮುಖ್ಯ ಮಂತ್ರಿಯಾಗಿದ್ದಾಗ ಬಿಜೆಪಿ ಯುವ ಮೋರ್ಚಾದ ವತಿಯಿಂದ ಜಾಗೃತಿ ಮೇಳ ನಡೆದಿತ್ತು. ಆಶ್ಚರ್ಯದ ಸಂಗತಿ ಎಂದರೆ ಹೆಸರಾಂತ ಗೂಂಡಾಗಳಾದ ಪೊಳಲಿ ಅನಂತು, ಕ್ಯಾಂಡಲ್ ಸಂತು, ಬಜಿಲಕೆರೆ ಮಂಜು ಮೊದಲಾದವರ ಫೋಟೋಗಳನ್ನು ಸಮಾರಂಭದಲ್ಲಿ ಇಟ್ಟಿದ್ದರು. ಅದೂ ಸ್ವಾಮಿ ವಿವೇಕಾನಂದ, ರವೀಂದ್ರನಾಥ್ ಠಾಗೋರ್ ಮತ್ತು ಭಗತ್‌ಸಿಂಗ್‌ರಂತವರ ಸಾಲಿನಲ್ಲಿ!

ಅಲ್ಪ ಸಂಖ್ಯಾತರಿಗೆ ಅಂಗಡಿ ತೆರೆಯುವ ಹಕ್ಕಿಲ್ಲ :

ಪುತ್ತೂರಿನಲ್ಲಿ ದೇವಸ್ಥಾನವೊಂದರಲ್ಲಿ ಜಾತ್ರೆಯ ಸಂದರ್ಭದಲ್ಲಿ ಚಿಕ್ಕ ಪುಟ್ಟ ಅಂಗಡಿಗಳನ್ನು ತೆರೆಯುವುದು ವಾಡಿಕೆ. ಇದರಲ್ಲಿ ಹಿಂದೂಗಳಲ್ಲದೆ ಮುಸ್ಲಿಂ, ಕ್ರಿಶ್ಚಿಯನ್‌ರು ಕೂಡ ಅಂಗಡಿ ತೆರೆಯುತ್ತಾರೆ, ಇದು ಪದ್ಧತಿ. ಆದರೆ ಈ ಬಾರಿ ಅಲ್ಪ ಸಂಖ್ಯಾತರು ಅಂಗಡಿ ತೆರೆಯಲು ಏಲಂ ಕೂಗುವಂತಿಲ್ಲ ಎಂದು ಆಡಳಿತ ಮಂಡಳಿ ಘೋಷಿಸಿದೆಯಂತೆ.

ಒಟ್ಟಾರೆಯಾಗಿ ದ.ಕ ಜಿಲ್ಲೆಯಲ್ಲಿ ಸಂಘ ಪರಿವಾರದ ಚಟುವಟಿಕೆಗಳಿಂದಾಗಿ ಮುಸ್ಲಿಂ ಮೂಲಭೂತವಾದಿಗಳು ಬೆಳೆಯಲು ಅವಕಾಶವಾಗಿದೆ. ಹಿಂದೂ ಕೋಮುವಾದಿಗಳು ಮತ್ತು ಮುಸ್ಲಿಂ ಮೂಲಭೂತವಾದಿಗಳು ಪ್ರಜಾಪ್ರಭುತ್ವ ಸಮಾಜದ ಕಂಟಕಗಳು. ಜನರ ಸಮಸ್ಯೆಗಳನ್ನೆತ್ತಿ ಹೋರಾಡುವುದರ ಮೂಲಕ ಹಾಗೂ ಸಮಸ್ಯೆಗಳನ್ನು ಇಂದಿನ ರಾಜಕೀಯದೊಂದಿಗೆ ಇರುವ ಸಂಬಂಧಗಳನ್ನು ಹೇಳುತ್ತಾ, ನೈತಿಕ ಪೋಲೀಸರ ರಾಜಕೀಯವನ್ನು ಎಳೆಎಳೆಯಾಗಿ ಬಿಡಿಸಿ ನಮ್ಮ ಧೀರೋತ್ತಾದ ಚಳುವಳಿಯನ್ನು ಮುನ್ನೆಡೆಸಬೇಕಾಗಿದೆ.

ಹದಿವಯಸ್ಸಿನ ಮಾವೋ ಕಂಡ ದಂಗೆಗಳು

ಪುಟ 16 ರಿಂದ

ಮಾಲಕರ ಮನೆಯ ಕಣಜದಿಂದ ಅಕ್ಕಿ ತೆಗೆದುಕೊಳ್ಳೋಣ ಎಂದರ್ಥ. ಈ ಚಳುವಳಿಯಲ್ಲಿ ಮಾವೋರವರ ತಂದೆ ನಗರಕ್ಕೆ ಸಾಗಿಸುತ್ತಿದ್ದ ಅಕ್ಕಿಯನ್ನೂ ರೈತರು ಲೂಟಿ ಮಾಡಿದರು. ಅವರ ತಂದೆಯ ಕೋಪ ಮೇರೆ ಮೀರಿತು. ಆದರೆ ಅವರ ಬಗ್ಗೆ ಮಾವೋ ಸಹಾನುಭೂತಿಯನ್ನೇನೂ ತೋರಿಸಲಿಲ್ಲ. ಅದೇ ಸಮಯದಲ್ಲಿ ಈ ರೀತಿ ಅಕ್ಕಿಯನ್ನು ಲೂಟಿ ಮಾಡುವುದರಿಂದ ರೈತರ ಸಮಸ್ಯೆ ಬಗೆ ಹರಿಯುವುದೇ ಎಂಬ ಯೋಚನೆ ಅವರನ್ನು ಆವರಿಸಿತು.

ಹೀಗೆ ಮಾವೋರವರ ಹಳ್ಳಿ ಹಾಗೂ ರಾಜ್ಯ ಅನೇಕ ತೀವ್ರ ಹೋರಾಟಗಳ ಆಡುಂಬೊಲವಾಗಿತ್ತು. ಈ ಹೋರಾಟಗಳ ಕಾವನ್ನು ಹಾಗೂ ಜನತೆಯ ಮೇಲೆ ವಿವಿಧ ಶೋಷಕ ಶಕ್ತಿಗಳು ಎಸಗುತ್ತಿದ್ದ ದೌರ್ಜನ್ಯ, ಹಿಂಸಾಚಾರ, ಸಾವು ನೋವುಗಳನ್ನು ಅನುಭವಿಸುತ್ತಾ ಬೆಳೆದರು. ಅನೇಕ ಪ್ರತಿಭಟನೆ, ಹೋರಾಟ, ದಂಗೆಗಳ ಚಿಲುಮೆಯಾಗಿದ್ದ ಚಾಂಗ್ ಶಾ ನಗರವನ್ನು ಪ್ರವೇಶಿಸುವ ಮೊದಲೇ ಇಂತಹ ಕಠೋರ ಅನುಭವವನ್ನು ಪಡೆದಿದ್ದ ಮಾವೋರವರನ್ನು ಚೀನಾದ ಇತಿಹಾಸ ಅಲ್ಲಿಯವರೆಗೆ ಕಂಡು ಕೇಳರಿಯದಂತಹ ಒಂದು ಕ್ರಾಂತಿಯೇ ಎದುರುಗೊಂಡಿತು. ಅವರು ಕನಸುತ್ತಿದ್ದ ಶಾಲೆಗೆ ಪ್ರವೇಶ ಪಡೆದ ಕೆಲವೇ ತಿಂಗಳುಗಳಲ್ಲಿ ರಣರಂಗಕ್ಕೇ ಧುಮುಕಿದರು.

ಮಾತನಾಡುವುದು ಮುಗಿದಿತ್ತು ಎಂದು ಹೇಳಿದವರು ಯಾರು?

ಎಲ್ಲರೂ ಹೇಳಿದರು
ಸಮುದ್ರ ಯಾರಿಗೂ ಕಾಯುವುದಿಲ್ಲ
ಬರುವವರನ್ನು ಒಟ್ಟಿಗೇ ಕರೆದೊಯ್ಯುತ್ತದೆ
ಒಲ್ಲೆ ಎಂದವರನ್ನು ದಡಕ್ಕೆ ಎಸೆಯುತ್ತದೆ
ಆದರೆ ನೀವು ಕಾಮ್ರೇಡ್,
ಸಾಗರಕ್ಕಿದ್ದ ಅರ್ಥವನ್ನು ಬದಲಿಸಿದಿರಿ
ಒಲ್ಲೆ ಎಂದವರಿಗೂ ಕಾದು
ಜೊತೆ ಜೊತೆಗೇ
ಸಮುದ್ರ ನಡೆದ ಉದ್ದಕ್ಕೂ ಕರೆದೊಯ್ದಿರಿ

ಎಷ್ಟು ಜನ ಕಣ್ಣೀರು ಒರೆಸಿಕೊಂಡರು
ಕಾಮ್ರೇಡ್ ನೀವು ಹೆಗಲ ಮೇಲೆ
ಕೈ ಹಾಕಿದಾಗ
ಎಷ್ಟು ಜನ ಬಿಕ್ಕಿದರು
ಇಷ್ಟು ದಿನ ಯಾರಿಗೂ ಹೇಳಲಾಗದೆ
ಉಳಿಸಿಕೊಂಡ ಮಾತುಗಳನ್ನು
ನಿಮ್ಮ ಮುಂದೆ ಸುರಿದು

ಪ್ರತಿಯೊಬ್ಬರ ಎದೆಗೂ ಒಂದು
ಕದವಿರುತ್ತದೆ ಎಂದು ಹೇಗೆ
ಕಂಡುಕೊಂಡಿರಿ
ನೀವು
ಯಾರಿಗೂ ಹೇಳದೆ ಬಂದುಬಿಟ್ಟಿರಿ
ಬಾಗಿಲಿಗೆ
ಒಮ್ಮೆ ಬಂದ ನಿಮಗೆ ಮತ್ತೆ
ಯಾರಾದರೂ ಬಾಗಿಲು ಮುಚ್ಚಿದರೇ
ಹೇಳಿ?

ಎಲ್ಲರೊಳಗೂ ಒಂದು ಹಾರುವ
ರೆಕ್ಕೆಯಿದೆ
ಎಂದು ನಿಮಗೆ ತಿಳಿಸಿದವರು ಯಾರು?
ನಿಮ್ಮ ಒಂದು ನಗೆ
ಆ ರೆಕ್ಕೆಗಳಿಗೆ ಹಾರುವ ತಾಕತ್ತು
ಕೊಡುತ್ತದೆ
ಎಂದು ಹೇಳಿದ್ದು ಯಾರು ?
ಎಷ್ಟೊಂದು ಹಕ್ಕಿಗಳು ಹಾರುತ್ತಿವೆ
ನೋಡಿ ಮುಗಿಲಿನಲ್ಲಿ

ಯಾರು ಹೇಳಿದರು ಕಾಮ್ರೇಡ್
ನಿಮ್ಮೊಡನೆ ಮಾತನಾಡುವುದು
ಮುಗಿದಿತ್ತು ಎಂದು ?
ಯಾಕಿಷ್ಟು ಅವಸರ ಮಾಡಿದಿರಿ
ಎದೆಯ ಬಾಗಿಲು ಕಂಡವರು ನೀವು
ಕಾದು ಕುಳಿತಿದ್ದವರನ್ನು ಮರೆತಿರೇಕೆ?
ಹೌದು ಕಾಮ್ರೇಡ್,
ಇಗೋ ಇಲ್ಲಿ ನೋಡಿ
ಕುಡುಗೋಲು ಸುತ್ತಿಗೆಯ ಕೆಳಗೆ
ಎಷ್ಟೊಂದು ಜೀವಗಳು
ನಿಮಗಾಗಿ ಕಾದಿದ್ದಾವೆ
ಕಣ್ಣಲ್ಲಿ ಬೆಳಕು ಹೊತ್ತು

ಪ್ರತೀ ದಿನವೂ ಕಣ್ಣೀರು ತೊಡೆದವರು
ನೀವು
ಯಾಕೆ ಹೊರಟು ಬಿಟ್ಟಿರಿ ಹೀಗೆ
ಎಲ್ಲರ ಕಣ್ಣೊಳಗೆ ನೀರು ತುಂಬಿ

– ಜಿ.ಎನ್.ಮೋಹನ್

JANASHAKTHI KANNADA VARA PATRIKE SEP 23, 2012 Price : Rs. 5/- RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO



ಹದಿವಯಸ್ಸಿನ ಮಾವೋ ಕಂಡ ದಂಗೆಗಳು ಸನ್ ಯಾತ್ ಸೇನ್ ಮತ್ತು ಚೀನಾ ಕ್ರಾಂತಿ ಸಂಘ

ಜಿ.ಎನ್. ನಾಗರಾಜ್
ಭಾಗ-6

ಸನ್ ಯಾತ್ ಸೇನ್‌ರವರು ತಮ್ಮ ವೈದ್ಯಕೀಯ ವೃತ್ತಿಯನ್ನು ಬದಿಗಿಟ್ಟು ಚೀನಾದ ವಿಮೋಚನೆಯನ್ನೇ ತಮ್ಮ ಜೀವನದ ಗುರಿಯಾಗಿಸಿಕೊಂಡು ಜಪಾನಿನಲ್ಲಿ, ಹಾಂಗ್ ಕಾಂಗ್‌ನಲ್ಲಿ, ಅಮೇರಿಕದಲ್ಲಿ ಆಧುನಿಕ ವಿದ್ಯಾಭ್ಯಾಸ ಪಡೆಯುತ್ತಿದ್ದ ಚೀನಾದ ಸಾವಿರಾರು ವಿದ್ಯಾರ್ಥಿಗಳ ನಡುವೆ ಈ ಆಶಯವನ್ನು ಹರಡಿದರು. ಅದೇ ಸಮಯದಲ್ಲಿ ವಿದೇಶೀಯರ ದಬ್ಬಾಳಿಕೆ, ಸುಲಿಗೆ, ವಿದೇಶೀ ಆಮದು ವಸ್ತುಗಳಿಂದ ನಾಶವಾಗುತ್ತಿದ್ದ ಕುಶಲ ಕರ್ಮಿಗಳು, ಚೀನಾ ಸಾಮ್ರಾಟರು ಹೇರುತ್ತಿದ್ದ ಅಪರಿಮಿತ ತೆರಿಗೆಗಳು ಇವುಗಳಿಂದ ಕಂಗೆಟ್ಟಿದ್ದ ಜನತೆ ಅಲ್ಲಲ್ಲಿ ಗುಂಪುಗಳನ್ನು ರಚಿಸಿಕೊಂಡು ಸಾಮ್ರಾಜ್ಯಶಾಹಿ ವಿರೋಧೀ ಹೋರಾಟಗಳನ್ನು ನಡೆಸುತ್ತಿದ್ದರು. ಇಂತಹ ಅನೇಕ ಗುಂಪುಗಳಲ್ಲಿ ಹುನಾನ್ ರಾಜ್ಯದ ಹುವಾಂಗ್ ಶಿಂಗ್ ರೂಪಿಸಿದ ಗುಂಪು ಒಂದು ಬಹಳ ಪ್ರಮುಖವಾದದ್ದು. ಆಧುನಿಕ ವಿದ್ಯಾಭ್ಯಾಸದ ಜೊತೆಗೆ ಜಪಾನಿನಲ್ಲಿ ಆಧುನಿಕ ಸೈನ್ಯದ ತರಬೇತಿಯನ್ನೂ ಪಡೆದಿದ್ದ ಇವರು ಚೀನಾದಲ್ಲಿ ಸಾಮ್ರಾಟರ ಪ್ರಭುತ್ವವನ್ನು ಕಿತ್ತೊಗೆಯಲು ಹಲವು ರಾಜ್ಯಗಳಲ್ಲಿ ದಂಗೆಯೆಬ್ಬಿಸಿದವರು.

ಹೀಗೆ ಚೀನಾದ ಹೊರಗೆ ಹಾಗೂ ಒಳಗೆ ರೂಪುಗೊಂಡಿದ್ದ ಕ್ರಾಂತಿಕಾರಿ ಗುಂಪುಗಳನ್ನು ಸಭೆ ಸೇರಿಸಿ 1905ರ ಆಗಸ್ಟ್ ನಲ್ಲಿ ಚೀನಾ ಕ್ರಾಂತಿಕಾರಿ ಸಂಘ (ತೊಂಗ್ ಮೆಂಗ್ ಹುಯಿ) ವನ್ನು ಸ್ಥಾಪಿಸಿದರು. ಈ ಸಂಘ ಸನ್ ಯಾತ್ ಸೇನ್‌ರವರು ಪ್ರತಿಪಾದಿಸುತ್ತಿದ್ದ ಮೂರು ತತ್ವಗಳು : ರಾಷ್ಟ್ರೀಯತೆ (ಒಂದು ಸ್ವತಂತ್ರ ರಾಷ್ಟ್ರೀಯ ಸರ್ಕಾರದ ಸ್ಥಾಪನೆ), ಪ್ರಜಾಪ್ರಭುತ್ವ (ಪ್ರಜಾಸತ್ತಾತ್ಮಕ ಗಣರಾಜ್ಯ), ಜನರ ಜೀವನ (ಭೂ ಸುಧಾರಣೆಯ ಮೂಲಕ ಜನ ಜೀವನದ ಸುಧಾರಣೆ), ಇವುಗಳನ್ನು ಅಂಗೀಕರಿಸಿತು. ಈ ಕ್ರಾಂತಿಕಾರಿ ಸಂಘಟನೆಗೆ ಸನ್ ಯಾತ್ ಸೇನ್ ನಿರ್ದೇಶಕರಾದರೆ ಹುವಾಂಗ್ ಶಿಂಗ್ ಸೇನಾಧಿಪತಿಯಾದರು.



ಚೀನಾ ಪ್ರಜಾಸತ್ತಾತ್ಮಕ ಕ್ರಾಂತಿಯ ನೇತಾರ ಸನ್ ಯಾತ್ ಸೇನ್

1906ರ ಹುನಾನ್ ದಂಗೆ

ಹುನಾನ್‌ನಲ್ಲಿ 1906ರಲ್ಲಿ ತೀವ್ರವಾದ ಕ್ಷಾಮ. ಹುನಾನ್‌ನ ರಾಜಧಾನಿ ಚಾಂಗ್ ಶಾದಲ್ಲಿ, ಹುನಾನ್‌ನ ಕಲ್ಲಿದ್ದಲು ಗಣಿಗಳಲ್ಲಿ ಸಾವಿರಾರು ಜನ ಹಸಿವೆಯಿಂದ ಬಳಲುತ್ತಿದ್ದರು. ಇವರು ಹುನಾನ್‌ನ ರಾಜ್ಯಪಾಲನ ಅರಮನೆಗೆ ಹೋಗಿ ತಮ್ಮ ಸಂಕಟವನ್ನು ನಿವೇದಿಸಿಕೊಂಡರೆ ಅವ ಏನು ಹೇಳಬೇಕು ? "ನಿಮಗೇಕೆ ಆಹಾರ ಇಲ್ಲ. ಚಾಂಗ್ ಶಾ ನಗರದಲ್ಲಿ ಯಥೇಚ್ಚವಾಗಿದೆ. ನನಗಂತೂ ಸಾಕಾಗುವಷ್ಟು ಸಿಗುತ್ತಿದೆ" ಎಂದನಂತೆ. ಈ ಉತ್ತರವನ್ನು ಕೇಳಿದ ಜನತೆ ಸಿಟ್ಟಿಗೆದ್ದರು. ಸಭೆಗಳನ್ನು ಸಂಘಟಿಸಿದರು. ಸನ್ ಯಾತ್ ಸೇನ್‌ರ ಚೀನಾ ಕ್ರಾಂತಿಕಾರಿ ಸಂಘದ ನಾಯಕನಾಗಿದ್ದ ಕ್ರಾಂತಿಕಾರಿ ಹುವಾಂಗ್ ಶಿಂಗ್ ನೇತೃತ್ವದಲ್ಲಿ ದಂಗೆಯೆದ್ದರು. ಇದಕ್ಕೆ ಇನ್ನೂ ಜೀವಂತವಾಗಿದ್ದ ರೈತರ ರಹಸ್ಯ ಕೂಟಗಳು ಕೂಡ ಸೇರಿಕೊಂಡವು. ಹೀಗೆ ಗಣಿ ಕಾರ್ಮಿಕರು, ನಗರದ ಜನತೆ, ರೈತರು ಸಾವಿರಾರು ಜನ ಚಾಂಗ್ ವಶದಲ್ಲಿದ್ದ ರಾಜ್ಯಪಾಲನ ಅರಮನೆಯ ಕಡೆಗೆ ನುಗ್ಗಿದರು. ಅವನ ಆಡಳಿತದ ಸಂಕೇತವಾಗಿದ್ದ ಧ್ವಜ ಸ್ಥಂಭವನ್ನು ಕಡಿದು ಹಾಕಿದರು. ಅಕ್ಕಿಯನ್ನು ಕದ್ದಿರಿಸಿದ್ದ ಕಾಳಸಂತೆಕೋರರ ಗೋದಾಮುಗಳ ಮೇಲೆ ಧಾಳಿ ಮಾಡಿದರು. ಈ ಸುದ್ದಿ ತಿಳಿದ ಚೀನಾ ಸಾಮ್ರಾಟ ಕಳುಹಿಸಿದ ಸೈನ್ಯದ ತುಕಡಿಗಳು ಜನತೆಯನ್ನು ಚೆಂಡಾಡಿದವು. ಜನರಲ್ಲಿ ಹೆದರಿಕೆಯನ್ನುಂಟು ಮಾಡಲು ಮುಂದಿನ ಹೊಸ ವರ್ಷದ ದಿನದವರೆಗೂ ದಂಗೆಕೋರರ ರುಂಡಗಳನ್ನು ನಗರದ ಹೆಬ್ಬಾಗಿಲುಗಳ ಮೇಲೆ ನೇತಾಡಿಸಿದರು.

ಈ ಧೀರ ಹೋರಾಟದ ಹಾಗೂ ಅದರ ಮೇಲಿನ ಕ್ರೌರ್ಯದ ಕಥೆಗಳು ಹುನಾನ್‌ನ ಮೂಲೆ ಮೂಲೆಗೆ ಹಬ್ಬಿದವು. ತಮ್ಮ ಊರಿನ ಪಕ್ಕದಲ್ಲಿದ್ದ ಪಟ್ಟಣದಲ್ಲಿ ಶಾಲೆಯಲ್ಲಿದ್ದ ಮಾವೋ ಮತ್ತು ಜೊತೆಯ ವಿದ್ಯಾರ್ಥಿಗಳು ಒಂದು ದಿನ ಇದ್ದಕ್ಕಿದ್ದಂತೆ ಗುಂಪು ಗುಂಪಾಗಿ ಧಾನ್ಯ ವ್ಯಾಪಾರಿಗಳು ಚಾಂಗ್ ಶಾ ನಗರದಿಂದ ಓಡಿ ಬರುತ್ತಿರುವುದನ್ನು ನೋಡಿದರು. ಅವರನ್ನು ವಿಚಾರಿಸಿದಾಗ ನಗರದಲ್ಲಿನ ದೊಡ್ಡ ದಂಗೆಯ ಬಗೆಗೆ ತಿಳಿಸಿದರು. ಈ ಬಗ್ಗೆ ಸ್ವತಃ ಮಾವೋರವರೇ ಹೀಗೆ ಬರೆದಿದ್ದಾರೆ. "ಈ ಘಟನೆ ನಮ್ಮ ಶಾಲೆಯಲ್ಲಿ ಬಹಳ ದಿನಗಳ ಚರ್ಚೆಗೊಳಗಾಯಿತು. ನನ್ನ ಸಹಪಾಠಿಗಳಿಗೆ ಇದೊಂದು ಉದ್ರೇಕಕಾರಿ ವಿಷಯವಾಗಿತ್ತು. ಅವರು ದಂಗೆಕೋರರ ಬಗ್ಗೆ ಸಹಾನುಭೂತಿ ಹೊಂದಿದ್ದರೂ ಅದು ಕೇವಲ ಹೊರ ನಿಂತ ವೀಕ್ಷಕರ ಮನೋಭಿತ್ತಿಯದಾಗಿತ್ತು. ತಮ್ಮ ಬದುಕಿಗೂ ಇದಕ್ಕೂ ಇರುವ ಸಂಬಂಧದ ಬಗ್ಗೆ ಅವರಿಗೆ ಕಲ್ಪನೆಯಿರಲಿಲ್ಲ. ಆದರೆ ಈ ದಂಗೆ ನನ್ನ ಮೇಲೆ ಆಳವಾದ ಪರಿಣಾಮವನ್ನುಂಟುಮಾಡಿತು. ನನಗೆ ಅದನ್ನೆಂದೂ ಮರೆಯಲಾಗಲಿಲ್ಲ. ದಂಗೆಕೋರರು ನನ್ನ ಕುಟುಂಬದವರಂತೆಯೇ ಸಾಮಾನ್ಯ ಜನರು ಎನ್ನಿಸಿತು. ಅವರ ಮೇಲೆ ಎಸಗಲಾದ ಧೌರ್ಜನ್ಯ ನಾನು ತೀವ್ರವಾಗಿ ದ್ವೇಷಿಸಿದೆ. "


ಮಾವೋರ ಊರಿನಲ್ಲಿಯೇ ರಹಸ್ಯ ಕೂಟದ ಪ್ರತಿಭಟನೆ

ಇದಾದ ಕೆಲ ಸಮಯದಲ್ಲಿಯೇ ಮಾವೋರವರ ಸ್ವಂತ ಗ್ರಾಮವಾದ ಶಾವೋ ಶಾನ್‌ನಲ್ಲಿಯೇ ಅಲ್ಲಿಯ ಭೂ ಮಾಲಕನೊಬ್ಬನಿಗೂ ಅವನ ಜಮೀನಿನ ಗೇಣಿದಾರ ರೈತರಿಗೂ ಗೇಣಿ ಪಾವತಿ ಬಗ್ಗೆ ಜಗಳವಾಯಿತು. ಈ ಗೇಣಿದಾರ ರೈತರು "ಗೆ ಲಾವೊ ಹುಯಿ" ಎಂಬ ಈ ಮೇಲೆ ವಿವರಿಸಲಾದ ರಹಸ್ಯ ಕೂಟವೊಂದರ ಸದಸ್ಯರು. ಈ ರಹಸ್ಯ ಕೂಟ ಹುನಾನ್ ಸೇರಿದಂತೆ ಸುತ್ತಮುತ್ತಲ ಮೂರು ರಾಜ್ಯಗಳಲ್ಲಿ ಹಬ್ಬಿದ್ದ ರಹಸ್ಯ ಕೂಟ. ಮುಂದೆ 1911ರ ಕ್ರಾಂತಿಯಲ್ಲಿ ಮಹತ್ವದ ಪಾತ್ರ ವಹಿಸಿದ ಕೂಟ ಇದು. ಈ ರಹಸ್ಯ ಕೂಟದ ಸದಸ್ಯರಾಗಿದ್ದ ಗೇಣಿದಾರರ ವಿರುದ್ಧ ಜಮೀನುದಾರ ಕೋರ್ಟ್ ಮೇಲೆ ಪ್ರಭಾವ ಬೀರಿ ಒಂದು ತೀರ್ಪನ್ನು ಪಡೆದ. ಅದನ್ನು ವಿರೋಧಿಸಿ ರೈತರು ಊರ ಪಕ್ಕದ ಗುಡ್ಡಗಳನ್ನು ಸೇರಿದರು. ಆ ಭೂಮಾಲಕ ಈ ರೈತರು ಒಂದು ಮಗುವನ್ನು ಬಲಿ ಕೊಟ್ಟಿದ್ದಾರೆಂದು ಸುದ್ದಿ ಹಬ್ಬಿಸಿದ. ನಂತರ ಅವರನ್ನು ದಮನ ಮಾಡಿದರು. ಅವರ ಮುಖಂಡನಾಗಿದ್ದ ಬೀಸುಕಲ್ಲುಗಳ ತಯಾರಕನಾದ ಕುಶಲ ಕರ್ಮಿಯೊಬ್ಬನನ್ನು ಕೊಲ್ಲಲಾಯಿತು. ಅವನನ್ನು ಎಲ್ಲರೂ ಹೀರೋ ಎಂಬಂತೆಯೇ ಗೌರವಿಸಿದರು. ತಮ್ಮ ಊರಿನಲ್ಲಿಯೇ ನಡೆದ ಈ ಅಮಾನುಷ ಕೃತ್ಯ ಕೂಡ ಮಾವೋರ ಮೇಲೆ ಪರಿಣಾಮ ಬೀರಿದ ಒಂದು ಮುಖ್ಯ ಘಟನೆ.

ದುಡ್ಡು ಕೊಡದೆ ಅನ್ನ ತಿನ್ನಿ

ಈ ಘಟನೆಗಳ ಮುಂದಿನ ವರ್ಷ ಅಕ್ಕಿಯ ಕೊರತೆಯುಂಟಾಯಿತು, ಆದರೂ ಲಾಭಕೋರ ಭೂ ಮಾಲಕರು ಹಾಗೂ ವ್ಯಾಪಾರಿಗಳು ಅಕ್ಕಿಯನ್ನು ನಗರಗಳಿಗೆ ಸಾಗಿಸುತ್ತಲೇ ಇದ್ದರು. ಆಗ ರೈತ ಮತ್ತಿತರ ದುಡಿಯುವ ಜನತೆ "ನಾವೆಲ್ಲ ದೊಡ್ಡ ಮನೆಯಲ್ಲಿ ಊಟ ಮಾಡೋಣ" ಎಂಬ ಚಳುವಳಿ ಮಾಡಿದರು. ಅಂದರೆ ಭೂ

ಪುಟ 15ಕ್ಕೆ



ಪ್ರೀತಿಯ ಮಾಸ್ಟ್ರು
ಕಾಂ. ಪಿ.ರಾಮಚಂದ್ರರಾವ್ ನಮ್ಮನ್ನಗಲಿ ಸೆಪ್ಟೆಂಬರ್ 18, 2012 ಕ್ಕೆ 14 ವರ್ಷಗಳಾಗುತ್ತವೆ. ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಗಳು, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರು, ಉಳ್ಳಾಲ ಕ್ಷೇತ್ರದ ಶಾಸಕರೂ ಆಗಿ ಹಾಗೂ ಕರ್ನಾಟಕ ರಾಜ್ಯದ ಕಮ್ಯೂನಿಸ್ಟ್ ಚಳುವಳಿಯ ಪ್ರಮುಖ ಮುಖಂಡರಾಗಿ ಕಾಂ. ಪಿ.ಆರ್. ವಹಿಸಿದ ಮಹತ್ವದ ಪಾತ್ರವನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳೋಣ.

"ಮಾತನಾಡುವುದು ಮುಗಿದಿತ್ತು ಎಂದು ಹೇಳಿದವರು ಯಾರು?"

ಜಿ.ಎನ್.ಮೋಹನ್‌ರವರ ಕವನ
ಪುಟ 15 ರಲ್ಲಿ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH